
ಶ್ರೀ ವೀರಭದ್ರೇಶ್ವರ ಪ್ರಸನ್ನ:



ಭಜನಾ ಪದಗಳು
ಮತ್ತು
ಮಂಗಳಾರತಿ ಪದಗಳು



ಶ್ರೀ ವೀರಭದ್ರೇಶ್ವರ ಭಜನಾ ಸಂಘ (ರಿ) ಕಾರೇಕಲ್ಲು

ಭಜನೆಯ ಮಹತ್ವ

ಭಜನೆಯು ಮನಸ್ಸಿನ ಗುನುಗುಟ್ಟುವಿಕೆಯ ಆವೇಶದಿಂದ ನಾದದ ತರಂಗಗಳು ರೂಪಾಂತರಗೊಳ್ಳುವುದೇ ಭಜನೆಯ ಹುಟ್ಟಿಗೆ ಕಾರಣವಾಗುತ್ತದೆ. ಭಕ್ತಿಯ ಪ್ರಕಟಣೆ ಭಜನೆಯಿಂದಾದರೆ, ಭಕ್ತಿಯೆಂಬುವುದು ನಮಗಿಂತ ಶ್ರೇಷ್ಠವಾದ ಶಕ್ತಿಯ ಮೇಲೆ ಇರುವ ನಂಬಿಕೆ. ನಂಬಿಕೆಯಿಂದಲಾಗಿ ಆ ಶಕ್ತಿಗೆ ಅಧೀನ. ಹಾಗಾಗಿ ನಮ್ಮ ಇಷ್ಟಾರ್ಥಗಳು ಸಾಕಾರಗೊಳ್ಳುವುದು. ಭಾವಪರವಶರಾಗಿ ಧ್ಯಾನದಿಂದ ಅಂತರ್ಮುಖಿಗಳಾಗಿ ಜೀವಾತ್ಮ ಮತ್ತು ಪರಮಾತ್ಮನ ನಡುವೆ ಅನುಸಂಧಾನಗೊಳ್ಳುವುದಕ್ಕಾಗಿ ಸಂಪರ್ಕ ಸಾಧಿಸುವುದೇ ಭಕ್ತಿ ಮಾರ್ಗ. ಕಲಿಯುಗದಲ್ಲಿ ಭಗವಂತ ಭಜನೆಗೆ ಒಲಿಯುತ್ತಾನೆ. ಅರ್ಥಾತ್ ನಾಮ ಸ್ಮರಣೆಯೇ ದೇವರ ಒಲುಮೆಯ ದಿವ್ಯ ಮಂತ್ರ ಹಾಗಾಗಿ ಭಜನೆ ಎಂದರೆ ಭಗವಂತನ ಒಲಿಸುವುದರ ಜೊತೆ ಸಂಪ್ರೀತಿಗೊಳಿಸಿ, ಮನುಷ್ಯ ಮನಸ್ಸುಗಳ ನಡುವೆ ಭಕ್ತಿ ಭಾವದ ಧಾರ್ಮಿಕತೆ, ನೈತಿಕತೆ ಮೂಡಿಸುವಲ್ಲಿ, ಬ್ರಹ್ಮಾಸ್ತ್ರದ ಕರ್ತವ್ಯ ನೆರವೇರಿಸುತ್ತದೆ. ಭಜನೆ ಎನ್ನುವುದು ಭಗವಂತನ ಸ್ತುತಿ ಗೀತೆ, ಪದಗಳ ಮೂಲಕ ಇದನ್ನು ಪೋಣಿಸಿ, ಭಾವಕ್ಕೆ ರಾಗ ಬೆರೆತಾಗ ನಾವೆಲ್ಲರೂ ಅದರ ತಾಳದ ಮೋಡಿಯೊಂದಿಗೆ ಸಂಗೀತದಲ್ಲಿ ಮೈಮರೆತು ಭಗವಂತನ ನಾಮ ಸ್ಮರಣೆ ಮಾಡುತ್ತೇವೆ. ತನ್ಮೂಲಕ ದೇವರೆಡೆಗೆ ಚಿತ್ರವನ್ನ ಹರಿಯಬಿಡುತ್ತೇವೆ. ಪರಮಾತ್ಮನಲ್ಲಿ ಪರಮ ಆತ್ಮವನ್ನು ಕಂಡು ಧ್ಯಾನಾಸಕ್ತರಾಗಿ ಏಕಾಗ್ರತೆಯನ್ನು ಸಾಧಿಸುತ್ತೇವೆ. ಹೀಗಾಗಿ ಭಜನೆಯೆಂದರೆ ಭಗವಂತನ ಧ್ಯಾನವೂ ಹೌದು, ತಪಸ್ಸೂ ಹೌದು.

ಸಂಗೀತ ಎಂಬ ದೇವತಾರಾಧನೆ ಕಲೆಯ ಮೊದಲ ಮೆಟ್ಟಿಲು ಭಜನೆ. ಇಡೀ ಊರು ಭಜನೆಯ ಪ್ರಭಾವಕ್ಕೆ ಒಳಗಾದರೆ ದುಶ್ಚಟ, ದುರ್ವಿಚಾರ ವ್ಯಸನಮುಕ್ತ ಸಮಾಜ ನಿರ್ಮಾಣವಾಗುತ್ತದೆ. ಜೊತೆಗೆ ಭಕ್ತಿ ತನ್ಮಯತೆಯಿಂದ ದಿನವೂ ದೇವರ ನಾಮ ಹಾಡುವುದರಿಂದ ನಮ್ಮ ಮನಸ್ಸು ಸಾತ್ವಿಕತೆಯ ಆ ಒಂದು ಮಾರ್ಗವನ್ನು ಸಾಗುತ್ತದೆ. ಜೀವನ ಉಲ್ಲಾಸದಿಂದ ತುಡಿಯುತ್ತದೆ. ಬಾಳು ಸಾರ್ಥಕತೆಯನ್ನು ಪಡೆಯುತ್ತದೆ. ಜನ ಸಾಮಾನ್ಯರನ್ನು ಉನ್ನತ ಧ್ಯೈಯದತ್ತ, ಸಾರ್ಥಕ ಜೀವನದತ್ತ ದೈವೀ ಚಿಂತನೆಗಳತ್ತ ಮತ್ತು ಕೌಟುಂಬಿಕ, ಸಾಮಾಜಿಕ ವಲಯಗಳಲ್ಲಿ ಸ್ನೇಹ-ವಿಶ್ವಾಸದ ಆತ್ಮೀಯ ವಾತಾವರಣ ನಿರ್ಮಿಸಿಕೊಂಡಲ್ಲಿ, ಭಕ್ತರಿಗೆ ಭಜನೆ ಭಗವಂತ ಒದಗಿಸಿದ ವರದಾನವಾಗುತ್ತದೆ. ಭಕ್ತಿಯಿಂದ ಭಗವಂತನನ್ನು ಹಾಡಿ, ಕೊಂಡಾಡಿ, ಲಜ್ಜೆ ಬಿಟ್ಟು ಕುಣಿದರೆ ಭಗವಂತ ಅನುಗ್ರಹಿಸುತ್ತಾನೆ. ಭಕ್ತರಿಗೆ ಭಗವತ್ ದರ್ಶನವೇ ಜೀವನದ ಗುರಿ, ಅಗೋಚರನಾದ ಆದರೆ ಸಕಲ ಜೀವರಾಶಿಗಳ ಸೃಷ್ಟಿ-ಸ್ಥಿತಿ-ಲಯಗಳ ನಿಯಂತ್ರಕನಾದ ಭಗವಂತ ಕೇವಲ ಸ್ತುತಿಗೆ ಒಲಿಯುವುದಾದರೆ, ಮುಕ್ತಿ ಒದಗಿಸುವುದಾದರೆ ಮತ್ತಿನ್ನೇಕೆ ತಡ? “ಶಿವನಾಮ ಸ್ಮರಿಸೋ ಈ ಭವ ಬಾಧೆಯ ಪರಿಹರಿಸೋ” ಎಂದು ಭಗವಂತನ ಸ್ಮರಣೆ ಮಾಡಿ ಭವ ಬಂಧನ ಪಾಶದಿಂದ ಮುಕ್ತರಾಗೋಣ.

ಪರಿವಿಡಿ

ವಿಘ್ನೇಶ್ವರ

ಗುರು ಸ್ಮರಣೆ

ಶಿವ ಗೀತೆ

17. ಶಿವನಾಮ ಸ್ಮರಿಸೋ

18. ಶಿವ ಎನ್ನು ಪ್ರಾಣಿ

19. ನುಡಿ ಮನವೇ ಶಿವನ ನಾಮಾವಳಿ

20. ಕಂಡೆ ಕರುಣಾನಿಧಿಯ

21. ಬಿಲ್ವ ಪತ್ತರೆಯಾಗಬೇಕಣ್ಣ

22. ಶಿವ ಶಿವ ಎಂದರೆ ಭಯವಿಲ್ಲ

23. ಓಂ ನಮಃ ಶಿವಮಂತ್ರ ನುಡಿ ನುಡಿ

24. ಕಾಶಿಯಿಂದ ಬಂದನಿಲ್ಲಿ ವಿಶ್ವನಾಥ

25. ನಂಬಿದೆ ನಿನ್ನ ನಾಗಾಭರಣ

26. ಆಹಾ ಎಂಥಾ ದಿವ್ಯ ಕ್ಷೇತ್ರವು

27. ಸದಾಶಿವನ ಭಜನಾ

28. ಮಾತಾಡು ಮಾತಾಡು ಲಿಂಗವೇ

29. ನಮೋ ಭೂತನಾಥ

30. ಈ ದೇಹದಿಂದ ದೂರನಾದೆ ಏಕೆ ಆತ್ಮನೆ ?

31. ಕಂಡೆನಾ ಫಣಿ ಭೂಷಣ

32. ಎಲ್ಲವೂ ಶಿವನೆಂದು ನಂಬಿದ ಮೇಲೆ

33. ಧರ್ಮವೇ ಮರೆಯಾಯಿತಯ್ಯಾ

34. ಯಾರು ಬಿಟ್ಟರೆ ಕೈಯ್ಯಾ ನೀ ಕೈಯ್ಯ ಬಿಡಬೇಡ

35. ಶಂಕರ ಶಶಿಧರ ಗಜಚರ್ಮಾಂಬರ

36. ಮಲ್ಲಯ್ಯ ಮಲ್ಲಯ್ಯ ಶ್ರೀಗಿರಿ

37. ಶಿವ ದರುಷನ ಎಮಗಾಯಿತು

38. ಮಲ್ಲಯ್ಯ ಶ್ರೀಶೈಲ ಮಲ್ಲಯ್ಯ

39. ಶ್ರೀಶೈಲ ವಾಸ ಶ್ರೀಮಲ್ಲಿನಾಥ

40. ಅಚ್ಚ ಮಲ್ಲಿಗೆ ಹೂವ ಮೆಚ್ಚಿಕೊರೋ ಮಲ್ಲಯ್ಯ

41. ಮಾಡಿರಿ ಮಲ್ಲಯ್ಯನ ಧ್ಯಾನ

42. ನೀಡು ಶಿವ ನೀಡದಿರು ಶಿವ

43. ಶಿವನು ಭಿಕ್ಷಕ್ಕೆ ಬಂದ ನೀಡುಬಾರೆ ತಂಗಿ

44. ಶಿವಪ್ಪ ಕಾಯೋ ತಂದೆ

ವೀರಭದ್ರೇಶ್ವರ

45. ಬಾರಯ್ಯ ವೀರೇಶ ಬಾ ನನ್ನ ತಂದೆ
46. ಭಕ್ತರ ದೈವ ವೀರಭದ್ರ
47. ವೀರಭದ್ರ ವೀರಭದ್ರ ಎನ್ನಿರಿ
48. ಧೀರಾಯೋಗಿ ವೀರೇಶ್ವರನ
49. ಶರಣು ಶರಣು ವೀರಭದ್ರ
50. ಓ ವೀರಭದ್ರ ಜಯ ವೀರಭದ್ರಾ
51. ವರ ವೀರೇಶನು ಬಂದ ವಿಜೃಂಭಣೆಯಿಂದ
52. ಶಿವಲೋಕದಿಂ ಬಂದ ಶ್ರೀವೀರಭದ್ರೇಶ
53. ನೋಡಿ ಭೂಲೋಕದ ಗಂಡ ಬಂದ
54. ಬಳ್ಳಾರಿ ಜಿಲ್ಲೆಯ ಕಾರೇಕಲ್ಲು ಗ್ರಾಮದಲ್ಲಿ

ಹರಿನಾಮ ಸ್ಮರಣೆ

55. ದಯಮಾಡೋ ರಂಗ ದಯಮಾಡೋ ಕೃಷ್ಣ
56. ಜಯತು ಜಯ ವಿಠ್ಠಲ
57. ಜಯ ಪಾಂಡುರಂಗ ಪ್ರಭೋ ವಿಠ್ಠಲಾ
58. ಕಾಪಾಡು ಶ್ರೀ ಸತ್ಯನಾರಾಯಣ
59. ತನು ನಿನ್ನದೋ ಸ್ವಾಮಿ
60. ನಾರಾಯಣನೆಂಬ ನಾಮದ ಬೀಜವ
61. ಯಾರಿಗೆ ಯಾರುಂಟು ಎರವಿನ ಸಂಸಾರ
62. ಮಾನವ ಜನ್ಮ ದೊಡ್ಡದು
63. ನಾನೇಕೆ ಬಡವನು ನಾನೇಕೆ ಪರದೇಶಿ
64. ನೀನ್ಯಾಕೊ ನಿನ್ನ ಹಂಗ್ಯಾಕೋ

65. ಅಂಬಿಗಾ ನಾ ನಿನ್ನ ನಂಬಿದೆ

66. ಹರಿ ಕುಣಿದಾ ನಮ್ಮ ಹರಿ ಕುಣಿದಾ

67. ದೇವ ಬಂದ ನಮ್ಮ ಸ್ವಾಮಿ

68. ಹೇ.... ಶೇಷ ಶಯನ ನಾರಾಯಣ

69. ಶ್ರೀಧರ ಕೇಶವ ನಾರಾಯಣ

70. ಹಿಗ್ಗುವೆ ಏತಕೋ, ಈ ದೇಹಕ್ಕೆ

71. ಅಂಜಿಕಿನ್ಯಾತಕಯ್ಯ ಸಜ್ಜನರಿಗೆ

72. ಭಾಗ್ಯದ ಲಕ್ಷ್ಮಿ ಬಾರಮ್ಮ ನಮ್ಮಮ್ಮ ನೀ

73. ದೇವರ ಮನೆಯಿದು ಈ ಜಗವೆಲ್ಲ

74. ಜಗದ ಪಾಲಕನೇ ದೇವ

75. ಆದಿಶೇಷಾ ಅನಂತಶಯನ

76. ಕೊಡುವ ಕರ್ತೃ ಬೇರೆ

77. ದೇವಾ ಹೇ ದೇವಾ

78. ಮುನಿದ್ಯಾಕೋ ತಂದೆ ಮಳೆರಾಯ

79. ದೇವರೇ ನೀನು ನಿಜವಪ್ಪ

ಶ್ರೀ ದೇವಿ ಭಕ್ತಿಗೀತೆಗಳು

ಶಿವಶರಣರ ಗೀತೆ

103. ನಿನ್ನ ಕಂಡು ಧನ್ಯನಾದೇನೋ

104. ಸಿದ್ಧಾರೂಢ ಸದ್ಗುರು ತಂದೆ ಉದ್ಧಾರಾದೆವು ನಿನ್ನಿಂದೆ

105. ವಾರ ಬಂತಮ್ಮ ಗುರುವಾರ ಬಂತಮ್ಮ

106. ಮಂತ್ರಾಲಯಕೆ ಹೋಗೋಣ

107. ಒಂದು ಸಾರಿ ಬಂದುನೋಡು ಮರೆಯದು ಜೀವ

108. ಎಲ್ಲಿ ನಿನ್ನ ಭಕ್ತರೋ ಅಲ್ಲೇ ಮಂತ್ರಾಲಯ

ಜಾನಪದ

109. ಸಾವಾಲೊಂದು ನಿನ್ನ ಮ್ಯಾಲ

110. ತರವಲ್ಲ ತಗಿ ನಿನ್ನ ತಂಬೂರಿ

111. ಕೋಡಗನ ಕೋಳಿ ನುಂಗಿತ್ತಾ

112. ಚನ್ನಪ್ಪ ಚನ್ನಗೌಡ

113. ಏನು ಕೊಡ ಏನು ಕೊಡವಾ

114. ಹುಟ್ಟಿದ್ದು ಹೊಲಮನಿ

115. ತಾಯಿ ಸತ್ತಮೇಲೆ ತವರು ಮನೆಗೆ

116. ಸುಮ್ಮನಿರಬೇಕು ಶರಣಾದ ಮೇಲೆ

117. ಒಲ್ಲೆನಮ್ಮ ನಾನು ಗಂಡನ್ನ

118. ತಾಯಿ ನಿನ್ನ ಉಪಕಾರವನು

119. ತಂದೆ ತಾಯಿ ದೇವರೆಂದು

120. ಎಲ್ಲರೂ ಕೇಳಿರಿ ಜನರೋ ನಿಜ

121. ಊರಿಗೆ ಹೋಗೋಣ ಬಾರಣ್ಣ

122. ಮನೆಯೇ ಗುಡಿಯಮ್ಮ

123. ಯಾಕೆ ಬಡಿದಾಡ್ತಿ ತಮ್ಮ ಮಾಯಾ ಮೆಚ್ಚಿ

124. ಹಣೆಯ ಮೇಲೆ ಕುಂಕುಮ

125. ಯಾಕ ಚಿಂತಿ ಮಾಡತಿದ್ದಿ ಎಲೆ ಮನವೇ

126. ಕಷ್ಟ ಸುಖವು ದೇವರ ಲೀಲೆ

127. ತಂಗಿ ಶೃಂಗಾರ ನೋಡಮ್ಮ

128. ಒಕ್ಕಲ ಮಗ ಒಳ್ಳೆತನಮ್ಮ

ಮಂಗಳಾರತಿ

129. ಮಂಗಳಂ ಮಹೇಶ ಈಶ ಭಂಗ ಸುಮಶರಾ

130. ಜ್ಯೋತಿ ಬೆಳಗುತಿದೆ

131. ಓಂ ಮಂಗಳಂ ಓಂಕಾರ ಮಂಗಳಂ

132. ಶಿವ ಮಂಗಳವನು ಕೊಡಬೇಗ

133. ಜಯವೆಂದು ಬೆಳಗುವೆ ಮಲ್ಲಿಕಾರ್ಜುನನೇ

134. ಜ್ಞಾನ ಪೂರ್ಣಂ ಜಾಗಂ ಜ್ಯೋತಿ|

135. ಮಂಗಲಂ ಜಯ ಜಯತೆ

136. ಲಿಂಗಾಷ್ಟಕಂ

01. ಗಜವದನ ಬೇಡುವೆ ಗೌರಿ ತನಯ

ಗಜವದನ ಬೇಡುವೆ ಗೌರಿ ತನಯ
ತ್ರಿಜಗ ವಂದಿತನೆ ಸುಜನರ ಪೊರೆವನೆ ॥ ಪ ॥

ಪಾಶಾಂಕುಶಧರ ಪರಮ ಪವಿತ್ರ
ಮೂಷಕ ವಾಹನ ಮುನಿಜನ ಪ್ರೇಮ ॥ ೧ ॥

ಮೋದದಿ ನಿನ್ನಯ ಪಾದವ ತೋರೊ
ಸಾಧುವಂದಿತನೆ ಆದರದಿಂದಲಿ ॥ ೨ ॥

ಸರಸಿಜನಾಭ ಶ್ರೀ ಪುರಂದರ ವಿಠ್ಠಲನ
ನಿರತ ನೆನೆಯುವಂತೆ ವರ ದಯಮಾಡೋ ॥ ೩ ॥

02. ಗಜಮುಖನೆ ಗಣಪತಿಯೇ

ಶ್ಲೋಕ: ಶುಕ್ಲಾಂಬರಧರಂ ವಿಷ್ಣುಂ |
ಶಶಿವರ್ಣಂ ಚತುರ್ಭುಜಂ |
ಪ್ರಸನ್ನ ವದನಂ ಧ್ಯಾಯೇತ್ |
ಸರ್ವ ವಿಘ್ನೋಪಶಾಂತಯೆ ||

ಗಜಮುಖನೇ ಗಣಪತಿಯೇ ನಿನಗೆ ವಂದನೆ |
ನಂಬಿದವರ ಬಾಳಿನ ಕಲ್ಪತರು ನೀನೆ || ಪ ||

ಭಾದ್ರಪದ ಶುಕ್ಲದ ಚೌತಿಯಂದು |
ನೀ ಮನೆಮನೆಗೂ ದಯಮಾಡಿ ಹರಸು ಎಂದು |
ನಿನ್ನ ಸನ್ನಿಧಾನದಿ ತಲೆಬಾಗಿ ಕೈಯ್ಯ ಮುಗಿದು |
ಬೇಡುವಾ ಭಕ್ತರಿಗೆ ನೀ ದಯಾಸಿಂಧು || ೧ ||

ಈರೇಳು ಲೋಕದ ಅಣುಅಣುವಿನ |
ಇಹಪರದ ಸಾಧನಕೆ ನೀ ಕಾರಣ |
ನಿನ್ನೊಲುಮೆ ನೋಟದ ಒಂದು ಹೊನ್ನ ಕಿರಣ |
ನೀಡಿದರೆ ಸಾಕಯ್ಯ ಜನ್ಮ ಪಾವನ || ೨ ||

ಪಾರ್ವತಿ ಪರಶಿವನ ಪ್ರೇಮಪುತ್ರನೆ |
ಪಾಲಿಸುವ ಪರದೈವ ಬೇರೆ ಕಾಣೆ |
ಪಾಪದ ಪಂಕದಲಿ ಪದುಮ ಎನಿಸು ಎನ್ನ |
ಪಾದಸೇವೆಯೊಂದೇ ಧರ್ಮ ಸಾಧನ || ೩ ||

03. ದೇವ ಗಣನಾಯಕ ವಿನಾಯಕ

ದೇವ ಗಣನಾಯಕ ವಿನಾಯಕ
ಮೂಷಿಕ ವಾಹನ ದೋಷ ವಿನಾಶ || ಪ ||

ಕುಂಜಾ ರೂಪಾಕಾರ ಗಿರಿಕನ್ಯ ಕುವರ
ಸಂಗೀತಕಾಧಾರ ನೀ ಬಹು ಶೃಂಗಾರ
ನೀ ಬಂದು ದಯತೋರು ಗೌರಿಕುಮಾರ || ೧ ||

ಕರುಣಾ ದಯಾಸಾರ ಬಹುಯುಕ್ತಿ ಆಗರ
ದುರಿತ ದುರ್ಗುಣ ದೂರ ಪಾಶಾಂಕುಶಧರ
ಪೊರೆಯೋ ನೀ ಭಜಕಾರ ಶ್ರೀ ವಿಘ್ನೇಶ್ವರ || ೨ ||

04. ಶರಣು ಸಿದ್ಧಿವಿನಾಯಕ

ಶರಣು ಸಿದ್ಧಿವಿನಾಯಕ
ಶರಣು ವಿದ್ಯಾಪ್ರದಾಯಕ || ಪ ||

ಶರಣು ಪಾರ್ವತಿ ತನಯ ಮೂರುತಿ
ಶರಣು ಮೂಷಿಕ ವಾಹನ ||ಅನು||

ನಿಟಿಲ ನೇತ್ರನ ದೇವಿ ಸುತನೆ
ನಾಗಭೂಷಣ ಪ್ರಿಯನೆ |
ತಟಿಲತಾಂಕಿತ ಕೋಮಲಾಂಗನೆ
ಕರ್ಣಕುಂಡಲಧಾರನೆ || ೧ ||

ಬಟ್ಟ ಮುತ್ತಿನ ಪದಕಹಾರನೆ
ಬಾಹುಹಸ್ತ ಚತುಷ್ಟನೆ |
ಇಟ್ಟ ತೊಡುಗೆಯ ಹೇಮ ಕಂಕಣ
ಪಾಶಾಂಕುಶಧಾರನೆ || ೨ ||

ಕುಕ್ಷಿಮಹಾಲಂಬೋದರನೆ
ಇಕ್ಷುಛಾಪನ ಗೆಲಿದನೆ |
ಪಕ್ಷಿವಾಹನ ಸಿರಿ ಪುರಂದರ
ವಿಠ್ಠಲನ ನಿಜ ದಾಸನೆ || ೩ ||

05. ಶರಣು ಶರಣಯ್ಯ ಶರಣು ಬೆನಕ

ಶರಣು ಶರಣಯ್ಯ ಶರಣು ಬೆನಕ
ನೀಡಯ್ಯ ಬಾಳೆಲ್ಲ ಬೆಳಗುವ ಬೆಳಕ ॥ ಪ ॥

ನಿನ್ನ ನಂಬಿದ ಜನಕೆ ಇಹುದಯ್ಯ ಎಲ್ಲ
ಸುಖಾ ತಂದೆ ಕಾಯೋ ನಮ್ಮ ಕರಿಮುಖ ॥ಅನು॥

ಎಲ್ಲರೂ ಒಂದಾಗಿ ನಿನ್ನ ನಮಿಸಿ
ನಲಿಯೋದು ನೋಡೋಕೆ ಚೆನ್ನ
ಗರಿಕೆ ತಂದರೆ ನೀನು ಕೊಡುವೆ ವರವನ್ನ
ಗತಿ ನೀನೆ ಗಣಪನೆ ಕೈ ಹಿಡಿಯೋ ಮುನ್ನ ॥ ೧ ॥

ಸೂರ್ಯನೆದುರಲಿ ಮಂಜು ಕರಗುವ ರೀತಿ
ನಿನ್ನ ನೆನೆಯಲು ಒಡನೆ ಓಡುವುದು ಭೀತಿ
ನೀಡಯ್ಯ ಕಷ್ಟಗಳ ಗೆಲ್ಲುವ ಶಕುತಿ
ತೋರಯ್ಯ ನನ್ನಲ್ಲಿ ನಿನ್ನಯ ಕೀರ್ತಿ

06. ವಿಘ್ನೇಶ್ವರ ಬಾಗಿ ಭಕ್ತಿಯಲಿ

ವಿಘ್ನೇಶ್ವರ ಬಾಗಿ ಭಕ್ತಿಯಲಿ
ಕೈಮುಗಿದು ನಿನ್ನ ಸ್ತುತಿಸುವೆವು ॥ ಪ ॥

ಅಗಣಿತ ಮಹಿಮನೇ ದೇವ
ಸುಗುಣರಿಗೆ ವರವ ಕರುಣಿಸುವ
ಸುಗುಣರಿಗೆ ವರವ ಕರುಣಿಸುವ ॥ ೧ ॥

ಪಾಂಡವರು ನಿನ್ನ ಧ್ಯಾನಿಸುತ
ಭೂಮಂಡಲ ತಿರುಗಿ ಪಡೆದವರು
ರಾಜ್ಯದೊಳ್ ಕೀರ್ತಿ ಪಡೆದವರು ॥ ೨ ॥

ರಾವಣನು ನಿನ್ನ ನೆನೆಯದಲಿ
ಶಿವನಿಂದ ವರವ ಪಡಕೊಂಡ
ಬರುವಾಗ ಲಿಂಗವ ಕಳಕೊಂಡ ॥ ೩ ॥

ಹರಿಹರರು ನಿನ್ನ ಧ್ಯಾನಿಸಲು
ಸುರನರರು ನಿತ್ಯ ಸೇವಿಪರು
ಸುರನರರು ನಿತ್ಯ ಸೇವಿಪರು ॥ ೪ ॥

07. ತಾಂಡವ ನೃತ್ಯ ಹರೇ ಗಜಾನನ

ತಾಂಡವ ನೃತ್ಯ ಹರೇ ಗಜಾನನ
ತಾಂಡವ ನೃತ್ಯ ಹರೇ ಗಜಾನನ. ||ಪ||

ಧಿಮಿಕಿಟ ಧಿಮಿಕಿಟ ವಾದ್ಯ ಮೃದಂಗ
ಬ್ರಹ್ಮದಾಳ ಹರೇ ಗಜಾನನ
ತಾಂಡವ ನೃತ್ಯ ಹರೇ ಗಜಾನನ ||೧||

ಸುರವರ ಶಂಕರ ಗಿರಿಜ ಮನೋಹರ
ಸುರಚಿರ ವರ ಕುವರ ಲಂಬೋದರ
ತಾಂಡವ ನೃತ್ಯ ಹರೇ ಗಜಾನನ ||೨||

ತೆತ್ತಿಸ ಕೋಟಿ ಸುರಗಣ ದಾಟಿ
ಇಷ್ಟಾಪೂರ್ತಿ ಹರೇ ಗಜಾನನ
ತಾಂಡವ ನೃತ್ಯ ಹರೇ ಗಜಾನನ ||೩||

ಅಂದಿನ ದಿನದೊಳು ಚಂದ್ರಗೆ ಶಾಪವ
ಚಂದದಿ ನೀ ಕೊಟ್ಟೆ ಗಜಾನನ
ತಾಂಡವ ನೃತ್ಯ ಹರೇ ಗಜಾನನ ||೪||

ಧರೆಯೊಳು ಕಾರೇಕಲ್ಲು ಗುರು ವೀರೇಶನು
ನಿರುತದಿ ವರ ಕೊಡುವ ಗಜಾನನ
ತಾಂಡವ ನೃತ್ಯ ಹರೇ ಗಜಾನನ ||೫||

08. ಧ್ಯಾನವ ಮಾಡೋ ನಿಜ ಗುರುವಿನ

ಧ್ಯಾನವ ಮಾಡೋ ನಿಜ ಗುರುವಿನ
ಮಾನವ ನೀನತಿ ಮತಿಯುತ ನೆನಸುತಿ

ಜಗದೊಳಗನುದಿನ ನಗರೂರಧಿಕವೆಂದು
ಪೊಗಳುವ ಸ್ರುತಿ ಮತ ವಗಲದೆ ಮುದದೊಳು

ವರಕರುಣದೊಳಡಿ ಎರಗಿದ ವರಸ್ಮರ
ಹರನೆನಿಸಿದ ಶಿವಶರಣರ ಭೋಜನ

09. ಗುರುದೇವ ನಿಮ್ಮಯ ಚರಣ

ಗುರುದೇವ ನಿಮ್ಮಯ ಚರಣ
ಸ್ಮರಣೆಯ ಮಾಡುವೆ ನಾನು ||ಪ||

ಪರಿಹರಿಸೋ ಜನನ-ಮರಣ
ದಯಮಾಡೋ ಅಂತಃಕರುಣ ||ಅನು||

ಅರೆತು ಮರೆತು ಬೇರೆತೇನು
ಬೇರೆತು ಬೇರಿಲ್ಲವೋ ನೀನು
ಪರಿಪರಿಯಾಗಿ ಬೇಡಿದೆ ನಾನು
ಪರಮಾಮೃತ ನೀಡಿದೆ ನೀನು ||೧||

ಅಂಡಾಂಡ ಬ್ರಹ್ಮಾಂಡವನು
ಪಿಂಡಾಂಡದೊಳಡಗಿಸಿದವನು
ಅಖಂಡ ಮೂರುತಿ ನೀನು
ನಿಮ್ಮ ಸೇವೆಯೋಳಿರುವೆನು ನಾನು ||೨||

ಪರದೇಶಿ ದಡಿವಡಧೀಶಾ
ನಿಮ್ಮಡಿಯೋಳು ದಾಸನುದಾಸ
ನಿಜ ನಂಬಿದೆ ನಿಮ್ಮಯ ಪಾದ
ಮುಕ್ತಿಯ ಕೊಡು ಬಸವೇಶ ||೩||

10. ನಮೋ ನಮೋ ನಟರಾಜ ಮಹಾತ್ಮ

ನಮೋನಮೋ ನಮೋನಮೋ ನಮೋನಮೋ
ನಟರಾಜ ಮಹಾತ್ಮ ನಟರಾಜ ಮಹಾತ್ಮ || ಪ ||

ಭಾನ್ ಭುವಿ ನಲಿಯಲು ನಟರಾಜ ತಣಿಯಲು
ಹಾರುಹಾರು ಕಳೆ ಬೀರುಬೀರು ಯಶ ಸಾರುಸಾರು
ನಟರಾಜ ಮಹಾತ್ಮ ನಟರಾಜ ಮಹಾತ್ಮ || ೧ ||

ವಿವಿಧ ಕಲಾ ಸಮ್ಮೇಳನ ಪಾಲಕ
ನಟನ ಕಲಾವಿದ ನಯನ ಮನೋಹರ
ನಾನಾ ವೇಷ ವಿಲಾಸ ವಿನೋದ
ನವ್ಯ ಲಾಸ್ಯವರ ತಾಂಡವ ಪ್ರೀತ
ನಾಟ್ಯ ಮಹಾಗುರು ನಮೋ ನಮೋ || ೨ ||

11. ಏಕೋ ಈ ಕೋಪ ಶಂಕರ

ಏಕೋ ಈ ಕೋಪ ಶಂಕರಾ ಶಿವಶಂಕರ
ಏಕೋ ಈ ತಾಪ ಶಂಕರಾ ಶಿವಶಂಕರ ಹರಶಂಕರ |ಪ|

ಧಾನ ಧರ್ಮದ ಮಾಡುತ
ಜನಕ ನೀಡುತಲಿದ್ದ ಧನಕನಕ
ಎಲ್ಲಾ ನಿನ್ನ ಲೀಲೆ ಎಂದಿಹ
ಭಕ್ತನಿಗೆ ಈ ಬೇಗೆ ಏಕೋ ಶಂಕರಾ.... || ೧ ||

ಯಾಗ ಯೋಗವೇ ಕಾಯಕವೇನುತ
ಸಾದಿಸುತಿರುವ ಘನವ್ರತವ
ದೀನನಾಗಿ ನಿನ್ನೇ ನಂಬಿಹ
ಭಕ್ತನಿಗೆ ಈ ಶಿಕ್ಷೆ ಏಕೋ ಶಂಕರಾ... || ೨ ||

12. ನಮೋ ನಮೋ ನಟರಾಜ ನಮೋ

ನಮೋ ನಮೋ ನಟರಾಜ ನಮೋ
ಹರ ಜಟಾಜೂಟಧರ ಶಂಭೋ
ಓಂ ನಮೋ ನಮೋ ನಟರಾಜ
ನಮೋ ನಮೋ ನಟರಾಜ || ಪ ||

ಗಂಗಾ ಗೌರಿ ಹೃದಯ ವಿಹಾರಿ |
ಲೀಲಾ ಕಲ್ಪಿತ ಸಂಸಾರಿ |
ಬಳಿರೇ ಬಾ ಸುರ ಬ್ರಹ್ಮಚಾರಿ ||
ಭಾವಜ ಮದ ಸಂಹಾರಿ || || ೧ ||

ಫಣಿಭೂಷ ಭಿಕ್ಷುಕ ವೇಷ
ಈಶ ತ್ರಿಭುವನ ಸಂಪೋಷ |

ಅಖಿಲ ಚರಾಚರ ಮಂಗಳಕಾರಿ ||
ಹಾಲಹಲಗಳಧಾರಿ || || ೨ ||

13. ಎಲೆ ಮನವೆ ನೆನೆ ಮನವೆ

ಎಲೆ ಮನವೆ ನೆನೆ ಮನವೆ
ಸುಲಭನು ಶಿವ ತನ್ನ ಭಕ್ತರಿಗೆ || ಪ ||

ಕರೆದರೆ ಓ ಎಂದು ಓಡುತ ಬರುವ
ಕೋರಿದ ಬಯಕೆಯ ಕರುಣದಿ ಕೊಡುವ ||ಅನು ||

ಗರಳದ ಜಳಕಂಜಿ ಸುರ ದಾನವರೆಲ್ಲ
ಹರ ಹರ ಮಹಾದೇವ ಆಹಾ ಎನ್ನುತ
ಮೊರೆಯಾಲಿಸಿ ಬೇಗ ಬಂದ ವಿಷವ
ಕೊರಳೋಳು ಧರಸಿದ ಭಯವನು ಬಿಡಿಸಿದ || ೧ ||

ಮರಣಕೆ ಸಿಲುಕಿದ ಮಾರ್ಕಾಂಡೇಯನು
ಮರಗುತ ಶಿವಶಿವ ಶರಣೆಂದು ಕೂಗಲು
ಭರದಿ ಲಿಂಗಾದೊಳೆದ್ದು ಯಮನ ದಂಡಿಸಿದ
ತರುಳನ ಸಲಹಿದ ಭಯವನು ಬಿಡಿಸಿದ || ೨ ||

ಮಾನಪಮಾನಕೆ ಮನ ಸೋಲುತಲಿ
ನೀನೇ ಗತಿ ಶ್ರೀ ವೀರೇಶ ಎನಲು
ಅನುದಿನ ತನುವಿನ ನೆರಳಂತಿಹನು
ಕೊನೆಗಾಲಕೆ ನಿಜ ಪದವಿಯ ನೀಯ್ವನು || ೩ ||

14. ಶಂಕರ ಕರುಣವ ತೋರೋ

ಶಂಕರ ಕರುಣವ ತೋರೋ....
ನಿನ್ನ ನೆರೆ ನಂಬಿದೆ ನಾ ಗಂಗಾಧರ
ನಿನ್ನ ನೆರೆ ನಂಬಿದೆ ನಾ || ಪ ||

ಶಶಿಧರ ಶುಭಕರ ಪೊರೆಯೊ ಪರಾತ್ಪರ
ಮುರಹರ ಭವಹರ ಪಾಲಿಸು ಕೃಪಾಕರ
ಗೌರಿವರ ಶ್ರೀ ಗಿರಿಜಾರಮಣ
ನಾಗಭೂಷಣನೇ ವರ ನಟರಾಜ || ೧ ||

ತಂದೆಯು ನೀನೇ ತಾಯಿಯು ನೀನೇ
ಬಂಧುವು ನೀನೇ ಬಳಗವು ನೀನೇ
ನೀ ನಿಲ್ಲದೆ ಮತ್ತಾರು ಇಲ್ಲವಯ್ಯ
ಮೂರುಲೋಕಕೆ ಮುಕ್ಕಣ್ಣನು ನೀನೇ || ೨ ||

15. ಶಿವ ನಿನ್ನ ಪಾದವ ನಂಬಿದೆ

ಶಿವ ನಿನ್ನ ಪಾದವ ನಂಬಿದೆ ।
ಎನ್ನ ಕಾಯುವ ಭಾರವು ನಿನ್ನದು ತಂದೆ ॥ ಪ ॥

ನಾನೆಂಬ ಮಮಕಾರದಿಂದೆ ।
ನಾನಾ ಜನ್ಮವ ತಿರುಗಿ ನಾ ಬಂದೆ.....
ನಾನೆಂಬ ಮಮಕಾರದಿಂದೆ ।
ಎನಗಿನ್ನೂ ದಾರಿಯ ತೋರು ನೀ ಮುಂದೆ॥
ದೀನ ರಕ್ಷಕನೆ ॥ ಬಾರಯ್ಯ ತಂದೆ । ॥ ೧ ॥

ತನು ಮನ ಧನ ನಿನ್ನದಯ್ಯ ।
ನಿನ್ನ ದಾಸನ ಸೇವೆಯು ಎನ್ನದು ನೋಡಯ್ಯ....
ತನು ಮನ ಧನ ನಿನ್ನದಯ್ಯ ।
ಘನ ಮೋಕ್ಷ ಪದವಿಯು ನಾನೊಲ್ಲೇನಯ್ಯ॥
ಅನುದಿನ ತವನಾಮ ॥ ಸ್ಮರಿಸುವೆನಯ್ಯ. ॥ ೨ ॥

ಭಕುತರ ಭಂಟ ನೀನಂತೆ ।
ಮುನ್ನ ಬಾಣನ ಬಾಗಿಲ ಕಾಯ್ದವನಂತೆ....
ಭಕುತರ ಭಂಟ ನೀನಂತೆ ।
ಫಾಲಲೋಚನ ನಿನ್ನ ಭಜಿಸಿದ ಉಪಮನ್ಯು॥
ಬಾಳ ಭಾವಕೆ ಮೆಚ್ಚಿ ॥ ಕ್ಷೀರವಾರಿಧಿಯಿತ್ತೆ ॥ ೩ ॥

ಜಡೆಯೊಳು ಗಂಗೆಯ ಧರಿಸಿ ।
ಗಿರಿಜಾತೆಯ ವಾಮಾಂಕ ಭಾಗದೊಳಿರಿಸಿ....
ಜಡೆಯೊಳು ಗಂಗೆಯ ಧರಿಸಿ ।
ಮೇರೆಯುವ ಪರಮೇಶ ಮರಣ ವಿಲಾಸ
ವರಪಗ್ನಿ ಪುರವಾಸ ॥ ಈಶ ಮಹೇಶ ॥ ೪ ॥

16. ಬೇಗನೆ ಬಾರೋ ಶಂಕರದೇವ

ಬೇಗನೆ ಬಾರೋ ಶಂಕರದೇವ

ಬೇಗನೆ ಬಾರೋ ಮೊಗವನು ತೋರೋ || ಪ ||

ಭೋಗವು ನೀಗಿದ ಯೋಗಿಯು ನೀನು || ಅನು ||

ತೊಡೆಯಲಿ ಪಾರ್ವತಿ ಜಡೆಯಲಿ ಶ್ರೀಗಂಗಾ

ಎಡೆಯುಳ್ಳ ಸರ್ಪವು ಕೊರಳಲ್ಲಿ ಶಿವನೇ || ೧ ||

ಉರದಲ್ಲಿ ಶಿರಮಾಲೆ ಕರದಲಿ ತ್ರಿಶೂಲ

ಉರಿಗಣ್ಣು ಧರಿಸಿದ ಹಣೆಯಲ್ಲಿ ಶಿವನೇ || ೨ ||

ಆದಿ ಅಂತ್ಯವು ಇಲ್ಲ ವ್ಯಾಧಿ ರೋಗಗಳಿಲ್ಲ

ಬೂದಿಯ ಮೈಯುಳ್ಳ ಮಹಾದೇವರೊಡೆಯ || ೩ ||

ಹಸಿವು ತೃಷೆಗಳಿಲ್ಲ ವ್ಯಸನವು ಮುನಿಲ್ಲ

ಹಸನಾದ ವಸ್ತುವು ಮೊದಲಲ್ಲಿ ಶಿವನೇ || ೪ ||

ಜನನ ಮರಣವಿಲ್ಲ ಜನಸಿದ ತಾಯಿಲ್ಲ

ಮನದೊಳು ಮನೆಮಾಡೋ ಚಿನ್ಮಯ ಶಿವನೇ || ೫ ||

ವಸುಧೆಯೊಳು ಗೋವಿನಕೋವಿ ಬಸವದಂಡೇಶನೆ

ಹಸನಾಗಿ ಸ್ತುತಿಸುವೆ ಪಾಲಿಸೋನಾಥ || ೬ ||

17. ಶಿವನಾಮ ಸ್ಮರಿಸೋ

ಶಿವನಾಮ ಸ್ಮರಿಸೋ ಈ ಭವ
ಭಾದೆಯ ಪರಿಹರಿಸೋ ‖ ಪ ‖

ಮೂರು ದಿನದ ಸಂತೆ
ಆತ್ಮನ ಕಾಣದೆ ನೀ ಕುಂತಿ
ಬೇಡ ಪರರ ಚಿಂತೆ
ನಾಳೆ ಯಮ ಕೇಳಿದರೇನಂತಿ ‖ ೧ ‖

ಆಯುಷ್ಯ ಅತ್ತತ್ತು
ರಾತ್ರಿ ಹೋದವು ಇಪ್ಪತ್ತು
ಪ್ರಾಯಕ್ಕೆ ಮೂವತ್ತು
ಪ್ರಾಯದ ಗಾಯಕ್ಕೆ ನಲವತ್ತು ‖ ೨ ‖

ಆಸೆ ಮಾಡಲು ಬೇಡ
ಒಬ್ಬರಿಗೆ ಬೇಸರ ಕೋಡಬೇಡ
ದೂಷಿಸಿ ನುಡಿಯಬೇಡ
ಗುರು ಮಹಾಂತೇಶನ ಮರಿಯಬೇಡ ‖ ೩ ‖

18. ಶಿವ ಎನ್ನು ಪ್ರಾಣಿ

ಶಿವ ಎನ್ನು ಶಿವ ಎನ್ನು ಶಿವ ಎನ್ನು ಪ್ರಾಣಿ
ಶಿವ ಎನ್ನದಿದ್ದೊಡೆ ನೀ ಮುಕ್ತಿ ಕಾಣೆ || ಪ ||

ದಾನವಿಲ್ಲದ ದ್ರವ್ಯಗಳಿಸಿದ ಪ್ರಾಣಿ
ನೀನೊಗೋ ಕಾಲಕ್ಕೆ ಕಾಣೆ ದುಗ್ಗಾಣಿ || ೧ ||

ಸತಿ ಸುತ ಪಿತರನು ಸಲುಹಿದ ಪ್ರಾಣಿ
ಮೃತಪಟ್ಟ ಕಾಲಕ್ಕೆ ಯಾರನ್ನು ಕಾಣೆ || ೨ ||

ನೀರಗುಳ್ಳಿಯಂತೆ ಸಂಸಾರ ಪ್ರಾಣಿ
ಶಂಭುಲಿಂಗನ ಧ್ಯಾನ ನೀ ಮಾಡೋ ಪ್ರಾಣಿ || ೩ ||

ನರಜನ್ಮವಿದು ನಿನಗೆ ಸ್ಥಿರವಲ್ಲ ಪ್ರಾಣಿ
ನರಹರ ಶಿವಯೋಗಿ ಸಾರಿದ ಪ್ರಾಣಿ || ೪ ||

19. ನುಡಿ ಮನವೇ ಶಿವನ ನಾಮಾವಳಿ

ನುಡಿ ಮನವೇ ಶಿವನ ನಾಮಾವಳಿ
ಇದುವೇ ಪರಮ ತತ್ವದ ಸಾರವು ||ಪ||

ದೇವನ ರೂಪವು ಕಣ್ಣೊಳು ತುಂಬಿ
ಚಿನ್ಮಯವಾಗಲಿ ಎಮ್ಮಯ ಮನಕೆ
ಜನುಮ ಜನುಮಗಳ ಬವಣೆಯ ನೀಗಿ
ಮರಳಿ ಮರಳಿ ಬಾರದು ನಮಗೆ || ೧ ||

ಓಂನಮಃಶಿವಾಯ ಓಂನಮಃಶಿವಾಯ ಓಂನಮಃಶಿವಾಯ
ಓಂನಮಃಶಿವಾಯ ಓಂನಮಃಶಿವಾಯ ಓಂನಮಃಶಿವಾಯ || ಕೋ ||

ಚಂದ್ರಶೇಖರ ಸಲಹೋ ಎನ್ನುತ
ವಂದಿಸಿ ಕೂಗಲು ಓಡುತ ಬರುವ
ಭವ ಸಾಗರವ ದಾಟಿಸಿ ಕಾಯುವ ||೨ ||

20. ಕಂಡೆ ಕರುಣಾನಿಧಿಯ

ಕಂಡೆ ಕರುಣಾನಿಧಿಯ ಗಂಗೆಯ
ಮಂಡೆಯೊಳಿಟ್ಟ ದೊರೆಯ ಶಿವನ || ಪ ||

ರುಂಡಮಾಲೆ ಸಿರಿಯ ನೊಸಲೊಳು
ಕೆಂಡಗಣ್ಣಿನ ಬಗೆಯ ಹರನ ||ಅನು||

ಕಪ್ಪುಗೊರಳ ಹರನ ಕಂದರ್ಪ ಪಿತನ ಸಖನ
ಮುಪ್ಪುರ ಗೆಲಿದವನ ಮುನಿನುತ
ಸರ್ಪಭೂಷಣ ಶಿವನ ಹರನ || ೧ ||

ಭಸಿತ ಭೂಷಿತ ಶಿವನ ಭಕ್ತರ
ವಶದೊಳಗಿರುತಿಹನ ಪಶುಪತಿಯೆನಿಸುವನ
ವಸುಧೆಯೊಳು ಶಶಿಶೇಖರ ಶಿವನ ಹರನ || ೨ ||

ಗಜ ಚರ್ಮಾಂಬರನ ಗೌರೀವರ
ತ್ರಿಜಗದೀಶ್ವರನ ತ್ರಿಜಗನ್ಮೋಹನನ
ತ್ರಿಲೋಚನ ತ್ರಿಪುರಾಂತಕ ಶಿವನ ಹರನ || ೩ ||

ಕಾಮಿತ ಫಲವಿವನ ಭಕ್ತರ ಪ್ರೇಮದಿ
ಸಲಹುವನ ರಾಮನಾಮಸ್ಮರನ
ರತಿಪತಿ ಕಾಮನ ಸಂಹರನ ಶಿವನ || ೪ ||

ಧರೆಗೆ ದಕ್ಷಿಣಕಾಶಿ ಎನಿಸುವ
ಪುರ ಪಂಪಾವಾಸಿ ತಾರಕ ಉಪದೇಶಿ
ಪುರಂದರವಿಠ್ಠಲ ಭಕ್ತರ ಪೋಷಿ ಹರಿಸಿ || ೫ ||

21. ಬಿಲ್ವ ಪತ್ತರೆಯಾಗಬೇಕಣ್ಣ

ಬಿಲ್ವಪತ್ತರೆಯಾಗಬೇಕಣ್ಣ ಬಲ್ಲವನ
ಪೂಜೆಗೆ ಬಿಲ್ವಪತ್ತರೆಯಾಗಬೇಕಣ್ಣ || ಪ ||

ಬಿಲ್ವಪತ್ತರೆಯಾಗಬೇಕು
ಮಲ್ಲಿಕಾರ್ಜುನ ಪೂಜೆಗೆಂದು
ಎಲ್ಲಿ ನೋಡಿದರಲ್ಲಿ ಶಿವನು
ಮೆಲ್ಲಮೆಲ್ಲನೆ ಚಲಿಸಬೇಕು || ಅನು ||

ಮೂರುದಳದ ಬಿಲ್ವಪತ್ರೆಯನು |
ಅದನೇರಿ ಶಿವನು ಸಾರಿ ಬೆಳಕು ತೋರುವನು |
ವಾರಿಜೋದ್ಭವ ತಾನೇಯಾಗಿ ಘೋರಪಾಪವ ದೂರಮಾಡಿ ||
ಗುರುವೆಂಬ ಶಬ್ದದೊಳು ಧೀರನಾಗಿ ನಿಲ್ಲಬೇಕು |

ಧರೆಯ ಭೋಗವ ಬಯಸಬೇಡಣ್ಣ |
ಮರಿಯದಲೆ ನೀನು ಗುರುವಿನಂತೆ ಭಜನೆ ಮಾಡಣ್ಣ |
ಉರಗಸೇವೆ ಅಲಯವಾಸ ಹರನೆ ಪಾರ್ವತಿ ರಮಣನೆಂದು ||
ಶರಣ ಸೇವೆಯನ್ನು ಮಾಡಿ ಕರುಣೆಯನ್ನು ಪಡೆಯಬೇಕು |

ಹತ್ತು ಸಹಸ್ರದಳದ ಕಮಲವು |
ಅದನೆತ್ತಿ ನೋಡಲು ಸುತ್ತ ಮುತ್ತ ಕಳೆಯ ತೊರೆಯುವುದು|
ಸತ್ತುಚಿತ್ತಾನಂದನಾಗಿ ಮತ್ತೆ ಪ್ರಾಣದ ಕಳೆಯು ತುಂಬಿ ||
ಮರ್ತ್ಯವೆಂಬ ಲೋಕದೊಳಗೆ ನಿತ್ಯ ನಿರ್ಮಲನಾಗಬೇಕು |

22. ಶಿವ ಶಿವ ಎಂದರೆ ಭಯವಿಲ್ಲ

ಶಿವ ಶಿವ ಎಂದರೆ ಭಯವಿಲ್ಲ ||
ನಾಮಕೆ ಸಾಟಿ ಬೇರಿಲ್ಲ
ಶಿವನಾಮಕೆ ಸಾಟಿ ಬೇರಿಲ್ಲ
ಶಿವ ಭಕ್ತನಿಗೆ ನರಕ ಇಲ್ಲ.... ||
ಜನುಮಜನುಮಗಳ ಕಾಟವು ಇಲ್ಲ... || ಪ ||

ಅನ್ನದಾನವ ತೊರೆಯದಿರು
ನಾನು ನನ್ನದು ಎನ್ನದಿರು
ಉನ್ನತಿ ಸಾದಿಸೆ ಹಗಲಿರುಲು ||
ದೀನನಾಥನ ಮರೆಯದಿರು. || ೧ ||

ಭೋಗ ಭಾಗ್ಯದ ಬಲೆಯೊಳಗೆ
ಬಳಲಿ ಬಾಡದೆ ಇಳೆಯೊಳಗೆ
ಕಾಯಕ ಮಾಡುತ ಎಂದೆಂದು||
ಆತ್ಮಾನಂದವ ಸವಿಯುತಿರು || ೨ ||

ದಾನವೆ ಜಗದೊಳು ತಪವಯ್ಯ
ಧ್ಯಾನವೆ ಘನತರ ಜಪವಯ್ಯ
ಅಪಕಾರವ ನೀ ಮಾಡಿದರೆ||
ಕೈಲಾಸವದು ಸಿಗದಲ್ಲ || ೩ ||

23. ಓಂ ನಮಃ ಶಿವಮಂತ್ರ ನುಡಿ ನುಡಿ

ಓಂನಮಃ ಶಿವಮಂತ್ರ ನುಡಿನುಡಿ ಅಂದರಂತೆ ನಡಿ
ಕಾಣುವುದು ದೇವರ ಗುಡಿಗುಡಿ ॥ ಪ ॥

ಬಡತನ ಬಾಳೆಂಬ ಬಾಳದಿರು
ಅನುಭವದಿಂದಲ್ಲಿ ತುಡಿಲದಿರು ॥ ೧ ॥

ಹಣ ಬಂದ ಕಾಲಕ್ಕೆ ಕುಣಿಬೇಡ ಜಾಣ
ಗುಣವಂತನಾಗಿ ಬಾಳ ಬೇಕಪ್ಪ ಸುಗುಣ ॥ ೨ ॥

ತತ್ವ ವಿಚಾರವ ತಿಳಿಯಪ್ಪ ನೀನು
ಗುರುವಿನ ಪಾದಸೇವೆ ಮಾಡಪ್ಪಾ ನೀನು ॥ ೩ ॥

ಧರೆಯೊಳು ಮೆರೆಯುವ ಕಾರೇಕಲ್ಲು ಗ್ರಾಮ
ಗುರು ವೀರೇಶನ ಪಾವನ ನಾಮ ॥ ೪ ॥

24. ಕಾಶಿಯಿಂದ ಬಂದನಿಲ್ಲಿ ವಿಶ್ವನಾಥ

ಕಾಶಿಯಿಂದ ಬಂದನಿಲ್ಲಿ ವಿಶ್ವನಾಥ
ಕರೆಯುವರು ಅವನನ್ನೇ ಮಂಜುನಾಥ ॥ ಪ ॥

ಧರ್ಮದ ಮರ್ಮವಿಹ ಈ ನೆಲ
ಕನ್ನಡದ ಹಿರಿಮೆ ಈ ಧರ್ಮಸ್ಥಳ ॥ಅನು॥

ನೇತ್ರಾವತಿ ಬಂದಳು ಮಾಯೆಯಾಗಿ
ದೇವ ಗಂಗೆಯಂತೆಯೇ ಪಾವನೆಯಾಗಿ
ಅಣ್ಣಪ್ಪ ಬಂದನಿಲ್ಲಿ ಸೇವೆಗಾಗಿ
ಭೂತಪ್ರೇತ ಸೇನೆಗೆ ನಾಥನಾಗಿ ॥ ೧ ॥

ಹಿಂದೂ ಜೈನಧರ್ಮದ ಸಂಗಮವಿಲ್ಲಿ
ಎಂದು ಸಾರುತಿಹನು ಬಾಹುಬಲಿ
ಇಂಥ ದಿವ್ಯ ಕ್ಷೇತ್ರಕ್ಕೆ ಸಾಟಿಯೆಲ್ಲಿ
ಯಾತ್ರಿಕನೆ ಧನ್ಯನಾಗಿ ನಲಿ ಇಲ್ಲಿ ॥ ೨ ॥

25. ನಂಬಿದೆ ನಿನ್ನ ನಾಗಾಭರಣ

ನಂಬಿದೆ ನಿನ್ನ ನಾಗಾಭರಣ
ಕಾಯೋ ಕರುಣಾಮಯ ನನ್ನ ॥ ಪ ॥

ನಿನ್ನೀ ನಾಮವು ಒಂದೇ
ನೀಗಿಸ ಬಲ್ಲುದು ಬಾಧೆ ॥
ತನುಮನ ಜೀವನ ಪಾವನವಯ್ಯ
ಶಂಭೋ ಎನ್ನಲು ಇಲ್ಲ ಭಯ || ೧ ||

ಬಾಡದ ಹೂವಿನ ಮಾಲೆ
ಬಾಗಿಸು ಪಾದದ ಮೇಲೆ
ಪ್ರೇಮಮಯ ನಿನಗೆ ಜಯ॥
ನನ್ನ ಜೀವನ ನಿನ್ನಲಿ ತನ್ಮಯ
ಬಾಳಿನ ಹಾದಿಯ ಬೆಳಗಯ್ಯ || ೨ ||

ಲೋಕವ ಕಾಯುವ ಸ್ವಾಮಿ
ಭಿಕ್ಷೆಯ ಬೇಡಿದ ಪ್ರೇಮಿ
ಭಸ್ಮ ಮಯ ಬಿಲ್ವಪ್ರಿಯ||
ನನ್ನೀ ದೇಹವೆ ನಿನ್ನಯ ಆಲಯ
ಸೇವಾ ಭಾಗ್ಯವ ನೀಡಯ್ಯ || ೩ ||

26. ಆಹಾ ಎಂಥಾ ದಿವ್ಯ ಕ್ಷೇತ್ರವು

ಆಹಾ ಎಂಥಾ ದಿವ್ಯಕ್ಷೇತ್ರವು
ಆತ್ಮಲಿಂಗವಿರುವ ನಮ್ಮ ಗೋಕರ್ಣವು ॥ ಪ ॥

ಬಾಳದಾರಿಯಲ್ಲಿ ಭಂಗ ಪಡುವ ಜನರಿಗೆ
ರಕ್ಷೆ ನೀಡುವಂತ ದಿವ್ಯ ಸನ್ನಿಧಾನಕೆ
ಭಿಕ್ಷೆ ಬೇಡಿಯಾದರೊಮ್ಮೆ ಬನ್ನಿರಿಲ್ಲಿಗೆ
ಮುಕ್ತರಾಗಿ ಪಾಪ ಹರಿದು ಹೆಜ್ಜೆಹೆಜ್ಜೆಗೆ ॥ ೧ ॥

ಬರಲು ಇಲ್ಲಿ ಇರಬೇಕು ನೂರುಜನ್ಮ ಪುಣ್ಯವು
ದೇವ ದೇವನೊಲಿಯಬೇಕು ಭಕ್ತಿಭಾವವು
ಎಲ್ಲ ಶಕ್ತಿಕೇಂದ್ರವಾದ ದಿವ್ಯಕ್ಷೇತ್ರವು
ಗೋಕರ್ಣ ಒಂದೇ ನಮಗೆ ಮುಕ್ತಿ ಮಾರ್ಗವು ॥ ೨ ॥

27. ಸದಾಶಿವನ ಭಜನಾ

ಸದಾಶಿವನ ಭಜನಾ ಸಾಂಬಶಿವ
ಸದಾಶಿವನ ಭಜನಾ ॥ ಪ ॥

ಪ್ರಭಾತ ಸಾಯಂಕಾಲದೊಳನುದಿನ ॥ಅನು॥

ಆ ದೇವನು ಕೈಲಾಸ ವಿಲಾಸನ
ನಾರದ ತುಂಬರ ವಿಶಾರದ
ನಾಮವೇ ಪಾವನ ....
ನಾಮವೇ ಮಧುರಾಮೃತ ಪಾನ ॥ ೧ ॥

28. ಮಾತಾಡು ಮಾತಾಡು ಲಿಂಗವೇ

ಮಾತಾಡು ಮಾತಾಡು ಲಿಂಗವೇ
ನೀನು ಮಾತಾಡಬೇಕಯ್ಯ ಲಿಂಗವೇ
ನೀನು ಮಾತನಾಡದಿದ್ದರೆ ನಾ ತಾಳಲಾರೆನು
ಮಾತಾಡು ಮಾತಾಡು ಲಿಂಗವೇ

ಅಡವಿ ಅರಣ್ಯದೊಳು ಲಿಂಗವೇ
ಅಲ್ಲಿ ಎಣ್ಣೆಮಜ್ಜನ ಬಾವಿ ಲಿಂಗವೇ
ನೂರೆಂಟು ಶರಣರು ಶಿವಪೂಜೆ ಮಾಡುವಾಗ
ಹೊತ್ತಲ್ಲಿಗೋಯಿತಯ್ಯ ಲಿಂಗವೇ

ಹಾಸಿಗೆ ಹಾಸಿದ್ದೆ ಲಿಂಗವೇ
ಪರಂಜ್ಯೋತಿಯ ಮೂಡಿಸಿದ್ದೆ ಲಿಂಗವೇ
ಹಾಸಿಗೆ ತಕ್ಕಂತ ಈಶನಿಲ್ಲದ ಮೇಲೆ
ಪರದೇಶಿ ನಾನಾದೆ ಲಿಂಗವೇ

ಮುಂಗಾರು ಸಿಡಿಲು ಮಿಂಚು ಮಿಂಚಿತು
ಅಲ್ಲಿ ಸೂರ್ಯಪ್ರಕಾಶ ಬೆಳಕು ಕಂಡಿತು
ಪರಮಾತ್ಮ ಪಾರು ಮಾಡಬಾರದೇ
ಎನ್ನ ಪರಿತಾಪವನು ಕೇಳಬಾರದೆ

ಅಣ್ಣಾ ಅವಸರಕ್ಕಿಲ್ಲ ಲಿಂಗವೇ
ಇಲ್ಲಿ ತಮ್ಮ ಯಾಳೆವಕಿಲ್ಲ ಲಿಂಗವೇ
ನಾ ಪಡೆದ ಮಕ್ಕಳು ನಮಗಿಲ್ಲದಾಮೇಲೆ
ಮೊಮ್ಮಕ್ಕಳ್ಯಾರಿಗಯ್ಯ ಲಿಂಗವೇ

ಬಲಗೈಯ ಆರುತಿ ಲಿಂಗವೇ
ಮತ್ತೆ ಎಡಗೈಲಿ ಶಿವಗಂಟೆ ಲಿಂಗವೇ
ಆರು ಮೂರೊಂಬತ್ತು ಜ್ಯೋತಿಯ
ಹಿಡಕೊಂಡು ಶಿವನಿಗೆ ಬೆಳಗಿದೆ ಲಿಂಗವೇ

29. ನಮೋ ಭೂತನಾಥ

ಹೇ! ಚಂದ್ರ ಚೂಡ ಮದನಾಂತಕ ಶೂಲಪಾಣೇ
ಕಾಣೋ ಗೀರಿಶ ಗಿರಿಜೇಶ ಮಹೇಶ ಶಂಭೋ
ಹೇ! ಪಾರ್ವತಿ ಹೃದಯ ವಲ್ಲಭ ಚಂದ್ರಮೌಳಿ
ಭೂತಾದಿಪ ಪ್ರಮಥನಾಥ ಗಿರೀಶ ಚಾಪ

ನಮೋ ಭೂತನಾಥ ನಮೋ ದೇವಾ ದೇವಾ
ನಮೋ ಭಕ್ತಪಾಲ ನಮೋ ದಿವ್ಯತೇಜ
ನಮೋ ಪಾರ್ವತೀ ವಲ್ಲಭಾ ನೀಲಕಂಠ ॥ ಪ ॥

ಭವ ವೇಧಸಾರ ಸದಾ ನಿರ್ವಿಕಾರ
ನಮೋ ಲೋಕಪಾಲ ನಮೋ ನಾದಲೋಲ
ನಮೋ ಪಾರ್ವತೀ ವಲ್ಲಭಾ ನೀಲಕಂಠ ॥ ೧ ॥

ಸದಾ ಸುಪ್ರಕಾಶ ಮಹಾಪಾಪ ನಾಶ
ಕಾಶಿ ವಿಶ್ವನಾಥ ದಯಾಸಿಂಧು ದಾತ
ನಮೋ ಪಾರ್ವತೀ ವಲ್ಲಭಾ ನೀಲಕಂಠ ॥ ೨ ॥

30. ಈ ದೇಹದಿಂದ ದೂರನಾದೆ ಏಕೆ ಆತ್ಮನೆ

ಈ ದೇಹದಿಂದ ದೂರನಾದೆ ಏಕೆ ಆತ್ಮನೆ ?
ಈ ಸಾವು ನ್ಯಾಯವೆ?, ಈ ಸಾವು ನ್ಯಾಯವೆ?
ಆಧಾರ ನೀನೆಂದು ಈ ಲೋಕ ನಂಬಿದೆ
ಈ ದೇಹದಿಂದ ದೂರನಾದೆ ಏಕೆ ಆತ್ಮನೆ ?
ಈ ಸಾವು ನ್ಯಾಯವೆ?

ತಾಯಿ ಹಾಲು ವಿಷವದಾಗೆ ನ್ಯಾಯವೆಲ್ಲಿದೆ?
ಕಾಮದೇವ ಸಾವು ತರಲು ಎಲ್ಲಿ ರಕ್ಷಣೆ?
ಯಾವ ಪಾಪಕೆ ಸಾವು ಕಾಡಿತೊ?
ಪರಮಾತ್ಮ ನ್ಯಾಯ ಬೇಡವೆ?,
ಈ ಸಾವು ನ್ಯಾಯವೆ?, ಈ ಸಾವು ನ್ಯಾಯವೆ?
ಆಧಾರ ನೀನೆಂದು ಈ ಲೋಕ ನಂಬಿದೆ
ಈ ದೇಹದಿಂದ ದೂರನಾದೆ ಏಕೆ ಆತ್ಮನೆ?

ಸೇವೆಗಾಗಿ ಕಾದ ಹೂವು ಕಸವ ಸೇರಿತೆ
ಬಾಳಿನಾಸೆ ಚಿಗುರಿನಲ್ಲೆ ಬಾಡಿ ಹೋಯಿತೆ
ಏನು ತಪ್ಪಿದೆ ಹೇಳಬಾರದೆ? ಸರಿಯೇನು ಮೌನಾವೇಕಿಹೆ?
ಈ ಸಾವು ನ್ಯಾಯವೆ? ಈ ಸಾವು ನ್ಯಾಯವೆ?
ಆಧಾರ ನೀನೆಂದು ಈ ಲೋಕ ನಂಬಿದೆ
ಈ ದೇಹದಿಂದ ದೂರನಾದೆ ಏಕೆ ಆತ್ಮನೆ?
ಈ ಸಾವು ನ್ಯಾಯವೆ?

ಶಿವನಾಮ ಮಂತ್ರವೊಂದೆ ಅಮರ ಜೀವಿಗೆ
ಪರಮೇಶ ಪ್ರಾಣ ಜ್ಯೋತಿ ಮರಳಿ ತಾರೆಯ?
ಮರಳಿ ತಾರೆಯ?, ಮರಳಿ ತಾರೆಯ?

ಪರಮೇಶ ಪ್ರಾಣ ಜ್ಯೋತಿ ಮರಳಿ ತಾರೆಯ?

ಮರಳಿ ತಾರೆಯ?

ಈ ದೇಹದಿಂದ ದೂರನಾದೆ ಎಕೆ ಆತ್ಮನೆ ?

ಈ ಸಾವು ನ್ಯಾಯವೆ?

31. ಕಂಡೆನಾ ಫಣಿ ಭೂಷಣ

ಕಂಡೆನಾ ಫಣಿ ಭೂಷಣ

ಕನಸಿನಲಿ ಕಂಡೆನಾ ಫಣಿ ಭೂಷಣ || ಪ ||

ಸುಂದರ ಹಿಮಗಿರಿ ವಾಸ ಮಹೇಶನ ||ಅನು||

ಶೂಲ ಢಮರುಘಧರನ ದಾನವೇಂದ್ರನ |

ನೀಲಕಂಠನ ನಿಖಿಲ ಜಗಪಾಲನ |

ಕಾಲಕಾಲನ ಗಿರಿಜಲೋಲನ ||

ಚಿದಂಬರ ಹರ ಮಾಲಾಧರನ

ಭವಭಯದೂರಕ ಭುವನ ಪಾಲನ | || ೧ ||

ಅಂಗಜ ಹರ ಪ್ರಿಯನ ಮಂಗಳಕರ ಮೃಗನ |

ಗಂಗಾಧರ ಶಿವ ಚಂದ್ರಶೇಖರನ |

ಅರ್ಧನಾರೀಶ್ವರನ ರುದ್ರಗಣ ಪೂಜಿಪನ ||

ಭದ್ರನ ರೂಪನ ನಟರಾಜನಾ....... | || ೨ ||

32. ಎಲ್ಲವೂ ಶಿವನೆಂದು ನಂಬಿದ ಮೇಲೆ

ಎಲ್ಲವೂ ಶಿವನೆಂದು ನಂಬಿದ ಮೇಲೆ
ಅಲ್ಲಿಗಿಲ್ಲಿಗೆ ಹೋಗಲ್ಯಾಕಯ್ಯ ಮನುಜ
ಯಾಕಯ್ಯ ಮನುಜ || ಪ ||

ಸಂಸಾರದಲ್ಲಿ ಶಿವನಿದ್ದಮೇಲೆ
ಸನ್ಯಾಸಿಯಾಗುವುದೇಕಯ್ಯ ಮನುಜ
ಯಾಕಯ್ಯ ಮನುಜ || ೧ ||

ಗುಡಿಯಲ್ಲಿ ನಿರುತದಿ ಶಿವನಿದ್ದ ಮೇಲೆ
ಅಡವಿಯ ಸೇರಲ್ಯಾಕಯ್ಯ ಮನುಜ
ಯಾಕಯ್ಯ ಮನುಜ. LI ೨ ||

ಸರ್ವರ ಹೃದಯದಿ ಶಿವನಿದ್ದ ಮೇಲೆ
ಗರ್ವವ ತೋರಿಸಿಲ್ಯಾಕಯ್ಯ ಮನುಜ
ಯಾಕಯ್ಯ ಮನುಜ || ೩ ||

ನರಲೋಕದಲ್ಲಿ ಶಿವನಿದ್ದ ಮೇಲೆ
ಸ್ವರ್ಗದ ಸುಖದಾಸೆ ಯಾಕಯ್ಯ ಮನುಜ
ಯಾಕಯ್ಯ ಮನುಜ || ೪ ||

ಕಾಯಲು ನಮ್ಮನ್ನು ಶಿವನಿದ್ದ ಮೇಲೆ
ಯಮಪಾಶದ ಭಯವೇಕಯ್ಯಾ ಮನುಜ
ಯಾಕಯ್ಯ ಮನುಜ || ೫ ||

ಮನದಲಿ ನಿತ್ಯದಿ ವೀರೇಶನಿರಲು
ಘನಮುಕ್ತಿ ಪದವಿಯು ಯಾಕಯ್ಯಾ ಮನುಜ
ಯಾಕಯ್ಯ ಮನುಜ || ೬ ||

33. ಧರ್ಮವೇ ಮರೆಯಾಯಿತಯ್ಯಾ

ಧರ್ಮವೇ ಮರೆಯಾಯಿತಯ್ಯಾ
ಧನ ಮದಾಂಧರ ಲೋಕದಲ್ಲಿ । ॥ ಪ ॥

ದುಡಿಯಲು ಉದ್ಯೋಗ ಕೊಡರು
ಬೇಡಾ ಬಂದರೆ ಭಿಕ್ಷಾ ನೀಡರು ।
ಕದ್ದರೆ ಇವ ಕಳ್ಳನೆಂಬರು
ಕಸಿದರೆ ದುರ್ಮಾರ್ಗನೆಂಬರು ।
ಬಡವ ಹಸಿದು ಬೆಂದರೇನು
ಸುಟ್ಟು ಬೂದಿಯಾದರೇನು ॥
ನೋಡಿ ಮರುಗದೆ ಹಾವಿ ಈನಿಧಿ
ಏಕೆ ಸೃಜಿಸಿದೆ ಭುವಿಯೊಳು । ॥ ೧ ॥

ದಾನವಿಲ್ಲ ನಿಧಾನವಿಲ್ಲ
ದಾನ ಧರ್ಮವೇ ಮೊದಲೆ ಇಲ್ಲ ।
ನೀನೆ ಎಮ್ಮನು ಸಲಹೋ ನೀನೇ
ಹಂಪೆ ವಿರೂಪಾಕ್ಷ ಶ್ರೀ ಹಂಪೆ ವಿರೂಪಾಕ್ಷ ॥
ಕರುಣಿಸೆಮ್ಮನು ಕಾಯೋ
ನೀನು ದೇವಾದಿ ದೇವ । ॥ ೨ ॥

34. ಯಾರು ಬಿಟ್ಟರೆ ಕೈಯ್ಯಾ ನೀ ಕೈಯ್ಯ ಬಿಡಬೇಡ

ಯಾರು ಬಿಟ್ಟರೆ ಕೈಯ್ಯಾ ನೀ ಕೈಯ್ಯ
ಬಿಡಬೇಡ ಶಿವಾಯ ನೀ ಕೈಯ್ಯಾ ಬಿಡಬೇಡ

ನೀ ಕೈಯ ಬಿಟ್ಟರೆ ಎನ್ನ ಸಲಹುವರ್ಯಾರಯ್ಯಾ
ಶಿವಾಯ ಎನ್ನ ಸಲಹುವರ್ಯಾರಯ್ಯಾ || ಪ ||

ತಂದೆತಾಯಿಯು ನೀನೇ ಬಂಧು ಬಳಗವು ನೀನೇ
ಶಿವಾಯ ಬಂಧು ಬಳಗವು ನೀನೇ
ನಂದಿವಾಹನ ಶಿವನೇ ಪಾಲಿಸಬೇಕಯ್ಯ
ಶಿವಾಯ ಪಾಲಿಸಬೇಕಯ್ಯ || ೧ ||

ಭಕ್ತವತ್ಸಲನೆಂದು ಭರದಿ ನಂಬಿದೆನಯ್ಯ
ಶಿವಾಯ ಭರದಿ ನಂಬಿದೆನಯ್ಯ
ಮುಕ್ತಿದಾಯಕ ಶಿವನೇ ಮುದದಿ ರಕ್ಷಿಸಯ್ಯ
ಶಿವಾಯ ಮುದದಿ ರಕ್ಷಿಸಯ್ಯ || ೨ ||

ಸಂಭ್ರಮದಿಂದಲಿ ಸಜ್ಜನರ ಪೋಷಿಪನೆಂದು
ಶಿವಾಯ ಸಜ್ಜನರ ಪೋಷಿಪನೆಂದು
ತಾಮ್ರಪುರೀಶ್ವರನೇ ತವಕದಿಂ ಸಲಹಯ್ಯ
ಶಿವಾಯ ತವಕದಿಂ ಸಲಹಯ್ಯ || ೩ ||

35. ಶಂಕರ ಶಶಿಧರ ಗಜಚರ್ಮಾಂಬರ

ಶಂಕರ ಶಶಿಧರ ಗಜ ಚರ್ಮಮಾಂಬರ
ಗಂಗಾಧರ ಹರನೇ
ಸುಂದರ ಸ್ಮರಹರ ಗೌರಿ ಮನೋಹರ
ಜಯ ಪರಮೇಶ್ವರನೇ |

ಜಯ ಜಯ ಶಂಕರನೇ...ಜಯ ವಿಶ್ವೇಶ್ವರನೇ,...

ಈಶ ಗಿರೀಶ ಮಹೇಶ ಉಮೇಶ
ಜಯ ವಿಶ್ವೇಶ್ವರನೇ,
ಶೂಲಿಕಪರ್ದಿ ತ್ರಿನೇತ್ರ ತ್ರಿಯಂಬಕ
ಜಯಮೃತ್ಯುಂಜಯನೇ ಜಯಮೃತ್ಯುಂಜಯನೇ

ಜಯ ಜಯ ಶಂಕರನೇ...ಜಯ ವಿಶ್ವೇಶ್ವರನೇ,...

ಭಕುತಿಗೆ ಬೇಗನೆ ಒಲಿಯುವ ದೇವನೇ
ಜಯ ತ್ರಿಪುರಾಂತಕನೇ |
ಬೇಡಿದ ವರಗಳ ಆ ಕ್ಷಣ ನೀಡುವ
ಸಾಂಬ ಸದಾಶಿವನೇ ಸಾಂಬ ಸದಾಶಿವನೇ

ಜಯ ಜಯ ಶಂಕರನೇ...ಜಯ ವಿಶ್ವೇಶ್ವರನೇ,...

ಋಷಿಗಳ ಹೃದಯದಿ ಮನೆಯನು ಮಾಡಿದ
ತ್ರಿಭುವನ ಪಾಲಕನೇ,
ಲೋಕವ ರಕ್ಷಿಸೇ ವಿಷವನು ಕುಡಿದ
ಕರುಣಾಸಾಗರನೇ ಕರುಣಾಸಾಗರನೇ

36. ಮಲ್ಲಯ್ಯ ಮಲ್ಲಯ್ಯ ಶ್ರೀಗಿರಿ

ಮಲ್ಲಯ್ಯ ಮಲ್ಲಯ್ಯ ಶ್ರೀಗಿರಿ
ಮಲ್ಲಯ್ಯನ ನೋಡೋಣ ಬನ್ನಿರಿ || ಪ ||

ಉದಯದಲೆದ್ದು ನೆನೆ ಮನವೆ
ಮದನಾರಿಯರೆಲ್ಲ ಶಿವಶರಣ
ಕದಳಿವನದ ಒಡೆಯನ ನೆನೆದರೆ
ಪದವಿ ಕೊಡುವನು ಮಲ್ಲಯ್ಯ || ೧ ||

ಮಂಟಪ ಮಂಟಪ ಗೋಪುರ ಶಿವಾಲಯ
ಎಂಟು ದಿಕ್ಕಿಗೆ ಮಲ್ಲಯ್ಯ
ಮಂಟಪದೊಳಗಿನ ಪಾದವು ಕಂಡರೆ
ಕಂಟಕವೆಲ್ಲ ಪರಿಹಾರ || ೨ ||

ಮೇಲೆ ನೋಡಿದರೆ ಮಳೆಯಯ್ಯ
ಕೆಳಗೆ ನೋಡಿದರೆ ಕೆಸರಯ್ಯ
ಕಾಲು ಜಾರಿತು ಕೋಲು ಮುರಿದಿತು
ಕೊಪ್ಪರಿ ಹೊಡೆಯಿತು ಮಲ್ಲಯ್ಯ || ೩ ||

ಎಲ್ಲಾ ದೇವಂಗಳಿಗೆ ಒಡೆಯ
ಬಲ್ಲಿದನೂ ಶ್ರೀ ಚನ್ನಮಲ್ಲ
ಎಲ್ಲಿ ನೋಡಿದರೆ ತಾನಲ್ಲ
ನಂಬಿದ ಭಕ್ತರಿಗಿಹನಲ್ಲ || ೪ ||

ಇಲ್ಲಿಂದಲ್ಲಿಗೆ ಹೋದರೆ ತಾನು
ಏನು ಕೊಡುವನು ಮಲ್ಲಯ್ಯ
ಹತ್ತುವುದಕ್ಕೆ ಆನೆ ಅಂಬಾರಿ
ಛತ್ರಿ ಕೊಡುವನು ಮಲ್ಲಯ್ಯ || ೫ ||

ಧನವು ಕೊಡುವ ಧನ ಧಾನ್ಯವು ಕೊಡುವ
ಸಿರಿಯ ಕೊಡುವ ಸಿರಿಸಂಪದ ಕೊಡುವ
ಜಗತ್ಯದೊಳಗೆ ಶ್ರೇಷ್ಠನೆಂದು
ಕೊಂಡಾಡುವರು ಮಲ್ಲಯ್ಯ || ೬ ||

ಅನ್ನದಾನವ ಮಾಡುವ ಮಲ್ಲ
ಚೆನ್ನದ ಗಿರಿ ಶ್ರೀ ಚನ್ನಮಲ್ಲ
ಎಲ್ಲಿ ನೋಡಿದರೆ ತಾನಲ್ಲ
ನಂಬಿದ ಭಕ್ತರಿಗಿಹನಲ್ಲ || ೭ ||

ಹೇ ಬಿಸಿಮಲ್ಲ ಹೇ ಬಿಸಿಮಲ್ಲ
ಲೀಗೋ ಮಾರ್ ಹೈ ಪರ್ವತ ಮಲ್ಲ
ಏಕೋ ಅಲ್ಲಾಕು ಅಜಾರು ನಾಂ ಹೈ
ಪಾಶಾಂಕುಶಧರ ಪರ್ವತ ಮಲ್ಲ || ೮ ||

37. ಶಿವ ದರುಷನ ಎಮಗಾಯಿತು

ಶಿವ ದರುಶನ ಎಮಗಾಯಿತು
ಕೇಳಿರಿ ಶಿವರಾತ್ರಿಯ ಜಾಗರಣೆಯಲಿ
ಭವ ಬಂಧನವನು ಪರಿಹಾರ ಮಾಡುವ
ಪಾರ್ವತಿ ರಮಣನ ಕರುಣದಲಿ || ಪ ||

ಬೇಡಿದ ವರಗಳ ಕೊಡುವ ತಾಯಿ
ಭ್ರಮರಾಂಬಿಕೆ ಕೊಂಡಾಡುತಲಿ
ಹಾಡುತ ಪಾಡುತ ಬೆಳ್ಳಿಯ ಬಸವನ
ಆನಂದದಿ ನಲಿದಾಡುತಲಿ || ೧ ||

ಪಾತಾಳ ಗಂಗೆಯ ಸ್ನಾನ ಮಾಡಲು
ಪಾತಕವೆಲ್ಲ ಪರಿಹಾರವು
ಜ್ಯೋತಿರ್ಲಿಂಗನ ಧ್ಯಾನವ ಮಾಡಲು
ಜ್ಯೋತಿರ್ಮಯವೇ ಅನುದಿನವು || ೨ ||

ಶಿಖರೇಶ್ವರನ ಪರ್ವತವೇರಿ
ಶಿವನ ಸ್ಮರಣೆ ನಾವು ಮಾಡಿದೆವು
ಶಿಖರವು ಕಂಡೆವು ಭಾನುಮಂಟಪದಲಿ
ಶ್ರೀಮಹಾದೇವನ ಕರುಣದಲಿ || ೩ ||

38. ಮಲ್ಲಯ್ಯ ಶ್ರೀಶೈಲ ಮಲ್ಲಯ್ಯ

ಮಲ್ಲಯ್ಯಾ... ಶ್ರೀಶೈಲ ಮಲ್ಲಯ್ಯಾ
ನಾವು ನೆನೆದಾಗ ಬರಬಾರದೇ
ನಿನ್ನ ಪೂಜಿಸುವೆವು ನಿನ್ನ ಧ್ಯಾನಿಸುವೆವು
ನಾವು ನೆನೆದಾಗ ಬರಬಾರದೇ ॥ ಪ ॥

ಭಸ್ಮಾಸುರನಿಗೆ ವರವ ಕೊಟ್ಟೆ
ಬಾಣಯಮನನ್ನು ಕಾಯ್ದು ಬಿಟ್ಟೆ
ರಾವಣಸೂರನಿಗೆ ಲಿಂಗ ಕೊಟ್ಟೆ
ಗೋಕರ್ಣ ಕ್ಷೇತ್ರದಲ್ಲಿ ನೆಲೆಸಿ ಬಿಟ್ಟೆ ॥ ೧ ॥

ಮಾರ್ಕಂಡೇಯನಿಗೆ ವರವ ಕೊಟ್ಟೆ
ಕಾಲಯಮನನ್ನು ಕೊಂದುಬಿಟ್ಟೆ
ಶ್ಯಾಮಲಾದೇವಿಗೆ ಅಭಯ ಕೊಟ್ಟೆ
ಲಿಂಗದೊಳಗೆ ಮಾಯವಾಗಿ ಬಿಟ್ಟೆ ॥ ೨ ॥

ಬೇಡರ ಕಣ್ಣಪ್ಪಗೆ ವರವ ಕೊಟ್ಟೆ
ಚೆನ್ನಬಸವಣ್ಣಗೆ ಅಭಯ ಕೊಟ್ಟೆ
ಹೇಮರೆಡ್ಡಿ ಮಲ್ಲಮ್ಮಗೆ ದರ್ಶನ ಕೊಟ್ಟೆ
ಶ್ರೀಶೈಲ ಕ್ಷೇತ್ರದಲ್ಲಿ ನೆಲೆಸಿ ಬಿಟ್ಟೆ ॥ ೩ ॥

39. ಶ್ರೀಶೈಲ ವಾಸ ಶ್ರೀಮಲ್ಲಿನಾಥ

ಶ್ರೀಶೈಲ ವಾಸ ಶ್ರೀಮಲ್ಲಿನಾಥ
ನಂಬಿದ ಭಕ್ತರಿಗೆ ವರ ನೀಡುವಾತ || ಪ ||

ಶಿವನೇ ಬಸವ ಬಸವ ಶಿವನೇ
ಅನುದಿನವು ನೆನೆಯುವರ ಮನೆಯೇ ಕೈಲಾಸ || ೧ ||

ಶ್ರೀದೇವಿ ಶಕ್ತಿ ಶ್ರೀ ಭ್ರಮರಾಂಭ
ಪರಶಿವನ ಸತಿಯೇ ಶ್ರೀ ಜಗದಾಂಬ || ೨ ||

ಶ್ರೀಶೈಲ ದರುಶನ ಮಾಡಿದ ಭಕುತರ
ಲೆಕ್ಕವನ್ನು ಬರೆವ ಶ್ರೀ ಸಾಕ್ಷಿ ಗಣಪ || ೩ ||

ನಾಗಲೋಟಿಯಲ್ಲಿ ಶ್ರೀ ವೀರಭದ್ರ
ಶ್ರೀಶೈಲ ಕಾಯುವ ಕಾಯಕದ ರುದ್ರ || ೪ ||

ಮಲ್ಲಯ್ಯನ ಕೂಗಿ ಕೊಳದಲ್ಲಿ ಹಾರಿದ
ಬಾಲ ಸಿದ್ರಾಮನ ಸ್ವಾಮಿ ಕೈಹಿಡಿದ || ೫ ||

40. ಅಚ್ಚ ಮಲ್ಲಿಗೆ ಹೂವ್ವ ಮೆಚ್ಚಿಕೊರೋ ಮಲ್ಲಯ್ಯ

ಅಚ್ಚಮಲ್ಲಿಗೆ ಹೂವ ಮೆಚ್ಚಿಕೊರೋ ಮಲ್ಲಯ್ಯ

ಚೈತ್ರಾ ವೈಶಾಖ ದಿನ ಯುಗಾದಿ ಪಾಡ್ಯಾಕ
ಕಲ್ಲೊಳಗಿನ ಜಳಕ ಮಾಡ್ಯಾನ ಮಲ್ಲಯ್ಯ
ಜಟಗೂದಲು ಬಿಟಗೊಂಡು ನಿಲುವಂಗಿ ತೊಟಗೊಂಡು
ಮುರಗಿಯ ಬೆತ್ತ ಹಿಡಿದಾನ ಮಲ್ಲಯ್ಯ

ನಿಜಭಕ್ತಳು ಮಲ್ಲಮ್ಮ ದರುಶನಕ ಬಂದಾಳ
ಆಕಾಶದಿ ಗಂಟೆ ನುಡಿದಾವ ಒಂದೇ ಸವನೆ
ಹುಚ್ಚಾನಾದೇನಮ್ಮ ಮೆಚ್ಚಿದೆ ನಿನ್ನ ಭಕ್ತಿಗೆ
ಏನು ಬೇಡತಿ ಬೇಡು ಎಂದಾನೊ ಮಲ್ಲಯ್ಯ

ಏನು ಬೇಡಲಿ ತಂದೆ ಏನು ಕೇಳಲಿ ತಂದೆ
ಹಳಸಿದ ಅಂಬಲಿ ಬೇಡಿದ್ದೊ ಮಲ್ಲಯ್ಯ
ಮಣ್ಣಿನ ಪಾತ್ರೆಯೊಳಗ ನೈವೇದ್ಯ ಹಿಡಿದಾಳ
ಅಮೃತಾವ ಮಾಡಿ ಸವಿದಾನೊ ಮಲ್ಲಯ್ಯ

ಹುಚ್ಚನಾದೇನಮ್ಮ ಮೆಚ್ಚಿದೆ ನಿನ್ನ ಭಕ್ತಿಗೆ
ರೆಡ್ಡೆರಾ ಕುಲಕಾ ಬಡತನಿಲ್ಲೆಂದನು ಮಲ್ಲಯ್ಯ
ಅಕ್ಕಮಹಾದೇವಿ ಕದಳಿಯ ವನದಾಗ
ತಾಪವನ್ನು ಗೈದು ಕಂಡಾಳೊ ಮಲ್ಲಯ್ಯ

ಸಿದ್ಧರಾಮಗ ಬುತ್ತಿ ತರಹೇಳಿದ ಮಲ್ಲಯ್ಯ
ಬುತ್ತಿ ತರುವುದರೊಳಗ ಮಟಮಾಯಾ ಮಲ್ಲಯ್ಯ
ಮಲ್ಲಯ್ಯ ಸಿಗಲಿಲ್ಲ ಕೊಳದಲ್ಲಿ ಹಾರ್ಯಾನ
ಬಾಲಭಕ್ತಿಗೆ ಒಲಿದು ಕೈ ಹಿಡಿದ ಮಲ್ಲಯ್ಯ

41. ಮಾಡಿರಿ ಮಲ್ಲಯ್ಯನ ಧ್ಯಾನ

ಮಾಡಿರಿ ಮಲ್ಲಯ್ಯನ ಧ್ಯಾನ
ಆಗುವುದು ಜನ್ಮ ಪಾವನ

ಹರಹರ ಮಲ್ಲಿನಾಥ ಅರಸ
ಗುಡಿಮೇಲೆ ಬಂಗಾರದ ಕಳಸ

ಸಿದ್ಧ ಕಮರಿಯ ಮಠದಾಗ
ಮಲ್ಲಯ್ಯ ಪರ್ವತ ಗಿರಿಮ್ಯಾಲ

ಅಕ್ಕ ಕದಳಿಯ ವನದಾಗ
ಮಲ್ಲಯ್ಯನ ನೆನೆಯುತ ಗುಹೆಯೊಳಗ

ಮಲ್ಲಯ್ಯನ ಹುಡುಕುತ ನಡೆದಾನ
ಶ್ರೀಶೈಲ ದಾರಿಯ ಹಿಡಿದನ

ಹರಹರ ನವಣೆಯ ಹೊಲದಾಗ
ಗುರು ಭೇಟಿಯಾಗ್ಯಾನ ಮಲ್ಲಯ್ಯ

42. ನೀಡು ಶಿವ ನೀಡದಿರು ಶಿವ

ನೀಡು ಶಿವ ನೀಡದಿರು ಶಿವ
ಬಾಗುವುದು ಎನ್ನ ಕಾಯ
ನಾನೇಕೆ ಅಂಜಲಿ ನೀ ನನ್ನ ಅಂಬಲಿ
ನೀಡು ಶಿವ ನೀಡದಿರು ಶಿವ
ಬಾಗುವುದು ಎನ್ನ ಕಾಯ ॥ ಪ ॥

ಶೃಂಗಾರ ಕೃತಕ ಬಂಗಾರ ಕ್ಷಣಿಕ
ಬಾಳಲ್ಲಿ ಬಡಿವಾರವೇಕೆ ॥
ನೀನಿತ್ತ ಕಾಯ ನಿನ ಕೈಲಿ ಮಾಯ ॥
ಆಗೋದು ಹೋಗೋದು ನಾ ಕಾಣೆನೆ || ೧ ||

ಮಾಳಿಗೆ ಕೊಟ್ಟರು ಮರದಡಿಯೆ ಇಟ್ಟರೂ
ನಾನಂತೂ ನಿನ್ನನ್ನಲಾರೆ ॥
ಸಾರಂಗ ಮನಕೆ ನೂರಾರು ಬಯಕೆ ॥
ಮುಂದಿಟ್ಟು ಉಣಿಸೋದು ನಾ ಕಾಣೆನೆ || ೨ ||

43. ಶಿವನು ಭಿಕ್ಷಕ್ಕೆ ಬಂದ ನೀಡುಬಾರೆ ತಂಗಿ

ಶಿವನು ಭಿಕ್ಷಕ್ಕೆ ಬಂದ ನೀಡುಬಾರೆ ತಂಗಿ
ಈತನಗಿಂತ ಶರಣನಿಲ್ಲ ನೋಡುಬಾರೆ

ಒಂದು ಕೈಯಲ್ಲಿ ಬೆಳ್ಳಿ ಬೆತ್ತ ನೋಡೆ
ಮತ್ತೊಂದು ಕೈಯಲ್ಲಿ ತ್ರಿಶೂಲ ನೋಡೆ
ಒಂದು ಕೈಯಲ್ಲಿ ಮಾರ್ಬಲ ನೋಡೆ
ಮತ್ತೊಂದು ಕೈಯಲ್ಲಿ ಕಾಪಾಲ ನೋಡೆ
ಹೆಗಲಲ್ಲಿ ಮಾತಿನ ಗಿಣಿಯ ನೋಡೆ
ತನ್ನ ಮುಗಿಲು ಕೆಂಪು ಕವಿ ಎಂಬ ವಸ್ತ್ರ ನೋಡೆ ತಂಗಿ
ಈತನಿಗಿಂತ ಶರಣನಿಲ್ಲ ನೋಡುಬಾರೆ

ಹುಣ್ಣಿಮೆ ಚಂದ್ರಮನಂತೆ ಹೊಳಪು ನೋಡೆ
ಮೂರು ಬೆರಳಿಂದ ಧರಿಸಿದಂತಹ ಭಸ್ಮ ನೋಡೆ
ಮುಕ್ಕಣ್ಣನ ಅವತಾರ ಈತ ನೋಡೆ
ಸತ್ಯವುಳ್ಳ ಸದಾಶಿವ ಬಂಧನ ನೋಡೆ ತಂಗಿ
ಈತನಿಗಿಂತ ಚೆಲುವನಿಲ್ಲ ನೋಡುಬಾರೆ

ಮೈಯೆಲ್ಲಾ ಹಾವುಗಳ ಮಚ್ಚಾ ನೋಡೆ
ಬಲಗೈಯ್ಯಲ್ಲಿ ಗಗ್ಗರಿ ಬೆತ್ತ ನೋಡೆ
ವೈಯಾರ್ತ ಮೂರುಲೋಕ ಕರ್ತ ನೋಡೆ
ತಯ್ಯಾ ತಯ್ಯಾವೆಂಬ ಹರ್ತಿ ನೋಡೆ ತಂಗಿ
ಈತನಿಗಿಂತ ಶರಣನಿಲ್ಲ ನೋಡುಬಾರೆ

ಕಾರೇಕಲ್ಲು ದೇವನು ಈತನೋಡೆ
ಮೂರು ದುರ್ಗಾವ ಕೆಡವಿದಂತ ರುದ್ರ ನೋಡೆ
ಕಾರೇಕಲ್ಲು ಕಲಿ ವೀರಭದ್ರ ನೋಡೆ

ಸತ್ಯಲೋಕ ಪದವಿಯನ್ನು ಕೊಡುವ ಬಾರೆ ತಂಗಿ
ತನಗಿಂತ ಚೆಲುವರಿಲ್ಲ ನೋಡುಬಾರೆ

44. ಶಿವಪ್ಪ ಕಾಯೋ ತಂದೆ

ಶರಣು ಶಂಕರ ಶಂಭೋ
ಓಂಕಾರನಾದ ರೂಪಾ
ಮೊರೆಯ ನೀ ಆಲಿಸೀ
ಪಾಲಿಸೋ ಸರ್ವೇಶಾ.....

ಶಿವಪ್ಪ ಕಾಯೋ ತಂದೆ
ಮೂರುಲೋಕ ಸ್ವಾಮಿ ದೇವಾ
ಹಸಿವೆಯನ್ನು ತಾಳಲಾರೆ
ಕಾಪಾಡೆಯ ಹರನೇ ಕಾಪಾಡೆಯಾ || ಪ ||

ಭಕ್ತಿಯಂತೆ ಪೂಜೆಯಂತೆ
ಒಂದೂ ಅರಿಯೆ ನಾ
ಪಾಪವಂತೆ ಪುಣ್ಯವಂತೆ
ಕಾಣೆನಯ್ಯ ನಾ.. ಹರನೇ || ೧ ||

ಶುದ್ಧನಾಗಿ ಪೂಜೆಗೈವೆ
ಒಲಿವೆಯಂತೆ ನೀ
ಶುದ್ಧವೋ ಅಶುದ್ಧವೋ
ನಾ ಕಾಣೆ ದೇವನೇ.... || ೨ ||

ನಾದವಂತೆ ವೇದವಂತೆ
ಒಂದು ತಿಳಿಯೇ ನಾ

ಬೆಂದ ಜೀವ ನೊಂದು

ಕೂಗೆ ಬಂದು ನೋಡೆಯಾ ಹರನೇ || ೩ ||

45. ಬಾರಯ್ಯ ವೀರೇಶ ಬಾ ನನ್ನ ತಂದೆ

ಬಾರಯ್ಯ ವೀರೇಶ ಬಾ ನನ್ನ ತಂದೆ

ದಾರಿಯ ತೋರಿಸು ನೀ ನನ್ನ ಮುಂದೆ || ಪ ||

ಮಾಯದ ಬೆಳಕಿಗೆ ಮರೆ ಹೋದೆ ನಾ

ನಿನ್ನ ನಾಮವ ನೆನೆಯದೆ ಮರೆದೊಡ ನಾ || ೧ ||

ಕೇಳದ ಕಿವಿಗಳು ಕಿವುಡಾದವು

ನಿನ್ನ ನೋಡದ ಕಂಗಳು ಕುರುಡಾದವು || ೨ ||

ನಾನೇನು ಅರಿಯದೆ ದುಮುಕಿದೆ ನಾ

ನೀ ಪಾರುಗಾಣಿಸು ವೀರೇಶನೇ || ೩ ||

ಧರೆಯೊಳು ಕಾರೇಕಲ್ಲು ಪುರದೊಳು ಮೆರೆಯುವ

ನಿನ್ನ ನಂಬಿದ ಭಕ್ತರಿಗೆ ವರಗಳ ನೀಡುವ || ೪ ||

46. ಭಕ್ತರ ದೈವ ವೀರಭದ್ರ

ಭಕ್ತರ ದೈವ ವೀರಭದ್ರನೆ ಸಾಗಿ ಬಾರಣ್ಣ ।
ಭಕ್ತಿಭಾವದಿಂದ ದಾರಿ ಕಾದಿಹೆವು ಮನೆಗೆ ಬಾರಣ್ಣ॥ಪ॥

ಬಾರಣ್ಣ ದರುಶನ ತೋರಣ್ಣ....
ವೀರಣ್ಣ ದರುಶನ ತೋರಣ್ಣ.... ॥ಅನು॥

ಜಗದ ಜ್ಯೋತಿ ನೀ ವೀರೇಶ ಭಕ್ತರಿಗೆ ಬೆಳಕ ।
ನಿನ್ನ ಸ್ಮರಿಸುತಾ ಕೊಂಡಾಡುವೆವು ಜೀವ ಇರುತನಕ ।
ಕಾರೇಕಲ್ಲಿನ ಪರಮಾತ್ಮ ನೀ ಕಾಯೋ ಕಡೆ ತನಕ ॥
ಕೋಟಿ ಭಕ್ತರು ಬರುವರು ಸ್ವಾಮಿ ನಿನ್ನ ದರುಶನಕ॥೧॥

ಯಡೂರಪುರದಲಿ ಕೃಷ್ಣ ದಡದಲಿ ನಿನ್ನ ರೂಪ ಚೆಂದ ।
ಲಿಂಗರೂಪದ ನಿನ್ನ ದರುಶನ ಭಕ್ತರಿಗಾನಂದ ।
ನಿನ್ನ ಪಾದವ ತೊಳೆಯುತ ಸಾಗಿಹಳೊ ಕೃಷ್ಣೆ ಮುಂದಾ
ಎಲ್ಲರ ಕಾಯಲು ಎಡೂರದಲ್ಲಿ ನೆಲೆಸಿದೆ ನೀ ಅಂದ ॥೨॥

ದೈತ್ಯ ಸಂಹಾರ ಭಕ್ತರೊದ್ಧಾರ ಮಾಡಿದೆ ವೀರಣ್ಣ ।
ನಿನ್ನ ನಾಮ ನಮಗೆ ಪ್ರೇಮ ನಂಬಿದೆ ನಿನ್ನ ಚರಣ ।
ಗೊಡಚಿ ಪುರದ ದರುಶನದಿಂದ ಜನ್ಮ ಪಾವನ ॥
ನೀ ಕೃಪೆ ತೋರಿ ಹರಸಲು ಸ್ವಾಮಿ ಕುಣಿವದು ನನ್ನ ಮನ ॥೩॥

47. ವೀರಭದ್ರ ವೀರಭದ್ರ ಎನ್ನಿರಿ

ವೀರಭದ್ರ ವೀರಭದ್ರ ಎನ್ನಿರಿ
ಹರುಷದಿಂದ ಜಯಘೋಷ ಮಾಡಿರಿ || ಪ ||

ದುರುಳ ದೈತ್ಯರನ್ನು ಸಂಹರಿಸಿದ ಶೂರಧೀರಗೆ || ಅನು ||

ಹಿರಣ್ಯೆಂಬ ರಾಕ್ಷಸನು ಹದಿನಾಲ್ಕು ಲೋಕವನ್ನು
ಚಾಪೆ ಸುರುಳಿ ಸುತ್ತಿಕೊಂಡು ಕದ್ದೊಯ್ಯುತ್ತಿರುವಾಗ
ನಾರದಮುನಿ ಇದನ ಕಂಡು ಪರಶಿವನಿಗೆ ತಿಳಿಸಿದನು
ಆಗ ಶಿವನು ವೀರಭದ್ರನನ್ನು ಕರೆದನು..... || ೧ ||

ಗಂಡುಗಲಿ ವೀರಭದ್ರ ತಂದೆ ಮುಂದೆ ಬಂದುನಿಂತ
ಹಿರಣ್ಯ ರಾಕ್ಷಸನನ್ನು ಸಂಹಾರ ಮಾಡೆಂದ
ಶಿವನಪ್ಪಣೆ ಆದೊಡನೆ ಗುಡಿಗುಡಿಸಿ ಆರ್ಭಟಿಸಿ
ಕಿಡಿಯನ್ನು ಉಗಳುತ್ತಾ ಜಡೆಯ ಕೆದರಿದಾ..... || ೨ ||

ಕೈಯಲ್ಲಿ ಖಡ್ಗಬಾರಿ ಸೊಂಟಭಾರ್ಗ ರಣಚಾರಿ
ಈಶ್ವರ ಮುಖ ನಂದಿಧ್ವಜ ನಾಗಾಭರಣನಿಟ್ಟು
ಅಂಗುಷ್ಟ ಕುಣಿಸುತ್ತಾ ಕಾಶಿ ಪೀತಾಂಬರುಟ್ಟು
ವೀರಕೇಕೆ ಹಾಕುತ್ತಾ ರಣಕೆ ಹೊರಟಾ....... || ૩ ||

ಹಿರಣ್ಯ ರಾಕ್ಷಸ ಎದಿರು ಹೋಗಿ ನಿಂತ
ಹತ್ತು ಸಾರಿ ಹುಟ್ಟಿಬರುವ ನರಹರಿಯೇ ಎಂದ
ಈ ಸ್ವಾಮಿಯ ಆರ್ಭಟಕೆ ದೈತ್ಯ ಪಾದಕ್ಕೆರಗಿದ
ಕರಗಸದಿ ಅವನ ರುಂಡ ಕೊಯ್ದು ಭದ್ರಾ..... || ೪ ||

ಅವನ ನರಗಳನ್ನು ತೆಗೆದು ಸರವ ಮಾಡಿ ಧರಿಸಿದ
ಆಗ ತಂದೆ ಪರಶಿವನು ಎತ್ತಿ ಮುದ್ದನಾಡಿದ
ತಾಯಿ ಪಾರ್ವತಿ ಬಂದು ರತ್ನ ನೀವಾಳಿ ತೆಗೆದು
ಕಾಶಿಕಟ್ಟಿ ನಾಟ್ಯವಾಡಿದಂತ ಮಹಿಮನು
ಗದಗ ಶಹಾಪುರ ಪೇಟೆ ವೀರಭದ್ರನು...... ॥ ೫ ॥

48. ಧೀರಾಯೋಗಿ ವೀರೇಶ್ವರನ

ಧೀರಾಯೋಗಿ ವೀರೇಶ್ವರನ ಸ್ತೋತ್ರವ ಮರಿಬೇಡ
ಮಾಯದ ಸಂಸಾರ ನೀನು ನಂಬಿ ಕೆಡಬೇಡ ॥ಪ॥

ಸಂಸಾರ ಎಂಬ ಸಂತೆಯೊಳಗೆ ಯಾತಕ್ಕೆ ನೀ ಬಂದೆ
ಈ ಸಂತೆಯೊಳಗೆ ಬಾಳ ಎಚ್ಚರಿಕೆ ಮುಂದೆ
ನಿಂತರೆ ಶಿವನೇ ಕುಂತರು ಶಿವನೇ
ಸಂತಸದಿಂದ ಶಿವನಪಾದ ಕಾಣೋ ಮಾನವನೇ ॥೧॥

ಹೆಣ್ಣು-ಹೊನ್ನು-ಮಣ್ಣು ಎಂಬುದು ಬ್ರಾಂದಿಗೆ ಬರುತ್ತೈತೆ
ಆ ಯಮನು ಹೊಯ್ಯುವಾಗ ಇಲ್ಲೇನ್ ಇರುತ್ತೈತಿ
ಹೆಣ್ಣಿನ ಮಹಿಮೆ ಹೊನ್ನಿನ ಮಹಿಮೆ
ಸಂತಸದಿಂದ ಶಿವನಪಾದ ಕಾಣೋ ಮಾನವನೇ ॥೨॥

ಕಾಮಕ್ರೋಧ ಎಂಬುದೊಂದು ಕಳ್ಳರ ಗುಂಪೈತೆ
ಮಂಗ ಮನುಜ ಕೈಯಲ್ಲಿ ಸಿಕ್ಕರೆ ಸುಮ್ಮನೆ ಬಿಟ್ಟಿತೆ
ಕುಂತರು ಶಿವನೇ ನಿಂತರು ಶಿವನೇ
ಸಂತಸದಿಂದ ಶಿವನಪಾದ ಕಾಣೋ ಮಾನವನೇ ॥೩॥

49. ಶರಣು ಶರಣು ವೀರಭದ್ರ

ಶರಣು ಶರಣು ವೀರಭದ್ರ
ಜಯತು ಜಯತು ವೀರಭದ್ರ || ಪ ||

ವರವನ್ನು ನೀಡುವಾ ವೀರಭದ್ರಸ್ವಾಮಿ
ಭಕ್ತರನ್ನು ಕಾಯುವ ಶಿವಸುತ ನೀನು
ಬೂದಿಮುಚ್ಚಿದ ಕೆಂಡ ಎಂದು ಹೆಸರಾದ ವೀರೇಶ ನೀ || ೧ ||

ಹಣೆಯ ಮೇಲೆ ವಿಭೂತಿಯನ್ನು ಧರಿಸಿದವನು ನೀನು
ಕೊರಳಲ್ಲಿ ರುಂಡಮಾಲೆ ಧರಿಸಿದವನು ನೀನು
ಮಾರುತಿಗೆ ಲಿಂಗವ ಕೊಟ್ಟ ಅಚ್ಚಾಳು ವೀರಭದ್ರ ನೀ || ೨ ||

ಶಿವನ ಉರಿನೇತ್ರದಿಂದ ಹುಟ್ಟಿದವನು ನೀನು
ಕೈಯಲ್ಲಿ ಖಡ್ಗವ ಹಿಡಿದು ನಿಂತಿರುವವ ನೀನು
ದಕ್ಷನ ರುಂಡವ ಕುಡಿದು ಯಜ್ಞ ಕೆಡಿಸಿದ ವೀರ ನೀ || ೩ ||

ಒಕ್ಕಲಿಗರನ್ನು ಸದಾ ಕಾಯುವವನು ನೀನು
ಮುತ್ತೈದೆಯರನ್ನು ರಕ್ಷಿಸುವವ ನೀನು
ಕಾರೇಕಲ್ಲು ಕ್ಷೇತ್ರದಲ್ಲಿ ನೆಲೆಸಿದಂತೆ ಕನ್ನಡಿಗನು ನೀನು || ೪ ||

50. ಓ ವೀರಭದ್ರ ಜಯ ವೀರಭದ್ರಾ

ಓ ವೀರಭದ್ರ ಜಯ ವೀರಭದ್ರಾ
ಕರವಾಳಧರ ಶಿವ ರುದ್ರ ಭದ್ರ ||ಪ||

ಕಪಿಧ್ವಜ ವೀರಾಜ ಕನ್ನಡದ ರಾಜ
ವಾಲಿ ಸುಗ್ರೀವರ ಮಂತ್ರಿ ಸುರತೇಜ
ಮಾರುತಿ ದೇವಗೆ ಲಿಂಗದೀಕ್ಷೆ
ಇಟ್ಟ ಸದ್ಗುರು ವೀರ ನೀಡೆಮಗೆ ರಕ್ಷೆ || ೧ ||

ಕಮಲಾರ್ಚಿತ ವ್ರತಧಾರಿ ಶ್ರೀಹರಿ
ಕಣ್ ಕಮಲವ ನೀರಡಿಯಲ್ಲಿ ಧರಿಸಿ
ಸುದರ್ಶನವಿಟ್ಟ ಕಣ್ಣಡಿಕ ಕನ್ನಡಿಗ
ಕನ್ನಡದ ಹೆಸರಿನ ಕಾರಣಿಕ ಹರಸೋ || ೨ ||

ರಾಮಭದ್ರ ಭಲಭದ್ರರ ಮೂಲಿಗ
ಬುದ್ಧ ಮಹಾವೀರ ಕ್ರಾಂತಿ ಚುಕ್ಕಾಣಿಗ
ಸುರವನ ಮುನಿಗಳ ವೃಂದ ಭಾಸ್ಕರ
ಕಲಿಪುರಧೀಶ್ವರ ಸಲಹೋ ಕರ್ತಾರ || ೩ ||

51. ವರ ವೀರೇಶನು ಬಂದ ವಿಜೃಂಭಣೆಯಿಂದ

ವರ ವೀರೇಶನು ಬಂದ ವಿಜೃಂಭಣೆಯಿಂದ
ಭೂ ಗರ್ಭವ ಭೇದಿಸಿ ಉದ್ಭವಿಸಿ ಬಂದ ॥ ಪ ॥

ಉರಗಭೂಷಣ ಶಿವನ ಉರಿಗಣ್ಣಿನಲ್ಲಿ ಜನಿಸಿ
ದುರಳ ದಕ್ಷಣ ಶಿರವ ತರೆದ ಕಡುಗಲಿ ಬಂದ
ಅಗ್ನಿದೇವನು ಬಂದ ಯಜ್ಞಭಗ್ನನು ಬಂದ
ಯಜ್ಞ ವಿಘ್ನದಿ ಪಿತನ ಆಜ್ಞೆಪಾಲಕನು ಬಂದ ॥ ೧ ॥

ಮುಳ್ಳು ಹಲಿಗೆಯ ಮೆಟ್ಟು ವೀರಗೆಜ್ಜೆಯ ಹಾಕಿ
ದಳ್ಳುರಿ ಬಣ್ಣದ ಕಾಶಿಯನು ತೊಟ್ಟು
ಸೊಂಟ ದಿಕ್ಕೆಡೆಗಳಲಿ ತರಿದ ತಲೆಗಳ ಧರಿಸಿ
ಸೊಕ್ಕಿದ ರಕ್ಕಸರ ನೊಕ್ಕಲಿಕ್ಕಲು ಬಂದ ॥ ೨ ॥

ಧರೆಯೊಳು ಕಾರೇಕಲ್ಲು ಪುರದೊಳು ಸ್ಥಿರ ನೆಲೆಯಾಗಿ
ವರ ವೀರೇಶನೆಂಬ ನಾಮವ ತಳೆದು
ದುಷ್ಟ ಶಿಕ್ಷಕನಾಗಿ ಶಿಷ್ಟ ರಕ್ಷಕನಾಗಿ
ಭಕ್ತರ ಅಭಿಷ್ಟವನ್ನು ಸಲ್ಲಿಸುತ್ತ ನಿಂದ ॥ ೩ ॥

52. ಶಿವಲೋಕದಿಂ ಬಂದ ಶ್ರೀವೀರಭದ್ರೇಶ

ಶಿವಲೋಕದಿಂ ಬಂದ ಶ್ರೀವೀರಭದ್ರೇಶ
ಭುವನ ಪೋಷಣೆಗಾಗಿ ಎಲ್ಲೆಡೆಯೂ ನಿನ್ನ ವಾಸ ||ಪ||

ವೀರಭದ್ರೇಶ್ವರ ಕಲಿ ವೀರಭದ್ರೇಶ್ವರ ||ಅನು||

ನಿನದುಚಿತ ವೇಳೆಯಲಿ ಮಡಿವಂತಿಕೆಯಲಿ |
ಘನವಾದ ನೇಮದಲ್ಲಿ ಪೂಜೆಗೊಳ್ಳುವೆ ನೀನು |
ಗುಗ್ಗುಳದ ಲಗ್ನದಲ್ಲಿ ಅಗ್ನಿಯನ್ನು ತುಳಿವಲ್ಲಿ ||
ಶಸ್ತ್ರ ಧರಿಸುವಲ್ಲಿ ನೀನಿರುವೆ ಭಕ್ತರಲ್ಲಿ | ||೧||

ವೀರಭದ್ರೇಶ್ವರ ಕಲಿ ವೀರಭದ್ರೇಶ್ವರ
ಶತಶತ ರುದ್ರರಿಗೆ ಏಕಾದಶ ರುದ್ರರಿಗೆ |
ತತ್ವರುದ್ರರಿಗೆಲ್ಲ ನೀನೊಡೆಯನಾಗಿರುವೆ |
ಶಿವನ ಉರಿನೇತ್ರದಿಂ ನೀನುದಿಸಿ ಬಂದಿರುವೆ ||
ಶಿವನಿಂದೆ ಗೈದಂತ ದಕ್ಷನ ಶಿರಹರಿದೆ | ||೨||

ವೀರಭದ್ರೇಶ್ವರ ಕಲಿ ವೀರಭದ್ರೇಶ್ವರ

ರೇಣುಕರ ಪೀಠಕ್ಕೆ ಗೋತ್ರಪುರುಷನು ನೀನು |
ಭದ್ರಕಾಳೀಶ್ವರನೇ ರುದ್ರತನು ನೀನು |
ವೀರಕಾಂತಿಯ ಗೈದ ವೀರಭದ್ರನು ನೀನು ||
ಮಾನದಲ್ಲಿ ಪೊರೆಯಯ್ಯ ಚಿಕ್ಕಮಣ್ಣೂರೇಶನೆ | ||೩||

53. ನೋಡಿ ಭೂಲೋಕದ ಗಂಡ ಬಂದ

ನೋಡಿ ಭೂಲೋಕದ ಗಂಡ ಬಂದ ।
ಆ ಹರನ ಮೂರನೆಯ ಕಣ್ಣಿಂದ ।
ಚರಕ ಪದಕ ಖಡ್ಗಧಾರಿ ಇವನೇ ನೋಡಿ ಜಗದೋದ್ಧಾರಿ
ಇವನು ನೆನೆದಾಗ ಕೊಡುವ ಐಸಿರಿ...... ।

ಪ್ರಸೂತಿಯ ಭಕ್ತಿಗೊಲಿದಾತನು ।
ಕುರಿತಲೆಯ ದಹಿಸಿದಾ ಧೀರನು ।
ಆ ಆದಿಶೇಷ ಸೊಂಟದಲ್ಲಿ ನಂದಿಯ ಧ್ವಜವು ಕರದಲ್ಲಿ
ಚಂಡ ಪ್ರಚಂಡನು ಬಂದ ಕರವೀರಭದ್ರನು ಬಂದ
ಕಂಡು ಶರಣೆನ್ನಿರೀಗ..........

ತೇಜಾಯನು ಮಹಾ ತೇಜಾಯನು ।
ಕಲಿವೀರ ಶ್ರೀವೀರಭದ್ರೇಶನು ।
ಆ ವೀರಶೈವರ ಗುರುವಾಗಿ ಒಡಪನು ಹೇಳುವ ಬೆಳಕಾಗಿ
ಬನ್ನಿ ಬೇಗನೆ ಬನ್ನಿ। ದರುಶನ ಕೊಡುವ ಬನ್ನಿ
ಗುರು ಮಹಾಮಹಿಮ ಶಿವರುದ್ರನು......

ಪೂಜ್ಯಾಯನು ಸ್ವಾಮಿ ಪೂಜ್ಯಾಯನು ।
ತ್ರೈಲೋಕದಲ್ಲಿ ಪೂಜೆ ಪಡೆವವನು ।
ಬೆಂಕಿಯ ಜ್ವಾಲೆ ಕಂಗಳಲಿ ರುಂಡಮಾಲೆ ಕೊರಳಲ್ಲಿ ॥
ದಕ್ಷನ ದಹಿಸಲು ಬಂದ । ಗೌರಿಯ ಕಾರಣದಿಂದ ।
ನಮ್ಮ ಕರುನಾಳು ವೀರೇಶನು..........

54. ಬಳ್ಳಾರಿ ಜಿಲ್ಲೆಯ ಕಾರೇಕಲ್ಲು ಗ್ರಾಮದಲ್ಲಿ

ಬಳ್ಳಾರಿ ಜಿಲ್ಲೆಯ ಕಾರೇಕಲ್ಲು ಗ್ರಾಮದಲ್ಲಿ
ನೆಲೆಸಿದೆಯಯ್ಯಾ ಶ್ರೀ ಗುರು ವೀರೇಶ ॥ ಪ ॥

ಹಂಪೆಯ ಹುಣ್ಣಿಮೆ ಜಾತ್ರೆಯ ಸಡಗರವ
ನೋಡೋಣ ಬನ್ನಿರಿ ಹೋಗೋಣ ॥ ೧ ॥

ಭಕ್ತರೆಲ್ಲರೂ ನಿನ್ನ ಧ್ಯಾನ ಮಾಡುವಾಗ
ಮನದಲ್ಲಿ ನೆಲಸಿದೆ ಶ್ರೀಗುರುವೀರೇಶ ॥ ೨ ॥

ಪುರವಂತರೆಲ್ಲರೂ ಒಡಪನ್ನು ಹೇಳುವಾಗ
ವೀರಕೇಕೆ ಹಾಕುತ ಬಂದೆ ಶ್ರೀಗುರುವೀರೇಶ ॥ ೩ ॥

ನಂದಿಧ್ವಜವನ್ನು ಕುಣಿಸುತಲಿರುವಾಗ
ವೀರನಾಟ್ಯವಾಡುತ ಬಂದೆ ಶ್ರೀಗುರು ವೀರೇಶ ॥ ೪ ॥

ವೀರಾವೇಶದಿ ಅಗ್ನಿಯು ಹಾಯುವಾಗ
ರೌದ್ರದಿ ನಿನ್ನನು ಕಂಡೆ ಶ್ರೀಗುರು ವೀರೇಶ ॥ ೫ ॥

ಭಕ್ತರೆಲ್ಲರೂ ತೇರನ್ನು ಎಳೆಯುವಾಗ
ತೇರಿನಲ್ಲಿ ನಿನ್ನನು ಕಂಡೆ ಶ್ರೀಗುರು ವೀರೇಶ ॥ ೬ ॥

ಮುತ್ತೈದೆಯರು ಆರತಿ ಬೆಳಗುವಾಗ
ಜ್ಯೋತಿಯಲ್ಲಿ ನಿನ್ನನು ಕಂಡೆ ಶ್ರೀಗುರು ವೀರೇಶ ॥ ೭ ॥

55. ದಯಮಾಡೋ ರಂಗ ದಯಮಾಡೋ ಕೃಷ್ಣ

ದಯಮಾಡೋ ರಂಗ ದಯಮಾಡೋ ಕೃಷ್ಣ
ದಯಮಾಡೋ ನಿನ್ನಾ ದಾಸ ನಾನೆಂದು ॥ ಪ ॥

ಹಲವು ಕಾಲದಿಂ ನಿನ್ನ ಹಂಬಲ ಎನಗೆ
ಒಲಿದು ಪಾಲಿಸಬೇಕು ವಾರಿಜನಾಭ ॥ ೧ ॥

ಇಹಪರಗತಿ ನೀನೆ ಇಂದಿರಾರಮಣ
ಸಹಾಯ ನಿನ್ನದೇ ಸರ್ವದಾ ತೋರಿ ಕರುಣ ॥ ೨ ॥

ಕರಿರಾಜವರದನೆ ಕಾಮಿತಫಲದ
ಪುರಂದರವಿಠಲ ಹರಿ ಸಾರ್ವಭೌಮನೆ ॥ ೩ ॥

56. ಜಯತು ಜಯ ವಿಠ್ಠಲ

ಜಯತು ಜಯ ವಿಠಲ
ನಿನ್ನ ನಾಮವು ಶಾಂತಿ ಧಾಮವು
ಸೌಖ್ಯದಾ ರಾಮ || ಪ ||

ಪಾವನಾಂಗ ಪಂಡರೀನಾಥ
ಪಾದಸೇವಾ ಪುಣ್ಯವಿನೀತ
ಕರುಣಿಸು ಬಾರಯ್ಯಾ ದರುಶನ ತೋರಯ್ಯ
ನೀ ಎನ್ನ ಭಾಗ್ಯವಯ್ಯ
ಪಾಂಡುರಂಗ, ಪಾಂಡುರಂಗಯ್ಯ || ೧ ||

ಕನಸು ಮನಸಿನ ಜೀವವು ನೀನೇ
ಅಂತರಾತ್ಮನ ಭಾವವು ನೀನೇ
ಅನ್ಯವು ಇಲ್ಲಯ್ಯ ಎಲ್ಲವು ನೀನಯ್ಯಾ
ಸುಖವೆಂದ ಮಾತಿದಯ್ಯ
ಪಾಂಡುರಂಗ ಪಾಂಡುರಂಗಯ್ಯ || ೨ ||

57. ಜಯ ಪಾಂಡುರಂಗ ಪ್ರಭೋ ವಿಠ್ಠಲಾ

ಜಯ ಪಾಂಡುರಂಗ ಪ್ರಭೋ ವಿಠ್ಠಲಾ
ಜಗದಾಧಾರ ಜಯ ವಿಠ್ಠಲಾ ‖ ಪ ‖

ಪಾಂಡುರಂಗ ವಿಠ್ಠಲಾ ಪಂಡರಿನಾಥ ವಿಠ್ಠಲ ||ಅನು||

ನೀ ಆಕಾಶದಲಿ ನೀಲಿಯಾಗಿ
ಭಾಸ್ಕರನಲ್ಲಿ ಕಾಂತಿಯಾಗಿ
ಚಂದಿರನಲ್ಲಿ ಚಂದ್ರಿಕೆಯಾಗಿ
ಸಾಗರದಲ್ಲಿ ಅಲೆ ಅಲೆಯಾಗಿ
ಎಲ್ಲೆಲ್ಲು ನೀನಿರುವೆ ತಂದೆ
ಜಗವೆಲ್ಲಾ ತುಂಬಿರುವೆ ತಂದೆ||
ಜಗವೆಲ್ಲಾ ತುಂಬಿರುವೆ ತಂದೆ.... || ೧ ||

ಅರಳುವ ಹೂವಲಿ ಪರಿಮಳವಾಗಿ
ಬೀಸುವ ಗಾಳಿಲಿ ನೀ ತಂಪಾಗಿ
ಕೋಗಿಲೆ ಕಂಠದಿ ಸಂಗೀತವಾಗಿ
ಭಕುತರ ಹೃದಯದಿ ಆನಂದವಾಗಿ
ಎಲ್ಲೆಲ್ಲು ನೀನಿರುವೆ ತಂದೆ
ಜಗವೆಲ್ಲ ತುಂಬಿರುವೆ ತಂದೆ||
ಜಗವೆಲ್ಲ ತುಂಬಿರುವೆ ತಂದೆ.... || ೨ ||

58. ಕಾಪಾಡು ಶ್ರೀ ಸತ್ಯನಾರಾಯಣ

ಕಾಪಾಡು ಶ್ರೀ ಸತ್ಯನಾರಾಯಣ
ಪನ್ನಗ ಶಯನ ಪಾವನ ಚರಣ
ನಂಬಿಹೆ ನಿನ್ನ .... ‖ ಪ ‖

ನಾರಾಯಣ ಲಕ್ಷ್ಮಿನಾರಾಯಣ
ನಾರಾಯಣ ಸತ್ಯನಾರಾಯಣ ‖ಅನು‖

ಮನವೆಂಬ ಮಂಟಪ ಬೆಳಕಾಗಿದೆ
ಹರಿನಾಮದ ಮಂತ್ರವೇ ತುಂಬಿದೆ
ಎಂದೆಂದು ಸ್ಥಿರವಾಗಿ ನೀನಿಲ್ಲಿರು
ನನ್ನಲ್ಲಿ ಒಂದಾಗಿ ಉಸಿರಾಗಿರು ‖ ೧ ‖

ನನಗಾಗಿ ಏನನ್ನು ನಾ ಬೇಡೆನು
ಧನಕನಕ ಬೇಕೆಂದು ನಾ ಕೇಳೆನು
ಈ ಮನೆಯು ನೀನಿರುವ ಗುಡಿಯಾಗಲಿ
ಸುಖ ಶಾಂತಿ ನೆಮ್ಮದಿಯ ನೆಲೆಯಾಗಲಿ ‖ ೨ ‖

ಕಣ್ಣೀರ ಅಭಿಷೇಕ ನಾ ಮಾಡಿದೆ
ಕರುನಾಳು ನೀ ನನ್ನ ಕಾಪಾಡಿದೆ
ಬರಿದಾದ ಮಡಿಲನ್ನು ನೀ ತುಂಬಿದೆ
ನಾ ಕಾಣದಾನಂದ ನೀ ನೀಡಿದೆ ‖ ೩ ‖

59. ತನು ನಿನ್ನದೋ ಸ್ವಾಮಿ

ತನು ನಿನ್ನದೋ ಸ್ವಾಮಿ ಜೀವನ ನಿನ್ನದಯ್ಯ
ಅನುದಿನದಲಿ ಪಡುವ ಸುಖದುಃಖ ನಿನ್ನದಯ್ಯಾ ||ಪ||

ಸವಿನುಡಿ ವೇದ ಪುರಾಣ ಶಾಸ್ತ್ರಗಳೆಲ್ಲ
ಕಿವಿಯಿಂದ ಕೇಳುವ ಕಥೆ ನಿನ್ನದೋ ಸ್ವಾಮಿ
ನವಮೋಹನಾಂಗಿಯರ ರೂಪವು ಕಣ್ಣೀಲಿ....
ಎವೆಯಿಕ್ಕದೆ ನೋಡುವ ನೋಟಾವು ನಿನ್ನದಯ್ಯಾ||೧||

ಒಡಗೂಡಿ ಗಂಧ ಕಸ್ತೂರಿ ಪರಿಮಳಗಳ
ಬಿಡದೆ ಲೇಪಿಸಿಕೊಂಬುವುದು ನಿನ್ನದೋ ಸ್ವಾಮಿ
ಷಡುರಸದನ್ನಕ್ಕೆ ನಲಿದಾಡುವ ಜಿಹ್ವೆ
ಸಡುರುಚಿಗೊಂಬುವ ಕಾಯಾವು ನಿನ್ನದಯ್ಯಾ ||೨||

ಮಾಯಾ ಪಾಪದ ಬಲೆಯೊಳಗೆ ಸಿಲುಕಿದ
ಕಾಯ ಪಂಚೇಂದ್ರಿಯರ ಕಥೆ ನಿನ್ನದೋ ಸ್ವಾಮಿ
ಕಾಯಜ ಪಿತ ಕಾಗಿನೆಲೆಯಾದಿ ಕೇಶವ
ರಾಯ ನೀನಲ್ಲದೆ ನರರು ಸ್ವತಂತ್ರರೇ ||೩||

60. ನಾರಾಯಣನೆಂಬ ನಾಮದ ಬೀಜವ

ನಾರಾಯಣನೆಂಬ ನಾಮದ ಬೀಜವ
ನಾಲಿಗೆ ತುದಿಯಿಂದಲಿ ಬಿತ್ತಿರಯ್ಯಾ || ಪ ||

ಹೃದಯ ಹೊಲವ ಮಾಡಿ ಮನವ ನೇಗಿಲ ಮಾಡಿ
ಶ್ವಾಸೋಶ್ವಾಸವ ಎರಡೆತ್ತು ಮಾಡಿ
ಜ್ಞಾನವೆಂಬ ಹಗ್ಗ ಕಣ್ಣಿಯ ಮಾಡಿ
ನಿರ್ಮಾಮವೆಂಬ ಗುಂಟೆಲಿ ಹರವಿರಯ್ಯಾ. || ೧ ||

ಮದಮತ್ಸರಗಳೆಂಬ ಮರಗಳನೇ ತರಿದು
ಕಾಮಕ್ರೋಧಗಳೆಂಬ ಕಳೆಯ ಕಿತ್ತು
ಪಂಚೇದ್ರಿಯವೆಂಬ ಮಂಚಿಕೆಯನೆ ಹಾಕಿ
ಚಂಚಲವೆಂಬ ಹಕ್ಕಿಯ ಹೊಡೆಯಿರಯ್ಯಾ || ೨ ||

ಉದಯಾಸ್ತಮಾನವೆಂಬ ಎರಡು ಕೊಳಗದಲ್ಲಿ
ಆಯುಷ್ಯವೆಂಬ ರಾಶಿ ಅಳೆಯುತಿರೆ
ಸ್ವಾಮಿ ಶ್ರೀ ಪುರಂದರ ವಿಠಲನ ನೆನೆದರೆ
ಪಾಪರಾಶಿಯ ಪರಿಹರಿಸುವನಯ್ಯಾ || ೩ ||

61. ಯಾರಿಗೆ ಯಾರುಂಟು ಎರವಿನ ಸಂಸಾರ

ಯಾರಿಗೆ ಯಾರುಂಟು ಎರವಿನ ಸಂಸಾರ
ನೀರ ಮೇಲಣ ಗುಳ್ಳೆ ನಿಜವಲ್ಲ ಹರಿಯೇ ॥ ಪ ॥

ಬಾಯಾರಿತು ಎಂದು ಬಾವಿನೀರಿಗೆ ಪೋದೆ
ಬಾವಿಲಿ ಜಲ ಬತ್ತಿ ಬರಿದಾಯ್ತು ಹರಿಯೆ ॥ ೧ ॥

ಬಿಸಿಲು ಗಾಳಿಗಾಗಿ ಮರದ ನೆರಳಿಗೆ ಪೋದೆ
ಮರ ಬಗ್ಗಿ ಶಿರದ ಮೇಲೊರಗಿತೋ ಹರಿಯೆ ॥ ೨ ॥

ಅಡವಿಯೊಳ್ಮನೆಮಾಡಿ ಗಿಡಕೆ ತೊಟ್ಟಿಲು ಕಟ್ಟಿ
ತೊಟ್ಟಿಲಿನ ಶಿಶು ಮಾಯವಾಯಿತು ಹರಿಯೆ ॥ ೩ ॥

ತಂದೆ ಶ್ರೀ ಪುರಂದರವಿಠಲ ನಾರಾಯಣ
ನಾ ಸಾಯೊ ಹೊತ್ತಿಗೆ ನೀ ಕಾಯೊ ಹರಿಯೆ ॥ ೪ ॥

62. ಮಾನವ ಜನ್ಮ ದೊಡ್ಡದು

ಮಾನವ ಜನ್ಮ ದೊಡ್ಡದು, ಇದ
ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ || ಪ ||

ಕಣ್ಣು ಕೈ ಕಾಲ್ ಕಿವಿ ನಾಲಿಗೆ ಇರಲಿಕ್ಕೆ
ಮಣ್ಣು ಮುಕ್ಕಿ ಹುಚ್ಚರಾಗುವರೆ
ಹೆಣ್ಣು ಮಣ್ಣಿಗಾಗಿ ಹರಿಯ ನಾಮಾಮೃತ
ಉಣ್ಣದೆ ಉಪವಾಸ ಇರುವರೆ ಖೋಡಿ || ೧ ||

ಕಾಲನ ದೂತರು ಕಾಲ್ ಪಿಡಿದೆಳೆವಾಗ
ತಾಳು ತಾಳೆಂದರೆ ತಾಳುವರೆ
ಧಾಳಿ ಬಾರದ ಮುನ್ನ ಧರ್ಮವ ಗಳಿಸಿರೊ
ಹಾಳು ಸಂಸಾರ ಸುಳಿಗೆ ಸಿಕ್ಕಲು ಬೇಡಿ || ೨ ||

ಏನು ಕಾರಣ ಯದುಪತಿಯನು ಮರೆತಿರಿ
ಧನ ಧಾನ್ಯ ಪುತ್ರರು ಕಾಯುವರೆ
ಇನ್ನಾದರು ಏಕೋಭಾವದಿ ಭಜಿಸಿರೊ
ಚೆನ್ನ ಶ್ರೀ ಪುರಂದರ ವಿಟ್ಠಲ ರಾಯನ || ೩ ||

63. ನಾನೇಕೆ ಬಡವನು ನಾನೇಕೆ ಪರದೇಶಿ

ನಾನೇಕೆ ಬಡವನು ನಾನೇಕೆ ಪರದೇಶಿ
ಶ್ರೀನಿಧೇ ಹರಿ ಎನಗೆ ನೀನಿರುವ ತನಕ ॥ ಪ ॥

ಪುಟ್ಟಿಸಿದ ತಾಯ್ತಂದೆ ಇಷ್ಟ ಮಿತ್ರನು ನೀನೇ
ಅಷ್ಟ ಬಂಧುವು ಸರ್ವ ಬಳಗ ನೀನೇ
ಪೆಟ್ಟಿಗೆಯೊಳಗಿನ ಅಷ್ಟಾಭರಣ ನೀನೇ
ಶ್ರೇಷ್ಠ ಮೂರುತಿ ಕೃಷ್ಣ ನೀನಿರುವ ತನಕ ॥ ೧ ॥

ಒಡ ಹುಟ್ಟಿದವ ನೀನೇ ಒಡಲಿಗ್ಹಾಕುವ ನೀನೇ
ಉಡಲು ಹೊದಿಯಲು ವಸ್ತ್ರ ಕೊಡುವವ ನೀನೇ
ಮಡದಿ ಮಕ್ಕಳನೆಲ್ಲ ಕಡೆಹಾಯ್ಸುವವ ನೀನೇ
ಬಿಡದೆ ಸಲಹುವ ಒಡೆಯ ನೀನಿರುವ ತನ ॥ ೨ ॥

ವಿದ್ಯೆ ಹೇಳುವ ನೀನೆ ಬುದ್ಧಿ ಕಲಿಸುವ ನೀನೇ
ಉದ್ಧಾರ ಕರ್ತ ಮಮ ಸ್ವಾಮಿ ನೀನೇ
ಮುದ್ದು ಸಿರಿ ಪುರಂದರವಿಠಲ ನಿನ್ನಡಿ ಮೇಲೆ
ಬಿದ್ದು ಕೊಂಡಿರುವ ಎನಗೇತರ ಭಯವು ॥ ೩ ॥

64. ನೀನ್ಯಾಕೊ ನಿನ್ನ ಹಂಗ್ಯಾಕೋ

ನೀನ್ಯಾಕೊ ನಿನ್ನ ಹಂಗ್ಯಾಕೋ
ನಿನ್ನ ನಾಮದ ಬಲವೊಂದಿದ್ದರೆ ಸಾಕೋ || ಪ ||

ಕರಿ ಮಕರಿಗೆ ಸಿಕ್ಕಿ ಮೊರೆಯಿಡುತಿರುವಾಗ
ಆದಿ ಮೂಲನೆಂಬ ನಾಮವೆಕಾಯ್ತೋ || ೧ ||

ಪ್ರಹ್ಲಾದನ ಪಿತ ಬಾಧಿಸುತಿರುವಾಗ
ನರಹರಿಯೆಂಬ ನಾಮವೆಕಾಯ್ತೋ || ೨ ||

ಬಾಲೆಯ ಸಭೆಯಲಿ ಸೀರೆಯ ಸೆಳೆವಾಗ
ಕೃಷ್ಣ ಕೃಷ್ಣ ಎಂಬ ನಾಮವೆಕಾಯ್ತೋ || ೩ ||

ಯಮನಧೂತರು ಬಂದು ಅಜಾಮಿಳನೆಳೆವಾಗ
ನಾರಾಯಣನೆಂಬ ನಾಮವೆಕಾಯ್ತೋ || ೪ ||

ಆ ಮರ ಈ ಮರ ಧ್ಯಾನಿಸುತಿರುವಾಗ
ರಾಮ ನಾಮ ಎಂಬ ನಾಮವೆಕಾಯ್ತೋ || ೫ ||

ಹಸುಳೆ ಆ ಧ್ರುವರಾಯ ಅಡವಿಗೆ ಪೋಪಾಗ
ವಾಸುದೇವನೆಂಬೊ ನಾಮವೆಕಾಯ್ತೋ || ೬ ||

ನಿನ್ನ ನಾಮಕೆ ಸರಿ ಕಾಣೆನು ಜಗದೊಳು
ಘನ್ನ ಮಹಿಮ ಸಿರಿ ಪುರಂದರ ವಿಠ್ಠಲ || ೭ ||

65. ಅಂಬಿಗಾ ನಾ ನಿನ್ನ ನಂಬಿದೆ

ಅಂಬಿಗಾ ನಾ ನಿನ್ನ ನಂಬಿದೆ
ಜಗದಂಬಾರಮಣ ನಿನ್ನ ನಂಬಿದೆ || ಪ ||

ತುಂಬಿದ ಹರಿಗೋಲಂಬಿಗಾ
ಅದಕೊಂಭತ್ತು ಛಿದ್ರನೋಡಂಬಿಗಾ
ಸಂಭ್ರಮದಿಂದ ನೀನಂಬಿಗಾ
ಅದರಿಂಬು ನೋಡಿ ನಡೆಸಂಬಿಗಾ || ೧ ||

ಹೊಳೆಯ ಭರವ ನೋಡಂಬಿಗಾ
ಅದಕ್ಕೆ ಸೆಳವು ಘನವಯ್ಯ ಅಂಬಿಗಾ
ಸುಳಿಯೊಳು ಮುಳುಗಿದೆನಂಬಿಗಾ
ಎನ್ನ ಸೆಳೆದುಕೊಳ್ಳಯ್ಯಾ ನೀನಂಬಿಗಾ || ೨ ||

ಆರು ತೆರೆಯ ನೋಡಂಬಿಗಾ
ಅದು ಮೀರಿ ಬರುತಲಿದೆ ಅಂಬಿಗಾ
ಯಾರಿಂದಲಾಗದು ಅಂಬಿಗಾ
ಅದ ನಿವಾರಿಸಿ ದಾಟಿಸೊ ಅಂಬಿಗಾ || ೩ ||

ಹೊತ್ತುಹೋಯಿತು ನೋಡಂಬಿಗಾ
ಅಲ್ಲಿ ಮತ್ತೈವರೀರ್ವರು ಅಂಬಿಗಾ
ಒತ್ತಿ ನಡೆಸಿ ನೋಡಂಬಿಗಾ
ಎನ್ನ ಸತ್ಯ ಲೋಕಕೆ ಒಯ್ಯೊ ಅಂಬಿಗಾ || ೪ ||

ಸತ್ಯವೆಂಬುದೆ ಹುಟ್ಟಂಬಿಗಾ
ಸದಾ ಭಕ್ತಿಎಂಬುದೆ ಪಥವಂಬಿಗಾ
ಮುಕ್ತಿದಾಯಕ ನಮ್ಮ ಪುರಂದರ ವಿಠ್ಠಲ
ನಮ್ಮ ಮುಕ್ತಿಮಂಟಪಕೊಯ್ಯೊ ಅಂಬಿಗಾ || ೫ ||

66. ಹರಿ ಕುಣಿದಾ ನಮ್ಮ ಹರಿ ಕುಣಿದಾ

ಹರಿ ಕುಣಿದಾ, ನಮ್ಮ ಹರಿ ಕುಣಿದಾ || ಪ ||

ಅಕಳಂಕಚರಿತ ಮಕರಕುಂಡಲಧರ
ಸಕಲರ ಪಾಲಿಪ ಹರಿ ಕುಣಿದಾ || ೧ ||

ಅರಳೆಲೆಮಾಗಾಯಿ ಕೊರಳ ಮುತ್ತಿನ ಸರ
ತರಳೆಯರೊಡಗೂಡಿ ಹರಿ ಕುಣಿದಾ || ೨ ||

ಅಂದುಗೆ ಅರಳೆಲೆ ಬಿಂದುಲ್ಲಿ ಬಾಪುರಿ
ಚೆಂದದಿ ನಲಿವುತ್ತ ಹರಿ ಕುಣಿದಾ || ೩ ||

ಉಟ್ಟ ಪಟ್ಟೆಯ ದಟ್ಟಿ ಇಟ್ಟ ಕಾಂಚಿಯದಾಮ
ದಿಟ್ಟ ಮಲ್ಲರ ಗಂಡ ಹರಿ ಕುಣಿದಾ || ೪ ||

ಪರಮಭಾಗವತರ ಕೇರಿಯೊಳಾಡುವ
ಪುರಂದರವಿಠಲ ಹರಿ ಕುಣಿದಾ || ೫ ||

67. ದೇವ ಬಂದ ನಮ್ಮ ಸ್ವಾಮಿ

ದೇವ ಬಂದ ನಮ್ಮ ಸ್ವಾಮಿ ಬಂದನೋ
ದೇವರ ದೇವ ಶಿಖಾಮಣಿ ಬಂದನೋ || ಪ ||

ಉರಗ ಶಯನ ಬಂದ ಗರುಡ ಗಮನ ಬಂದ
ನರಗೊಲಿದವ ಬಂದ ನಾರಾಯಣ ಬಂದ || ೧ ||

ಮಂದರಧರ ಬಂದ ಮಾಮನೋಹರ ಬಂದ
ಬೃಂದಾವನಪತಿ ಗೋವಿಂದ ಬಂದನೋ || ೨ ||

ಪೂತನಿ ಸಂಹರಣ ಬಂದ ಪುರುಹೂತವಂದ್ಯ ಬಂದ
ಮಾತುಳನ ಮಡುಹಿದ ಗೋವಿಂದ ಬಂದ || ೩ ||

ನಕ್ರಹರನು ಬಂದ ಚಕ್ರಧರನು ಬಂದ
ಅಕ್ರೂರಗೊಲಿದ ತ್ರಿವಿಕ್ರಮನು ಬಂದನೋ || ೪ ||

ಪಕ್ಷಿವಾಹನ ಬಂದ ಲಕ್ಷ್ಮಿ ರಮಣ ಬಂದ
ಅಕ್ಷಯ ಫಲದ ಲಕ್ಷ್ಮಣಾಗ್ರಜ ಬಂದ || ೫ ||

ನಿಗಮಗೋಚರ ಬಂದ ನಿತ್ಯ ತೃಪ್ತನು ಬಂದ
ನಗೆಮುಖ ಪುರಂದರ ವಿಠಲ ಬಂದನೋ || ೬ ||

68. ಹೇ.... ಶೇಷ ಶಯನ ನಾರಾಯಣ

ಹೇ.... ಶೇಷ ಶಯನ ನಾರಾಯಣ
ಹೇ.... ಕಮಲ ನಯನ ನಾರಾಯಣ

ಹೇ... ಚಕ್ರಧಾರಿ ಶೌರಿ ಮುರಾರಿ
ನೀ ಹೊರತು ನಮಗೆ ಬೇರಿಲ್ಲ ದಾರಿ
ಎನ್ನ ಚಂದ್ರಹಾಸ ನಿನ್ನ ಪಾದದಾಸ
ಕಾಪಾಡೋ ರಂಗಾ ಕರುಣಾಂತರಂಗ

ಭಕುತ ಪ್ರಹ್ಲಾದನ ಬಾಧಿಸಿ ಪಿತನು
ಕಂಬದಿಂದಲಿ ಬಂದು ಕಾಪಾಡಿದೆ
ಮೊಸಳೆಗೆ ಸಿಲುಕಿ ನೊಂದ ಗಜೇಂದ್ರನ
ಮೊರೆಕೇಳಿ ಬಂದು ಪೊರೆದಂಥ ಹರಿಯೇ

ದುಷ್ಟಾತ್ಮರುಗಳ ಒಳಸಂಚ ಸುಳಿಗೆ
ಸಿಕ್ಕಿರುವೆನೆನ್ನ ಎಳೆ ಕಂದನೂ
ಪಾಪಾತ್ಮರನೂ ನೀ ನಾಶಮಾಡಿ
ಸಂರಕ್ಷಿಸಯ್ಯ ನಿನ್ನ ಭಕ್ತರಾ.....

69. ಶ್ರೀಧರ ಕೇಶವ ನಾರಾಯಣ

ಶ್ರೀಧರ ಕೇಶವ ನಾರಾಯಣ
ಶ್ರೀಕರ ಶುಭಕರ ನಾರಾಯಣ

ಈ ಜಗವೊಂದು ನಾಟಕ ಮಂದಿರ
ಜನರೆಲ್ಲ ಸೂತ್ರ ಬೊಂಬೆಗಳಯ್ಯ
ನೀನಾಡಿಸಿದಂತೆ ಆಡುವರಯ್ಯ
ಆ....ಆ.ಆಆಆ.............ಆಆ
ನೀನಾಡಿಸಿದಂತೆ ಆಡುವರಯ್ಯ
ಲೀಲಾಮಯನು ನೀನೇ ದೇವ

ಕಮಲ ರಮಣ ಪನ್ನಗ ಶಯನ
ದುರಿತ ನಿವಾರಣ ಭವಭಯ ಹರಣ
ದೀನಜನ ಮಂದಾರ ದಾನವ ಸಂಹಾರ
ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕ
ಲೋಕ ಲೋಕದ ಪೂಜಿತನಯ್ಯ
ಭಕ್ತರ ಭಕ್ತನ ನಿನಯ್ಯಾ......

ಸುರನರ ಸೇವಿತ ಲೋಕೈಕನಾಥ
ಮನುಜನ ವಂದಿತ ಮಂಗಳದಾತ
ಶ್ರೀಕಾಂತ.....ರಾಜಿತ..........
ಕರುಣಾಕರನೇ ಕಾರುಣ್ಯ ಶೀಲನೆ
ಕಾಮಿತದಾಯಕ ಗರುಡಗಮನ
ಎಲ್ಲರಿಗೂ ನೀನೇ ಆಧಾರವಯ್ಯ
ಆಪದ್ಭಾಂಧವ ನನೀನಯ್ಯಾ

70. ಹಿಗ್ಗುವೆ ಏತಕೋ, ಈ ದೇಹಕ್ಕೆ

ಹಿಗ್ಗುವೆ ಏತಕೋ, ಈ ದೇಹಕ್ಕೆ
ಹಿಗ್ಗುವೆ ಯಾಕೋ ||ಪ|

ಹಿಗ್ಗುವ ತಗ್ಗುವ ಮುಗ್ಗುವ ಕುಗ್ಗುವ
ಅಗ್ನಿಯೊಳಗೆ ಬಿದ್ದು ದಗ್ಧವಾಗುವ ದೇಹಕ್ಕೆ ||ಅ.ಪ||

ಸತಿ ಪುರುಷರು ಕೂಡಿ ರತಿ ಕ್ರೀಡೆಗಳ ಮಾಡಿ
ಪತನವಾದಿಂದ್ರಿಯ ಪ್ರತಿಮೆಯ ದೇಹಕ್ಕೆ ||೧||

ಆಗಭೋಗಗಳನ್ನು ಆಗುಮಾಡುತಲಿದ್ದು
ರೋಗ ಬಂದರೆ ಬಿದ್ದು ಹೋಗುವ ದೇಹಕ್ಕೆ ||೨||

ಪರರ ಸೇವೆಯ ಮಾಡಿ ನರಕ ಭಾಜನನಾಗಿ
ಮರಳಿ ಮರಳಿ ಬಿದ್ದು ಉರುಳುವ ದೇಹಕ್ಕೆ ||೩||

ಸೋರುವುದೊಂಭತ್ತು ದ್ವಾರದಿಂದಲಿ ಮಲ
ನೀರಿಲ್ಲದಿದ್ದರೆ ನಾರುವ ದೇಹಕ್ಕೆ ||೪||

ಪುರಂದರ ವಿಠಲನ ಚರಣ ಕಮಲಕ್ಕೆ
ಎರಗದೆ ಇರುತಿಹ ಗರುವದ ದೇಹಕ್ಕೆ ||೫||

71. ಅಂಜಿಕಿನ್ಯಾತಕಯ್ಯ ಸಜ್ಜನರಿಗೆ

ಅಂಜಿಕಿನ್ಯಾತಕಯ್ಯಾ ಸಜ್ಜನರಿಗೆ
ಭಯವು ಇನ್ಯಾತಕಯ್ಯಾ II ಪ II

ಸಂಜೀವರಾಯನ ಸ್ಮರಣೆ ಮಾಡಿದ ಮೇಲೆ IIಅನು II

ಕನಸಿಲಿ ಮನಸಿಲಿ ಕಳವಳವಾದರೆ
ಹನುಮನ ನೆನೆದರೆ ಹಾರಿಹೋಗದೆ ಭೀತಿ II ೧ II

ರೋಮ ರೋಮಕೆ ಕೋಟಿ ಲಿಂಗವ ಮಾಡಿದ
ಭೀಮನ ನೆನೆದರೆ ಬಿಟ್ಟು ಹೋಗದೆ ಭೀತಿ II ೨ II

ಪುರಂದರವಿಠಲನ ಪೂಜೆಯ ಮಾಡುವ
ಗುರು ಮಧ್ವರಾಯರ ಸ್ಮರಣೆ ಮಾಡಿದ ಮೇಲೆ II ೩ II

72. ಭಾಗ್ಯದ ಲಕ್ಷ್ಮಿ ಬಾರಮ್ಮ ನಮ್ಮಮ್ಮ ನೀ

ಭಾಗ್ಯದ ಲಕ್ಷ್ಮಿ ಬಾರಮ್ಮ ನಮ್ಮಮ್ಮ ನೀ
ಸೌಭಾಗ್ಯದ ಲಕ್ಷ್ಮಿ ಬಾರಮ್ಮ || ಪ ||

ಹೆಜ್ಜೆಯ ಮೇಲೆ ಹೆಜ್ಜೆಯನಿಕ್ಕುತ
ಗೆಜ್ಜೆಯ ಕಾಲ್ಗಳ ನಾದವ ತೋರುತ
ಸಜ್ಜನ ಸಾಧು ಪೂಜೆಯ ವೇಳೆಗೆ
ಮಜ್ಜಿಗೆಯೊಳಗಿನ ಬೆಣ್ಣೆಯಂತೆ. || ೧ ||

ಕನಕ ವೃಷ್ಟಿಯ ಕರೆಯುತ ಬಾರೆ
ಮನ ಕಾಮನೆಯ ಸಿದ್ಧಿಯ ತೋರೆ
ದಿನಕರ ಕೋಟಿ ತೇಜದಿ ಹೊಳೆವ
ಜನಕ ರಾಯನ ಕುಮಾರಿ ಬಾರೆ || ೨ ||

ಅತ್ತಿತ್ತಲುಗದೆ ಭಕ್ತರ ಮನೆಯಲಿ
ನಿತ್ಯ ಮಹೋತ್ಸವ ನಿತ್ಯ ಸುಮಂಗಲ
ಸತ್ಯವ ತೋರುತ ಸಜ್ಜನರಗಲದ
ಚಿತ್ತದಿ ಹೊಳೆವ ಪುತ್ಥಳಿ ಬೊಂಬೆ || ೩ ||

ಸಂಖ್ಯೆಯಿಲ್ಲದ ಭಾಗ್ಯವ ಕೊಟ್ಟು,
ಕಂಕಣ ಕೈಯ ತಿರುವುತ ಬಾರೆ
ಕುಂಕುಮಾಂಕಿತೆ ಪಂಕಜ ಲೋಚನೆ
ವೆಂಕಟ ರಮಣನ ಬಿಂಕದ ರಾಣಿ || ೪ ||

ಸಕ್ಕರೆ ತುಪ್ಪ ಕಾಲುವೆ ಹರಿಸಿ
ಶುಕ್ರವಾರದ ಪೂಜೆಯ ವೇಳೆಗೆ
ಅಕ್ಕರೆಯುಳ್ಳ ಅಳಗಿರಿ ರಂಗನ

ಚೊಕ್ಕ ಪುರಂದರ ವಿಠ್ಠಲನ ರಾಣಿ || ೫ ||

73. ದೇವರ ಮನೆಯಿದು ಈ ಜಗವೆಲ್ಲ

ದೇವರ ಮನೆ ಇದು ಈ ಜಗವೆಲ್ಲ
ಬಾಡಿಗೆದಾರರು ಜೀವಿಗಳೆಲ್ಲ || ಪ ||

ಇಷ್ಟೇ ದಿವಸ ಇಷ್ಟೇ ವರುಷ
ಇರಬೇಕೆನುವ ಕಟ್ಟು ಕರಾರು
ಏನುವುದೇನಿದು ಅರಿತವರಾರು || ೧ ||

ನಾನೇ ಹುಟ್ಟಿಸಿದೆ ನಾನೇ ಕಟ್ಟಿಸಿದೆ
ಎನುವುದೆಲ್ಲ ಜಂಬದ ಸೊಲ್ಲು
ಅಂತರಂಗಕೆ ತೋರುವುದು ಈ ನುಡಿ ಜೊಳ್ಳು || ೨ ||

ಇಷ್ಟಾನು ಕೊಟ್ಟಿಹ ಆತನ ಕರುಣೆ
ಒಂದಿಷ್ಟಾದರೂ ಉಪಕೃತಿ ಸ್ಮರಣೆ
ತಿಳಿದರೆ ಒಳಿತು ಬಾಡಿಗೆ ಕುರಿತು || ೩ ||

74. ಜಗದ ಪಾಲಕನೇ ದೇವ

ಜಗದ ಪಾಲಕನೇ ದೇವ ಜಗದ
ಪಾಲಕನೇ ದೇವಾ ಜಗದ ಪಾಲಕನೇ ॥ ಪ ॥

ಭಾಗ್ಯದಾತ ಸುಜನ ಪ್ರೀತ
ಭಜನಾ ರಂಗವ ರಂಜಿಸು ದೇವಾ
ಮಂಜುಳ ನಾದವ ಉದಿಸೋ ದೇವಾ
ಎಮ್ಮಯ ಹೃದಯದಿ ವಾಸಿಸಯ್ಯ
ಜಯವನು ಕರುಣಿಸು ದೇವಾ ॥ ೧ ॥

ದೀನ ಜನರನ್ನು ಪಾಲಿಸು ದೇವ
ಆರ್ತರ ನಾದವ ಆಲಿಸು ದೇವ
ಭಕ್ತರ ಭಕ್ತನೇ ಬಾಬಾ ದೇವ
ಜಗದ ಪಾಲಕನೇ ದೇವ
ಅಗಣಿತ ಮಹಿಮನೇ ಬಾ ದಾತ
ಹರುಷದಿ ನಲಿಯುತ ಬಾ ದೇವಾ ॥ ೨ ॥

75. ಕೊಡುವ ಕರ್ತೃ ಬೇರೆ

ಕೊಡುವ ಕರ್ತೃ ಬೇರೆ ಇರುತಿರೆ
ಬಿಡು ಬಿಡು ಚಿಂತೆಯನು || ಪ ||

ಒಡೆಯನಾಗಿ ಮೂರ್ಜಗವನು ಪಾಲಿಪ
ಬಡವರುದ್ಧಾರಕ ಭಕ್ತರೊಡೆಯ ಹರಿ ||ಅನು||

ಕಲ್ಲಿನೊಳಗೆ ಇರುವ ಕಪ್ಪೆಗೆ
ಅಲ್ಲಿ ಉದಕ ಕೊಡುವ
ಎಲ್ಲ ಕೋಟಿ ಜೀವರಾಶಿಗಳನೆ ಕಾಯ್ವ
ವಲ್ಲಭ ಶ್ರೀಹರಿ ಎಲ್ಲೆಲ್ಲಿರುತಿರೆ || ೧ ||

ಆನೆಗೈದು ಮಣದ ಆಹಾರವ
ತಾನೆ ತಂದು ಕೊಡುವ
ದೀನರೊಡೆಯ ಶ್ರೀನಿವಾಸ ದಯಾನಿಧಿ
ಮಾನದಿಂದಲಿ ಕಾಯ್ವ ಭಾನುಕೋಟಿ ತೇಜ || ೨ ||

ಸರಸಿಜಾಕ್ಷ ತನ್ನ ನರರ ಬಿಡನು ಘನ್ನ
ಪರಮದಯಾನಿಧಿ ಭಕುತರ ಸಲಹುವ
ಪುರಂದರವಿಟ್ಠಲ ಪುಷ್ಪಶರನ ಪಿತ || ೩ ||

76. ಆದಿಶೇಷಾ ಅನಂತಶಯನ

ಆದಿಶೇಷಾ ಅನಂತಶಯನಾ ಶ್ರೀನಿವಾಸ ಶ್ರೀ ವೆಂಕಟೇಶಾ

ರಘು ಕುಲ ತಿಲಕಾ ರಘುರಾಮಚಂದ್ರಾ ಸೀತಾಪತಿ ಶ್ರೀರಾಮಚಂದ್ರ

ಯದುಕುಲ ಭೂಷಣ ಯಶೋದನಂದನ ರಾಧಪತೆ ಗೋಪಾಲಕೃಷ್ಣಾ ll 3:

ಪನ್ನಗ ಭೂಷಣ ಕೈಲಾಸವಾಸ ಗೌರಿಪತ ಶಿವಶಂಭೋ ಶಂಕರಾ

ವನಪುಲಿ ವಾಹನ ವಿಲ್ಲಾಳಿ ವೀರ ಶಬರೀ ಗೀರಿಶ್ವರಾ ಶ್ರೀಧರ್ಮಶಾಸ್ತ್ರ

ರಾಕ್ಷಸ ಮರ್ಧನ ಶ್ರೀರಾಮಧೂತಾ ಅಂಜನಿಪುತ್ರಾ, ಜೈ ಜೈ ಹನುಮಾನ್

ವಾನರವೀರ ವಾಯುಕುಮಾರ ಅತಿ ಬಲವಂತಾ ಜೈ ಜೈ ಹನುಮಾನ್

ಕಾಷಾಯಾಂಬರ ಶ್ರೀ ಲಕ್ಷ್ಮೀವಾಸ ಶಿರಿಡಿಪತೇ ಶ್ರೀ ಸಾಯಿಬಾಬಾ

ಹರಿಹರ ಸುತನೇ ಶ್ರೀ ಮಣಿಕಂಠಾ ಶರಣಂ ಶರಣಂ ಅಯ್ಯಪ್ಪ ಸ್ವಾಮಿ

ಆನಂದ ನಿಲಯಾ ವಿಲ್ಲಾಳಿ ವೀರಾ ಮೋಹಿನಿ ಪುತ್ರಾ ಸ್ವಾಮಿಯೇ ಶರಣಂ

ಕಲಿಯುಗ ಜ್ಯೋತಿ ಶಬರೀ ಗಿರೀಶಾ ಅನಾಥ ರಕ್ಷಕಾ ಅಯ್ಯಪ್ಪಾ ಶರಣಂ

77. ದೇವಾ ಹೇ ದೇವಾ

ದೇವಾ ಹೇ ದೇವಾ ಎನ್ನ ಮೊರೆಯನ್ನು
ಅಲೀಸಿ ಕಾಪಾಡು ದೇವಾ || ಪ ||

ಸತತದಿ ನಿಮ್ಮನು ಧ್ಯಾನಿಪೆ ನಾನು
ಮಾತಿವಂತನೇ ನೀನು ಹಿತದಿ ಕಾಪಾಡೋ || ೧ ||

ಪಾವನ ಮೂರ್ತಿ ಪರಮ ದಯಾಳೋ
ತವ ಶುಭನಾಮ ಪಾಡುವೇ ದೇವಾ || ೨ ||

ಕ್ಷಿತಿ ಪಾಲಕನೇ ಹಿತವನು ತೋರೋ
ಕಪಟ ನಾಟಕ ಸೂತ್ರಧಾರಿಯೂ ನೀನೇ || ೩ ||

78. ಮುನಿದ್ಯಾಕೋ ತಂದೆ ಮಳೆರಾಯ

ಮುನಿದ್ಯಾಕೋ ತಂದೆ ಮಳೆರಾಯ
ನಿನ್ನ ಕಾಣದೆ ಬಳಲುವೆವೋ ಓ ಮಳೆರಾಯ || ಪ ||

ಮಳೆ ಇಲ್ಲದೆ ಬೆಳೆ ಬಾಡೋಯ್ತು ದೇವಾ
ಇಳಿಯೋಳು ಸಂತೋಷ ಕಳೆದೊಯ್ತು ತಂದೆ
ತಳಮಳಗೊಂಡೆವು ಕಳವಳ ಪಡುವೇವು
ಬೇಗನೆ ಬಾರಯ್ಯ ಓ ಮಳೆರಾಯ || ೧ ||

ಒಕ್ಕಲಿಗರು ನಿನ್ನ ಮಕ್ಕಳಲ್ಲಾವೇನು
ಮಕ್ಕಳ ಮೊರೆ ಕೇಳಿ ಬಾರದಿರುವೆ ಏನು
ಕಕ್ಕಸವೇತಕೆ ಅಕ್ಕರದಲಿ ಬಂದು

ದುಃಖವ ಬಿಡಿಸಯ್ಯ ಓ ಮಳೆರಾಯ || ೧ ||

ಮುಂಗಾರಿ ಕಡೆ ಅಯ್ಯೋ ಇಂಗಾರಿ ಇಂದಾಯ್ತೋ
ಕಣಜಗಳೊಳ್ ಧಾನ್ಯವು ಬರಿದಾಯ್ತೋ ತಂದೆ
ದನಕರಗಳ ಗೋಳು ಭಲವಾಯ್ತೋ ತಂದೆ
ಬೇಗನೆ ಬಾರಯ್ಯ ಓ ಮಳೆರಾಯ || ೩ ||

ಬಾ ಎಂದು ಕರೆಯುವ ಬಯಕೆಯು ನಮ್ಮದು
ಬಂದು ನೀಡುವ ಹಿರೇತನ ನಿನ್ನದೇ
ಬಲವಂತನೋ ನೀನು ಬಲ ಹೀನರೋ ನಾವು
ಬಂದು ರಕ್ಷಿಸುತ್ತದೆ ಓ ಮಳೆರಾಯ || ೪ ||

ಎಲ್ಲಾ ಲೋಕಕೆ ನೀನು ಮೂಲಾದಾರನು ದೇವಾ
ಎಲ್ಲಿ ನೋಡಿದರಲ್ಲೆ ನೀನೇ ನಲಿಯುವ ದೇವಾ
ಉಲ್ಲಾಸವನು ನೀಡಿ ಭೂಮಾತೆಯೊಡಗೂಡಿ
ಬೇಗನೆ ಬಾರಯ್ಯ ಓ ಮಳೆರಾಯ || ೫ ||

ನೀ ಬಿಟ್ಟರೆ ಕೈಯ್ಯ ಎಮಗಾರು ಗತಿಯಯ್ಯ
ಇನ್ಯಾರ ಮೊರೆ ಬಿಟ್ಟು ಕೇಳುವೆವಯ್ಯ
ನಿನ್ನ ನಂಬಿದೆವಯ್ಯ ಮನ್ನಿಸಿ ಬಾರಯ್ಯ
ದೀನರು ನಾವಯ್ಯ ಓ ಮಳೆರಾಯ || ೬ ||

ಧರೆಯೋಳು ಮೆರೆಯುವ ಜೋಳದರಾಶಿ ಪುರದೋಳು ವಾಸಿಪ
ಮರುಳ ದೊಡ್ಡಣ್ಣ ವರ ರಾಮೇಶನ
ತಮಧೀನರಾದಂತ ಮರುಳ ದೊಡ್ಡಣ್ಣನು
ಬರೆದಂತ ತತ್ವವೋ ಓ ಮಳೆರಾಯ || ೭ ||

79. ದೇವರೇ ನೀನು ನಿಜವಪ್ಪ

ದೇವರೇ ನೀನು ನಿಜವಪ್ಪ
ಬಾಲಕನಾಗಿಯೇ ಅಯ್ಯಪ್ಪ
ನಿನ್ನಿ ಮಾಯೆಗೆ ಕೊನೆಯಿಲ್ಲ
ಈ ನಿನ್ನ ದಯೆಗೆ ಎಣೆಯಿಲ್ಲ || ಪ ||

ಕಣ್ಣಿಗೆ ದೃಷ್ಟಿಗೆ ನೀ ತಂದೆ
ಈ ಬಾಳಿಗೆ ದೀಪ ನೀನಾದೆ
ಮಾತಿನ ಚೇತನ ನಿನ್ನಿಂದ
ಈ ಉಸಿರಲೇ ನೀನೇ ಆನಂದ || ೧ ||

ಮೂಗನೂ ಹಾಡಲು ಪದ ತಂದೆ
ಈ ಕುರುಡನ ಸ್ವರ್ಗವ ನೋಡೆಂದೆ
ಎಲ್ಲವೂ ನಿನ್ನದೇ ಈ ಲೀಲೆ
ಅ ದೇವರ ಕಂಡೆ ನಿನ್ನಲ್ಲೇ || ೨ ||

ಶರಣಂ ಶರಣಂ ಸ್ವಾಮಿ ಶರಣಂ
ಶರಣಂ ಶರಣಂ ಅಯ್ಯಪ್ಪ ಶರಣಂ
ಅಯ್ಯಪ್ಪ ಶರಣಂ ಸ್ವಾಮಿ ಶರಣಂ
ಸ್ವಾಮಿ ಶರಣಂ ಅಯ್ಯಪ್ಪ ಶರಣಂ || ೩ ||

80. ಓಂಕಾರ ಜನನಿ ಭವಾನಿ

ಓಂಕಾರ ಜನನಿ ಭವಾನಿ
ಜಯ ಜಯ ಜಗಜ್ಜನನಿ ಭವಾನಿ || ಪ ||

ತ್ರಿಶೂಲ ಪಾಣಿ ನೀನೇ ತ್ರಿವೇಣಿ
ಅಭಯವ ನೀಡೇ ಅಂಬಾ ಭವಾನಿ
ಸಕಲ ಚರಾಚರ ಮಂಗಳದಾತೆ || ೧ ||

81. ಅಂಬ ಪರಮೇಶ್ವರಿ ಅಖಿಲಾಂಡೇಶ್ವರಿ

ಅಂಬ ಪರಮೇಶ್ವರಿ ಅಖಿಲಾಂಡೇಶ್ವರಿ ಆದಿಪರಾಶಕ್ತಿ ಪಾಲಾಯಮಾ
ಶ್ರೀ ಭುವನೇಶ್ವರಿ ರಾಜರಾಜೇಶ್ವರಿ ಆನಂದ ರೂಪಿಣಿ ಪಾಲಾಯಮಾ
ವೀಣಾಪಾಣಿ ವಿಮಲ ಸ್ವರೂಪಿಣಿ ವೇದಾಂತ ರೂಪಿಣಿ ಪಾಲಾಯಮಾ
ಕಾಮಿತ ದಾಯಿನಿ ಕರುಣಾ ಸ್ವರೂಪಿಣಿ ಕನ್ಯಾಕುಮಾರಿವಿ ಪಾಲಾಯಮಾ

ಮಂಜುಳ ಭಾಷಿಣಿ ಮಂಗಳದಾಯಿನಿ ಮಧುರಾ ಮೀನಾಕ್ಷಿವಿ ಪಾಲಾಯಮಾ
ರಾಜಸ್ವರೂಪಿಣಿ ರಾಜರಾಜೇಶ್ವರಿ ಶ್ರೀ ಚಕ್ರವಾಸಿನಿ ಪಾಲಾಯಾಮಾಂ
ಅನ್ನಪೂರ್ಣೇಶ್ವರಿ ವಿಶ್ವ ವಿನೋದಿನಿ ಪಾಲಾಯಮಾಂ
ಅಂಬಾ ಜಗಧೀಶ್ವರಿ ಕಾಷಾಯಾಂಬರಿ ಕಾಶಿ ವಿಶಾಲಾಕ್ಷಿವಿ ಪಾಲಾಯಮಾಂ

ಕಂಚಿ ಕಾಮಾಕ್ಷಿವಿ ಮಧುರಾ ಮೀನಾಕ್ಷಿವಿ ಕಾರುಣ್ಯರೂಪಿಣಿ ಪಾಲಾಯಾಮಾಂ
ಶ್ರೀ ಚಕ್ರನಾಯಕಿ ತ್ರಿಪುರಾ ಸುಂದರಿ ಶ್ರೀಲಲಿತೇಶ್ವರಿ ಪಾಲಾಯಾಮಾಂ
ಬಿಂದು ಕಳಾಧರಿ ಸುಂದರ ರೂಪಿಣಿ ಚಂದ್ರಬಿಂಬ ಮುಖಿ ಪಾಲಾಯಾಮಾಂ

82. ಇಂದು ಶುಕ್ರವಾರ ಶುಭವ ತರುವಾ ವಾರ

ಇಂದು ಶುಕ್ರವಾರ ಶುಭವ ತರುವಾ ವಾರ
ಸುಮಂಗಲೆಯರೆಲ್ಲಾ ನಿನ್ನ ಪೂಜಿಸುವ ಪುಣ್ಯವಾರ

ಮುಂಜಾನೆಯ ಮಡಿಯುಟ್ಟು – ಕುಂಕುಮವ ಹಣೆಗಿಟ್ಟು
ರಂಗೋಲಿಯ ಬಾಗಿಲಲ್ಲಿಟ್ಟು ಹಣ್ಣು ಕಾಯಿ ನೀಡುವ ವಾರ

ಮಲ್ಲಿಗೆ ಜಾಜಿ ಹೂಮಾಲೆ ಹಾಕಿ I ಚಂದನ ಹಚ್ಚಿ ಸಿಂಗಾರ ಮಾಡಿ
ಕರ್ಪೂರದಾರತಿ ನಿನಗೆ ಬೆಳಗಿ ಭಕ್ತಿಯಿಂದಲಿ ಭಜಿಸುವ ವಾರ

ಸುವಾಸಿನಿಯರಿಗೆ ಕುಂಕುಮ ಹಚ್ಚಿ ಸಂಭ್ರಮದಿಂದ ಬಾಗಿನ ನೀಡಿ
ಸರ್ವಮಂಗಳೆಯ ಕೀರ್ತಿಯ ಹಾಡಿ ಸಕಲ ಭಾಗ್ಯ ಬೇಡುವ ವಾರ

83. ಕಲ್ಯಾಣದಣ್ಣ ಬಾರೋ ಬಸವಣ್ಣ

ಕಲ್ಯಾಣದಣ್ಣ ಬಾರೋ ಬಸವಣ್ಣ
ನೀ ಬರದಿರಲು ಜಗವೆಲ್ಲ ಅಳಿಗಾಲವಣ್ಣಾ
ನೀ ಈ ಲೋಕ ತ್ರಾಣ ||ಪಲ್ಲವಿ||

ಸತ್ಯ ಶಿವಧರ್ಮ ಧರೆಯಲ್ಲಿ ಕ್ಷಯವಾಗಿದೆ
ನಿತ್ಯ ಮರೆ ಮೋಸ ಗೈಯುವರಿಗೆ ಜಯವಾಗಿದೆ

ಭಕ್ತಿ ಭಂಡಾರವೋ ಮುಕ್ತಿ ಮಂದಿರವೋ
ನಿತ್ಯ ಜೀವನ ಸಾರವು ಬರಿದಾಗಿದೆ ॥ ೦ ॥

ನೀತಿ ನಿಜತತ್ವ ನಿಧಿಸಾರೆ ಹೊಲಸಾಗಿದೆ
ಪ್ರೀತಿ ವಿಶ್ವಾಸ ನಿಧಿಪೂರ ಕಲಕವಾಗಿದೆ
ಮೃತ್ಯು ಮಸಣವಾಗಿದೆ ಮೃತ್ಯು ಮನೆಮಾಡಿದೆ
ಸತ್ಯ ಹುಸಿಯಾಗಿ ಸುಜನರಿಗೆ ಹಗೆಯಾಗಿದೆ ॥ ೧ ॥

ಪುಣ್ಯ ಕಾಯಕದ ಕೈಮುಗಿದು ಬೋಳಾಗಿದೆ
ಮಾನ್ಯ ಸತಿಧರ್ಮ ಕುಲಕೋಟಿಯು ಹಾಳಾಗಿದೆ
ಕರುಣೆ ಶೀಲೆ ನಿಂತಿದೆ ಧರೆಯೊಳುರಿ ನಿಂತಿದೆ
ಶರಣ ಕುಲಕೋಟಿ ಮಾಯಕ್ಕೆ ಬಲಿಯಾಗಿದೆ ॥ ೨ ॥

84. ವೀರಶೈವ ಮತದಲಿ ಹುಟ್ಟಿ

ವೀರಶೈವ ಮತದಲಿ ಹುಟ್ಟಿ
ಬಸವತತ್ವ ಮರೆತೇ ಬಿಟ್ಟಿ ‖ ಪ ‖

ಕಾಮ ಕ್ರೋಧ ಮದ ಮತ್ಸರಗಳು
ನಿನ್ನೊಳಗೆ ಅಳವಡಿಸಿಟ್ಟಿ ‖ಅನು‖

ಧರ್ಮ ದೇವರ ಪೂಜೆಯ ಬಿಟ್ಟಿ
ಇಷ್ಟಲಿಂಗ ಮೂಲಿಗೆ ಇಟ್ಟಿ
ಲಿಂಗವಂತ ಮೊದಲೇ ಕೆಟ್ಟಿ
ಪಡಬಾರದ ಕಷ್ಟವ ಪಟ್ಟಿ ‖ ೧ ‖

ತಾಯಿ ಗರ್ಭದಿಂದ ಹುಟ್ಟಿ
ತಾಯಿಯನ್ನು ಮರೆತೇಬಿಟ್ಟಿ
ಅನುಜರೆಂಬ ಪ್ರೀತಿಯ ತೊರೆದು
ಪ್ರಾಣಿಯಂತೆ ನಡೆದೆ ಬಿಟ್ಟಿ ‖ ೨ ‖

ಪ್ರೀತಿಯೆಂಬ ಪಂಚಾಕ್ಷರವ
ಕಂಡು ಏಕೆ ನಿಂತುಬಿಟ್ಟಿ
ಬಾಗು ನೀ ತಲೆಯಾ ಇಲ್ಲಿ
ಮೋಕ್ಷಕ್ಕೆ ಮನವ ತಟ್ಟಿ ‖ ೩ ‖

85. ಜಯಗುರು ಜಯಗುರು ಬಸವಣ್ಣ

ಜಯಗುರು ಜಯಗುರು ಬಸವಣ್ಣ
ಜಯತು ಜಗದ್ಗುರು ಬಸವಣ್ಣ ॥ಪಲ್ಲವಿ॥

ಜಂಗಮ ರೂಪನೇ ಬಸವಣ್ಣ
ಜಗದೋದ್ಧಾರಕ ಬಸವಣ್ಣ ॥ ಅನು ॥

ಕಲ್ಯಾಣ ವಾಸನೆ ಬಸವಣ್ಣ
ಕಾರುಣ್ಯ ಮೂರುತಿ ಬಸವಣ್ಣ
ಕಾಯಕ ಯೋಗಿ ಬಸವಣ್ಣ
ಕೈವಲ್ಯ ದಾತನೇ ಬಸವಣ್ಣ ॥ ೧ ॥

ನಿರ್ಗುಣ ರೂಪನೇ ಬಸವಣ್ಣ
ನಿಷ್ಕಲ ಲಿಂಗನೇ ಬಸವಣ್ಣ
ಅಕಾರ ಉಕಾರ ಮಕಾರ ಮೂಲದ
ಓಂಕಾರ ನೀನೇ ಬಸವಣ್ಣ ॥ ೨ ॥

ಪರಮ ಪ್ರಭುವೇ ನೀ ಬಸವಣ್ಣ
ಪತೀತ ಪಾವನನೇ ಬಸವಣ್ಣ
ಭಕ್ತರ ಪ್ರಾಣನೇ ಬಸವಣ್ಣ
ಭವಭಯ ತಾರಕ ಬಸವಣ್ಣ ॥ ೩ ॥

86. ಜಯಗುರು ಜಯಗುರು ಬಸವೇಶ

ಜಯಗುರು ಜಯಗುರು ಬಸವೇಶ
ಜಯತು ಜಗದ್ಗುರು ಬಸವೇಶ || ಪ ||

ಬಾಗೇವಾಡಿಯ ಭಾಗ್ಯಕರ
ಕಲ್ಯಾಣದ ಕಲ್ಯಾಣಕರ
ಮಾದರಸನ ಮನ ಮಂದಾರ
ಮಾದಲಾಂಬೆಯ ಬಂಗಾರ || ೧ ||

ವೀರಶೈವರ ವರ ಕುವರ
ವೀರ ಧರ್ಮ ಪರಿವರ್ತಕರ
ದೀನರ ಬಾಳಿನ ಸುಧಾಕರ
ಹೀನ ನಿಯಮಕೆ ಬಹುದೂರ || ೨ ||

ವಚನ ರಚನೆಯ ಉಪಕಾರ
ಶರಣ ಸಜ್ಜನ ಓಂಕಾರ
ಅನುಭವ ಮಂಟಪದ ಆಧಾರ
ಜಂಗಮ ಭಕ್ತಿಯ ಭಂಡಾರ || ೩ ||

ಕಾಯಕ ತತ್ವಕೆ ಶ್ರೀಕಾರ
ದಾಸೋಹದ ಶ್ರೀ ಹರಿಕಾರ
ಕೂಡಲಸಂಗನ ಗುಣಧರ
ಅಭಿನವ ಕುಮಾರ ಸುಖಸಾರ || ೪ ||

87. ಬಸವ ಎನಗೊಲಿಯೋ

ಬಸವ ಎನಗೊಲಿಯೋ
ಶ್ರೀಸಂಗನ ಬಸವ ಎನಗೊಲಿಯೋ ||ಪಲ್ಲವಿ||

ಬಸವ ಎನಗೊಲಿ ಶಶಿಮುಖಿ ಗಂಗೆಯು
ತರುಳ ರುದ್ರಾಕ್ಷಿಯ ಕೊರಳೊಳು ಧರಸಿದ ||ಅನು||

ಲೀಲೆಯಿಂದಿಲಿ ಹರುಷ
ಈ ಜಂಗಮಕ್ಕೆ ಮಾಡಿದೆ ಪಂಚ ಪೊರುಷ
ಲೀಲೆ ಕೃಪಾನಿಧಿ ಪಾಲ ವಿಲೋಚನ
ಕಾಲಕಾಲಕೆ ಕರುಣಿಸುವಂತಾ || ೧ ||

ದುರಿತ ದೂರದಾತ
ಮರೆಯದೆ ಕರುಣವಿರಲಿ ತಾತ
ಪರಿಪೂರ್ಣೆಯು ನಿಮ್ಮ ಸ್ಮರಣೆಯ ಮಾಡುವೆ
ಬೇಡಿದ ವರಗಳ ಕೊಡುವಂತಾತನೆ || ೨ ||

ಮಂಡಲಗಿರಿಯೊಳಗೆ
ಈ ಲೋಕಕೆ ಗಂಡನಾದ ಬಸವಾ
ಕಂಡಾಕ್ಷಣಕೆ ವರಗಳ ಕೊಡುವಂತ
ತಂದೆ ಸಡಲ್ಗಿರಿ ರಾಮಲಿಂಗೇಶನ || ೩ ||

88. ಓ...ಬಾರೋ ಬಾರೋ ಬಸವಣ್ಣ

ಓ..... ಬಾರೋ ಬಾರೋ ಬಸವಣ್ಣ
ಸೋಮವಾರ ನಿನ್ನ ಪೂಜೆಯಣ್ಣ
ನಿನ್ನ ಋಣ ಎಂದ ತೀರಿಸಲೋ ನಾನಾ ||ಪಲ್ಲವಿ||

ರೈತನ ಬಾಳಿಗೆ ನೀ ಆಸರಣ್ಣ
ಬಿಸಿಲು ಮಳೆ ಅನ್ನದೆ ದುಡಿದೆ ಬಸವಣ್ಣ
ದಣಿವು ಬ್ಯಾಸರ ನಿನಗಿಲ್ಲವಣ್ಣ
ನಿನ್ನಿಂದ ಭೂಮಿ ಬದಲಾತೋ ಬಣ್ಣ
ಶ್ರಾವಣದ ಸಿರಿ ಸುಖ ನಿಂದೋ ಬಸವಣ್ಣ.....
ಎಷ್ಟು ಮಾಡಿದರೂ ತೀರದು ನಿನ್ನ ವರುಣ
ನೀನೇ ರೈತನ ಪಂಚಪ್ರಾಣ

ನಿನ್ನ ಹೋಗಳಕ ಬಾಯಿ ಸಾಲದಣ್ಣ || ೧ ||
ನಮ್ಮ ಸಲುವಾಗಿ ನಿನ ಜನುಮ ಸಣ್ಣ
ನಿನ್ನ ಹೆಗಲ ಊರಿದ್ಯೆತೋ ಬಸವಣ್ಣ
ಭೂಮಿ ಮ್ಯಾಲ ಧರ್ಮದ ದುಡಿಮೆ ನಿಂದಣ್ಣ
ನಿನ್ನಿಂದ ನಾಡಿನ ಹೊಟ್ಟೆಗೆ ಅನ್ನ
ದುಡಿಯಾಕ ಗಟ್ಯಾಗಿ ನೀ ನಿಂತಿಯಣ್ಣ.......
ಹೊಡಿಯಂತ ಬೆನ್ನ್ಯೋಟ್ಟು ಮುಚ್ಚಿದಿಯೋ ಕಣ್ಣ
ಇದು ಬಾಳಿನ ಬಡದಾಟವಣ್ಣ
ಕ್ಷಮ ಮಾಡೋ ನೀನು ನಮ್ಮನ್ನ || ೨ ||

ತಟ್ಟಿದರು ನಿನ್ನ ಸಗಣಿ ಕುಳ್ಳಾದಿತಣ್ಣ
ಸುಟ್ಟರೆ ಹಣೆಗೆ ನೊಸಲಾಯಿತಣ್ಣ
ಗೋಮಾತೆಗೆ ನೀನು ಮಗನಾದೆಯಣ್ಣ
ನಿನ್ನೆತ್ತ ತಾಯಿ ಹೊಟ್ಟೆ ತನುವಾಗಿರಲಣ್ಣ

ಅಮೃತದ ಅಭಿಷೇಕ ನಿನಗ ಮಾಡಿದರೂ......
ನಮ್ಮಿಂದ ನಿನ್ನ ಋಣ ತೀರದಣ್ಣ
ಇದು ಮನಸಾಕ್ಷಿ ಮಾತು ಬಸವಣ್ಣ
ನೀನೇ ರೈತನ ಪಂಚಪ್ರಾಣ || ೩ ||

89. ಶರಣರಲ್ಲಿ ನೀನೆ ಶರಣಪ್ಪ

ಶರಣರಲ್ಲಿ ನೀನೆ ಶರಣಪ್ಪ
ಕಲಬುರಗಿಯಪ್ಪ ಶರಣರಲ್ಲಿ ನೀನೆ ಶರಣಪ್ಪ.......

ಭಕ್ತಿಯೆಂಬ ಬೀಜವ ಬಿತ್ತಿ ಮರವಾಗಿ ಬೆಳೆದಯಪ್ಪ
ನಿತ್ಯ ದಾಸೋಹವ ಮಾಡಿ ನಿನ್ನ ಜನ್ಮ ಪುಣ್ಯಾವಪ್ಪ
ಶಿವನ ಒಲುಮೆ ಪಡೆದುಬಂದ ನಿನ್ನಜನ್ಮ ಸಾರ್ಥಕವಪ್ಪ

ಮೇಲು-ಕೀಳು ಎಂದನಲಿಲ್ಲ ಜಾತಿ ಮತವ ಎನಿಸಲಿಲ್ಲ
ನಿಂದೆ ಮಾಡಿದ ಮಳ್ಳು ಜನರಿಗೆ ಮಣ್ಣನ್ನು ಮುಕುಸಿದೆಯಪ್ಪ
ಭಕ್ತಿಯೆಂಬ ಮಾರ್ಗವ ಹಿಡಿಸಿ ಮುಕ್ತಿಯನ್ನು ಕೋಟ್ಟೆಯಪ್ಪ

ಸುಶೀಲಮ್ಮ ಭಕ್ತಿಗೆ ಮೆಚ್ಚಿ ಪತಿವ್ರತೆಯ ಉಳಿಸಿದ ತಂದೆ
ಕಲಬುರಗಿಯ ಕರುಣಾಮೂರ್ತಿ ಜಗಕೆಲ್ಲ ಹಬ್ಬಿತು ಕೀರ್ತಿ
ಲಿಂಗದಳ್ಳಿ ನಿಮ್ಮಯ ಕಂದ ಶರಣು ಶರಣು ಮಾಡ್ವೆನು ಎಂದ

90. ಬಾರೋ ಬಾರೋ ಬಾರಯ್ಯ ಕಲಬುರಗಿ ಶರಣ

ಬಾರೋ ಬಾರೋ ಬಾರಯ್ಯ ಕಲಬುರಗಿ ಶರಣ
ಭಜಿಸುವೆನು ನಿನ್ನ ನಾಮಸ್ಮರಣ ನಿನ್ನ ಭಕ್ತರಿಗೆ ತೋರಯ್ಯ ಕರುಣ

ಜಗದ ತುಂಬೆಲ್ಲ ಬಿತ್ತಿದ ಶರಣ
ಧರ್ಮ ದಾಸೋಹವ ನಿನ್ನ ಮಹಿಮಾ
ಶ್ರಾವಣ ಮಾಸದ ಇತಿಹಾಸ ನಿನ್ನ........
ಚರಿತೆ ಕೊಂಡಾಡಿ ಹೊಗಳುವೆವು ಶರಣ
ಜಯಜಯ ಶ್ರೀಶರಣಬಸವ ಓಂ ಜಯಜಯ ಶ್ರೀಶರಣಬಸವ

ಹರಗುರು ಚರಮೂರ್ತಿಗಳ ಸೇವೆ
ನಿತ್ಯ ಸ್ಮರಿಸುವೆ ನೀ ಪುಣ್ಯ ಗುರುವೇ
ದೀನ ದಲಿತ ಅನಾಥ ರಕ್ಷಕನಾಗಿ.......
ಬಡವರ ದೇವರಾಗಿರುವ ಗುರುವೇ
ಜಯಜಯ ಶ್ರೀಶರಣಬಸವ ಓಂ ಜಯಜಯ ಶ್ರೀಶರಣಬಸವ

ಸೇರು ಅಕ್ಕಿಯ ಹಾಕಿ ದಾಸೋಹ ನಡೆಸಿ
ಹುಕ್ಕೇರಿ ಹರಿತ್ಯೈತಿ ಹಾಂಡೇವು ಸೋಸಿ
ಸಾವಿರಾರು ಭಕ್ತರ ಪಂಥಿ ಕುಂದರಿಸಿ........
ಭಕ್ತರಿಗೆ ಉಣಬಡಿಸಿ ತೃಪ್ತಿಯಗೊಳಸಿ
ಜಯಜಯ ಶ್ರೀಶರಣಬಸವ ಓಂ ಜಯಜಯ ಶ್ರೀಶರಣಬಸವ

91. ಕೋಟಿಗೊಬ್ಬ ಶರಣ ಪರಶಿವನ ಹರನ

ಕೋಟಿಗೊಬ್ಬ ಶರಣ ಪರಶಿವನ ಹರನ
ಕಲಬುರಗಿಗೆ ಶ್ರೀ ಶರಣಬಸವನ ಮಾಡೋ ನೀ ಧ್ಯಾನ

ಅರಳಗುಂಡಗಿಯ ಕಂದ ಕಲಬುರ್ಗಿಗೆ ತಾ ಬಂದ
ದೊಡ್ಡಪ್ಪ ಗೌಡರ ಮನೆಯಲ್ಲಿ ಬಂದು
ಶಿವಮತ ಕೀರ್ತಿಯು ಗೈದ
ಶಿವಮತ ಕೀರ್ತಿಯು ಗೈದ ಹರಮತ ಕೀರ್ತಿಯು ಗೈದ

ಅಹಂಭಾವವ ನೀಗಿ ದಾಸೋಂ ಭಾವವೇ ತಾನಾಗಿ
ಇಹಪರಗಳನು ಗೆಲ್ಲಲು ಬಂದ
ಪರಮ ಶಿವಯೋಗಿ
ಪರಮ ಶಿವಯೋಗಿ ಶರಣ ಪರಮ ಶಿವಯೋಗಿ

ಮಕ್ಕಳ ವರದಾತ ಭಕ್ತಿಯ ಮುಕ್ತಿಯ ಸಜ್ಜನಿತ
ಚಿಕ್ಕಮಣ್ಣೂರೇಶನಲ್ಲಿ
ಚೊಕ್ಕ ಶರಣೀತ
ಚೊಕ್ಕ ಶರಣೀತ ಶರಣ ಚೊಕ್ಕ ಶರಣೀತ

92. ಪರಮೇಶ್ವರ ಜಗದೀಶ್ವರ

ಪರಮೇಶ್ವರ ಜಗದೀಶ್ವರ
ಕಲಬುರಗಿ ಶ್ರೀ ಶರಣಬಸವೇಶ್ವರ

ಅರಳಗುಂಡಗಿಯಲ್ಲಿ ನಿನ್ನಯ ಜನನ
ಸಾಲುಕ್ಯ ಮನೆತನಕೆ ನೀನಾದೆ ಕಿರಣ
ನಿತ್ಯವು ಮಾಡುವೆ ಗುರುವಿನ ಸ್ಮರಣ
ಸತ್ಯ ಕಾಯಕ ಜ್ಯೋತಿ ನೀನಾದೆ ಶರಣ

ಕ್ಷಮೆ ದಮೆ ಎರಡತ್ತು ನೇಗಿಲ ಹೂಡಿದೆ
ತನವೆಂಬ ಹೊಲವ ಹಸನಾಗಿ ಮಾಡಿದೆ
ಭವಸಾರ ತಿಳಿಸಲು ಕುಂಟೆಯ ಹೂಡಿದೆ
ಗುರುವೆಂಬ ಬೀಜವನು ಹೊಲದಲ್ಲಿ ಬಿತ್ತಿದೆ

ಸಾವಿರ ಕುಳ್ಳಿಗೆ ಸಂತಾನ ನೀಡಿದೆ
ಅಪಹಾಸ್ಯ ಮಾಡಿದರೆ ನಿನ್ನ ಲೀಲೆ ತೋರಿದೆ
ಜಾತಿ ಹೀನನ ಮನೆಗೆ ಜ್ಯೋತಿ ನೀನಾದೆ
ದೊಡ್ಡಪ್ಪ ಅಪ್ಪಗೊಲಿದು ಶ್ರೀಕ್ಷೇತ್ರ ಮಾಡಿದೆ

93. ಕರುಣಾಳು ಎಡೆಯೂರುವಾಸ ಸಿದ್ದಲಿಂಗೇಶ

ಕರುಣಾಳು ಎಡೆಯೂರುವಾಸ ಸಿದ್ದಲಿಂಗೇಶ
ಪೊರೆಯೋ ನೀ ಪರಮೇಶ ದೇವಾದಿ ದೇವ || ಪ ||

ಭವದಲಿ ಬಂದೆ ಗತಿ ಏನು ಮುಂದೆ

ತವ ಸೇವೆ ಒಂದೇ ಬೇಡುವೆನು ತಂದೆ
ಭಕ್ತಿಯ ಪಥವ ಮುಕ್ತಿಯ ನಿಲುವ
ತೋರಿಸಿ ಅಭವ ಕೃಪೆಯಾಗು ದೇವ || ೧ ||

ವಿರತಿಯ ಭಾನು ವರಶೈವದೇನು
ಪರಶಿವನೆ ನೀನು ಶರಣೆಂದೆ ನಾನು
ಶಿವಮಂತ್ರ ಪ್ರಾಣ ನೀನೆ ಪ್ರಮಾಣ
ತವ ನಾಮಸ್ಮರಣ ಭವತಾಪ ಹರಣ || ೨ ||

ತನು-ಮನ-ಧನವು ನಿನಗೆ ಅರ್ಪಣವು
ಕರುಣೆ ನಿನ್ನೊಲವು ಇರಲೆಮಗೆ ಬಲವು
ಜಗದೇಕ ಗುರುವೇ ಜಗವ ತುಂಬಿರುವೆ
ನೆನೆಸಿದಲ್ಲಿರುವೆ ಓ ಕಲ್ಪತರುವೆ || ೩ ||

94. ಲಿಂಗಯ್ಯ ಮಾತನಾಡೋ

ಲಿಂಗಯ್ಯ ಮಾತನಾಡೋ ತೋಂಟದ
ಸಿದ್ಧಲಿಂಗಯ್ಯ ಮಾತನಾಡೋ || ಪ ||
ಸಂಗಾರ ಶರಣರ ಅಂಗೈಯೊಳಗಿರುವಂತ
ಲಿಂಗಯ್ಯ ಮಾತನಾಡೋ || ಅನು ||

ಹರನೆ ನೀ ಮಾತನಾಡೋ ಅಭವನೆಂಬ
ಸುರನೇ ನೀ ಮಾತನಾಡೋ
ಸುರರ ದೇವರ್ಕಾಳ ಬರಿತದೊಳಗೆ ನೀ
ಮರಿಯಾದೆ ಮಾತನಾಡೋ ತೋಂಟದ ಸಿದ್ಧ || ೧ ||

ಅಕ್ಷಯ ಮಾತನಾಡೋ ಅಭವನೆಂಬ
ಕುಕ್ಷಿಯ ಮಾತನಾಡೋ
ಕುಕ್ಷಿ ಯೊಳಗೆ ತ್ರೈಲೋಕವ ಸಲುವಂತ
ರಕ್ಷಿತಾ ಮಾತನಾಡೋ ತೋಂಟದ ಸಿದ್ಧ || ೨ ||

ಜಂಗಮ ರೂಪಿನಿಂದ ಜಗವ ನೋಡ ಬಂದಂತ
ತಂದೆ ನೀ ಮಾತನಾಡೋ
ಜಂಗುಳಿ ದೈವ ದೊಡೆಯ ತೋಂಟದ ಸಿದ್ಧ
ಲಿಂಗಯ್ಯ ಮಾತನಾಡೋ || ೩ ||

95. ಸರಿಗಮ ಪದನಿಸಾವಿರದ ಶರಣು

ಓಂ ನಮಃ ಪ್ರಣವಾರ್ಥಾಯ (ಓಂ)

ಶುದ್ಧ ಜ್ಞಾನೈಕ ಮೂರ್ತಯೇ (ಓಂ)

ನಿರ್ಮಲಾಯ ಪ್ರಶಾಂತಾಯ (ಓಂ)

ತಸ್ಮೈ ಶ್ರೀ ಗುರವೇ ನಮಃ

ಸರಿಗಮ ಪದನಿಸಾವಿರದ ಶರಣೂ...

ಗಾನ ಯೋಗಿ ಗುರುವೇ... ದೀನ ಕಲ್ಪ ತರುವೆ...

ಸುಪ್ರಭಾತ ನಿನಗೆ (ಸುಪ್ರಭಾತ ನಿನಗೆ) ||ಪಲ್ಲವಿ||

ಪಂಚಮ ಕೋಗಿಲೆ ಪಂಚಾಕ್ಷರಿಗಿವು

ಪದನಿಸ ಪರಿಮಳ ಪುಷ್ಪಗಳು ||

ಮಾತೃ ಮನದ ನಿನ್ನ ಗಾನ ಗುಡಿಯ ತುಂಬ

ರಿಗಮ ಸುಗಮ ದಪಮಗ ರಿಗಮಪ ದಪಮಗ ಹೊನಲು||

ಸ್ವರ ಋಷೀ...ಸ್ವರ ಋಷೀ... ಕಲೆಗಳ ಕಡಲೆ |

ಅಂಧರಾ... ಬದುಕಿನಾ... ಬೆಳಕಿನ ಮುಗಿಲೆ |

ಗಾನ ಯೋಗಿ ಗುರುವೇ... ದೀನ ಕಲ್ಪತರುವೆ...ಸುಪ್ರಭಾತ ನಿನಗೆ | ||
೧ ||

ಪಂಡಿತ ಪಾಮರ ಪ್ರೇಮದ ಸೇತುವೇ

ಪದದಲೇ ಕಟ್ಟಿದ ಜಂಗಮನೇ ||

ದಾನ ಕೇಳುವಾ ದಾನ ನೀಡುವಾ

ಹಾನಗಲ್ಲ ಗುರುಸುತ ಸರಿಗಮಗಳ ಶಿವಯೋಗಿ ||

ಮಣ್ಣಿನಾ... ಹೊನ್ನಿನ್ನಾ ... ಬಣ್ಣವನರಿಯೇ |

ಭೂಮಿಯಾ ಭಾಗ್ಯದ ಪುಣ್ಯದ ಸಿರಿಯೇ |

ಗಾನಯೋಗಿ ಗುರುವೆ... ದೀನ ಕಲ್ಪತರುವೆ....ಸುಪ್ರಭಾತ ನಿನಗೆ | ||
೨ ||

96. ಗದುಗನು ಕೈಲಾಸ ಮಾಡಿದ

ಗದುಗನು ಕೈಲಾಸ ಮಾಡಿದ ಗಾನಯೋಗಿಯ ನಮಿಪೇನು
ಹೃದಯದಲ್ಲಿ ಪಂಚಾಕ್ಷರಿಯ ನಾಮ ಬಿಡದೆ ನಮಿಪೇನು
ನಾಮ ಬಿಡದೆ ನಮಿಪೆನು

ದುಃಖಿಗಳ ಸನಿಹಕ್ಕೆ ಕರೆದು ಶಾಂತಿಯನ್ನೇ ನೀಡಿದ
ಲೆಕ್ಕವಿಲ್ಲದ ಅಂದರಿಗೆ ಸಂಗೀತ ಕಣ್ಣನು ನೀಡಿದ
ಸಂಗೀತ ಕಣ್ಣನು ನೀಡಿದ

ಹಾನಗಲ್ಲ ಕುಮಾರಯೋಗಿಯ ನುಡಿಯ ಬೆಳಗನು ಬೆಳಗಿದ
ಹಾನಿಯಾಗುವ ಮಾನ ಉಳಿಸಿ ಅಂದಮಕ್ಕಳ ಸಲುಹಿದ
ಅಂದಮಕ್ಕಳ ಸಲುಹಿದ

ಪುಟ್ಟರಾಜರ ಕರೆದು ಮಠಕ್ಕೆ ಪಟ್ಟವನ್ನು ನೀಡಿದ
ಪುಟ್ಟರಾಜರ ಗಟ್ಟಿತನವನ್ನು ಮೆಚ್ಚುತಲೆ ತಾ ಸಾಗಿದ
ಮೆಚ್ಚುತಲೆ ತಾ ಸಾಗಿದ

97. ಪುಣ್ಯಕ್ಷೇತ್ರವೋ ಈ ಅಂಕಲಿಮಠವೋ

ಪುಣ್ಯಕ್ಷೇತ್ರವೋ ಈ ಅಂಕಲಿಮಠವೋ
ಶಿವಶರಣರು ನೆಲೆಸಿದ ಈ ಕ್ಷೇತ್ರವು ||ಪ||

ಅಡಿವೇಶನ ಲೀಲಾಮೃತ ನಿತ್ಯ ನೀವು ನೆನೆಯಿರೋ
ನಿರುಪಾದಿಯ ನಾಮವನ್ನು ಬಿಡದಂತೆ ಜಪಿಸಿರೋ
ತಾಯಿ ಪಾರ್ವತಮ್ಮನವರ ದರುಶನವ ಪಡೆಯಿರೋ
ವೀರಭದ್ರಸ್ವಾಮಿ ಯವರ ಸೇವೆಯನ್ನು ಮಾಡಿರೋ

ನೆನೆದವರ ಮನದಲ್ಲಿ ಅಲ್ಲಿಯೇ ದೇವರು
ಬಂದಂತ ಕಷ್ಟ-ನಷ್ಟ ದೂರ ಇವರು ಮಾಡುವವರು
ನಿರುಪಾದಿಯ ನಾಮವನ್ನು ಕೊಂಡಾಡೋಣ ಬನ್ನಿರೋ
ನಿರುಪಾದಿಯ ನಾಮವನ್ನು ಕೊಂಡಾಡೋಣ ಬನ್ನಿರೋ

ಹಲವು ಮಂದಿ ಕೂಡಿಕೊಂಡು ನಿತ್ಯ ಇವರಿಗಾಡಿದರು
ಅವರಲ್ಲಿದ್ದ ಲಿಂಗವೆಲ್ಲ ಮಂಗಮಾಯ ಮಾಡಿದರು
ಶರಣೆಂದು ಬೇಡಿದಾಗ ಮರಳಿ ಲಿಂಗ ನೀಡಿದರು
ಶರಣೆಂದು ಬೇಡಿದಾಗ ಮರಳಿ ಲಿಂಗ ನೀಡಿದರು

98. ಗುರುಬಂದ ಗುರುಬಂದ ಗುರುಬಂದ ಮನೆಗೆ

ಗುರುಬಂದ ಗುರುಬಂದ ಗುರುಬಂದ ಮನೆಗೆ
ಗುರು ಎರ್ರಿತಾತನು ತಾ ಬಂದ ಮನೆಗೆ ॥ ಪ ॥

ಎಂದೂ ಬಾರದ ಗುರು ಇಂದಿಗೆ ಬಂದ
ಆನಂದ ಪದವಿಯು ನಿಮಗಾಗಲೆಂದ ॥ ೧ ॥

ಕುಂಟ ಕುರುಡರಿಗೆ ಕಣ್ಣು ಕಾಲ್ಗಳ ತಂದ
ಬರಡು ಗೋವಿನ ಹಾಲು ಕರೆಯುತ ಬಂದ ॥ ೨ ॥

ರನ್ನದ ಹಾವಿಗೆ ಚಿನ್ನದ ಜೋಳಿಗೆ
ಪನ್ನಂಗಧರ ಶಿವನು ತಾ ಬಂದ ಮನೆಗೆ ॥ ೩ ॥

ನಿರ್ವಾಣ ನಿಜಯೋಗಿ ಸರ್ವಸ್ವ ತ್ಯಾಗಿ
ಕೈಲಾಸದಿಂದಳಿದ ಪರಮ ಶಿವಯೋಗಿ ॥ ೪ ॥

ಸಾಕ್ಷಾತ್ ಶಿವನು ತಾನೇ ಭಿಕ್ಷಕ್ಕೆ ಬಂದ
ಮೋಕ್ಷವ ಕೊಡುವಂತ ಪರಮಾತ್ಮ ಬಂದ ॥ ೫ ॥

ಸುಂದರ ಚೆಳ್ಳಗುರ್ಕಿ ಮಂದಿರವ ಮಾಡಿದ
ನಂಬಿದ ಭಕ್ತರಿಗೊಲಿದ ಎರ್ರಿತಾತ ಬಂದ ॥ ೬ ॥

99. ಹೇಗೆ ಮರೆಯಾಲೋ ತಾತನ

ಹೇಗೆ ಮರೆಯಾಲೋ ತಾತನ
ಹೇಗೆ ಮರೆಯಲೋ ಸದ್ಗುರುವಿನ || ಪ ||
ಭೋಗ ವಿಷಯಗಳನು ತ್ಯಜಿಸಿ
ತ್ಯಾಗವರುಹಿದ ಶ್ರೀಗುರುವೇ ನಿಮ್ಮ ||ಅನು||

ಜ್ಞಾನವೆಂಬೋ ಪರಮಾಮೃತವ
ಪಾನವನ್ನು ಕುಡಿಸಿ ಶರೀರದ
ಮಾನ ಅಭಿಮಾನವನು ಬಿಡಿಸಿ
ಆನಂದದೊಳ್ ಮೈ ಮರೆಸಿದ ಗುರುವಿನ || ೧ ||

ರಾಗ ದ್ವೇಷದ ಗುಣಗಳಲ್ಲ
ನೀಗಿ ನಿರ್ಬೈಲಾದ ಶಿವನ
ಯೋಗವನ್ನು ತಿಳಿಸಿ ಭವದ
ರೋಗವನ್ನು ಕಳೆದ ಶ್ರೀಗುರುವಿನ || ೨ ||

ಮಾರುತ ಮನ ಮಾತುಗಳನ್ನು
ಮೀರಿದಂಥ ಪರಮಾತ್ಮನೊಳು
ಸೇರಿ ಮತ್ತೇ ನರಜನ್ಮಕ್ಕೆ
ಬಾರದಂತೆ ಮಾಡಿದ ಗುರುವಿನ || ೩ ||

ದಾಂತಿಯನ್ನು ಸುಡಿಸಿ ಮಾಯಾ
ಭ್ರಾಂತಿಯನ್ನು ಕೆಡಸಿ ಮುಕ್ತಿ
ಕಾಂತೆಯನಗೆ ಮದುವೆಯ ಮಾಡಿ
ಶಾಂತಿ ಸುಖದೊಳ್ ಸಲುಹಿದ ಗುರುವಿನ || ೪ ||

ಧಾರುಣಿಯೊಳ್ ಚೆಳ್ಳಗುರ್ಕಿ
ಉದ್ಧಾರ ಮಾಡಿದ ಶ್ರೀಎರ್ರಿತಾತ
ಕೋರಿದವರಿಗೆ ಕೊರತೆಯಿಲ್ಲ
ಧೀರ ತಿಕ್ಕಯ್ಯ ಮಗನೇ ಬಲ್ಲ || ೫ ||

100. ಶ್ರೀಗುರುನಾಥ ಯೋಗಿ ಪುನೀತ

ಶ್ರೀಗುರುನಾಥ ಯೋಗಿ ಪುನೀತ
ಬೇಗನೆ ಪಾಲಿಸು ತಾತ ||ಪಲ್ಲವಿ||
ಮಾಯಾತೀತ ಮಂಗಳಭರಿತ
ಮೌನಿಪುಂಗವನೆ ತಾತ ||ಅನು||

ಭವ ಸಾಗರದಲಿ ಬಳಲಲಾರದೆ
ತವಪಾದವ ಸ್ಮರಿಸುವೆ ತಾತ
ಭವ ಬಯಲಾಗುವ ಬಗೆಯನು ತಿಳಿಸಿ
ಜವದಲಿ ಪಾಲಿಸು ಎರ್ರಿತಾತ || ೧ ||

ಧರೆಯೊಳು ಅಧಿಕ ವರಚೆಳ್ಳಗುರ್ಕಿ
ಪುರದೊಳು ಮೇರೆಯುವ ತಾತ
ದುರಿತವನೆಸಗಿ ಪರಿತಪಿಸುತಿಹ
ತರುಳರ ಪಾಲಿಸು ಎರ್ರಿತಾತ || ೨ ||

101. ನೀನೇ ಕಾಪಾಡು ಗುರುರಾಯ

ನೀನೇ ಕಾಪಾಡೋ ಗುರುರಾಯ ನಿಮ್ಮ
ಧ್ಯಾನವು ಮರೆಸುವುದು ಅಜ್ಞಾನದ ಪ್ರಾಯ || ಪ ||

ನೀನು ಕೂಡಿರುವಂಥ ಕಾಯ ಇದ
ನೀನಾಡಿಸಿದಂತೆ ನಾನಾಡುವುದು ನ್ಯಾಯ
ಭಾನುಶತಕೋಟಿ ಸಚ್ಛಾಯ ಬ್ರಹ್ಮ
ಸ್ಥಾನವು ಹೊಂದದು ಮಾನಸಮಾಯ || ೧ ||

ನಾನಾ ಯೋನಿಗಳಲ್ಲಿ ಬಂದೆ ಮತಿ
ಹೀನನಾಗಿ ನಾ ಬಹಳ ನೊಂದೆ
ಜ್ಞಾನವು ತಿಳಿಯದು ಮುಂದೆ ಎನ್ನ
ಮಾನಾಭಿಮಾನವು ನಿನ್ನದು ತಂದೆ || ೨ ||

ಊರಿಗೆ ಹೋಗುತಲಿದ್ದೇ ಅಲ್ಲಿ
ದಾರಿತಪ್ಪಿ ಘೋರಾರಣ್ಯದಿ ಬಿದ್ದೆ
ಯಾರು ದಿಕ್ಕಲ್ಲವೆಂದಿದ್ದೆ ಬಂದು
ದಾರಿಯ ತೋರಿದೆ ಕಾರುಣ್ಯನಿಧಿಯೇ || ೩ ||

ವಾದಭೇದಗಳನ್ನು ಮರೆಸೋ-ಭವ
ಬಾಧೆಗಳನ್ನು ಪರಿಹರಿಸೋ
ಸಾಧು ಸಂಗದೊಳೆನ್ನನಿರಿಸೋ
ಶಿವಪಾದಕಮಲದೊಳೆನ್ನ ಬೆರೆಸೋ || ೪ ||

ಧಾತ್ರಿಯೊಳಗೆ ಚೇಳ್ಳಗುರ್ಕಿ ಪುಣ್ಯ
ಕ್ಷೇತ್ರವು ಗಳಿಸಿದೆ ಎರ್ರಿತಾತನ ಹುಡುಕಿ
ಸ್ತೋತ್ರ ಮಾಡುವುದೆಲ್ಲ ಹರಕೆ ಈ

ಗಾತ್ರವಿರುವ ತನಕ ತೀರದೀ ಬಯಕೆ || ೫ ||

102. ಗುರುರಾಯ ಸದ್ಗುರುರಾಯ

ಗುರುರಾಯ ಸದ್ಗುರುರಾಯ-
ನಿಮ್ಮ ಚರಣವ ನಂಬಿದೆ ಚಿರಕಾಯ || ಪ ||

ಅರಿಯದೆ ಬಂದೆನು ಜನ್ಮಕ್ಕೆ-
ನಾ ಗುರಿಯಾದೆನು ಈ ಕರ್ಮಕ್ಕೆ
ಕರುಣಿಸದಿರುವೆ ಏತಕ್ಕೆ-
ನಾ ಶರಣೆಂದು ನಿಮ್ಮ ಮೊರೆಹೊಕ್ಕೆ || ೧ ||

ಗುಂಭದ ಮೋಸಗಾರರನು –
ಆ ಡಂಭಕ ವೇಷದ ಚೋರರನು
ನಂಬದೆ ಬಂದಿಹೆ ನಿನ್ನೆಡೆಗೆ-
ನಿನ್ನ ಹಂಬಲಹಿಡಿಸಿ ಪೊರೆಯನ್ನ || ೨ ||

ಎಲ್ಲ ಸಾಧುರೊಳಗಾಡಿದೆನು –
ಅವರೆಲ್ಲರ ಚರ್ಯೆಯ ನೋಡಿದೆನು
ಸಲ್ಲದವರ ಬಿಡನಾಡಿದೆನು-
ನಿಜ ಬಲ್ಲಂಥ ಗುರುವಿನ ಕೂಡಿದೆನು || ೩ ||

ಕಡೆಗಾಲಕ್ಕೆ ನೀ ದೊರೆತೆ –
ಎನ್ನ ಕಡೆಯಾಯಿಸು ಕರುಣಾಶರಧಿ
ಪಿಡಿದೆನು ನಿಮ್ಮನ್ನು ದೃಢತರದಿ-ನಾ
ನುಡಿದೆನು ಗುರುನೀ ನುಡಿಸಿದ ತೆರದಿ || ೪ ||

ಕ್ಷಿತಿಯೊಳು ಚೇಳ್ಗುರ್ಕಿ ಪುರವಾಸ-
ನಿಜ ಯತಿಗಳು ಕೂಡವ ಕೈಲಾಸ

ಪ್ರತಿ ಎರ್ರಿತಾತನೇ ಕೊಡುಲೇಸ-
ನಿಜ ಮತಿಯೊಳು ಮರೆಯದೆ ನಿಮ್ಮ ಧ್ಯಾಸ || ೫ ||

103. ನಿನ್ನ ಕಂಡು ಧನ್ಯನಾದೆನೋ

ನಿನ್ನ ಕಂಡು ಧನ್ಯನಾದೆನೋ ದೇವಾದಿದೇವಾ
ನಿನ್ನ ಕಂಡು ಧನ್ಯನಾದೆನೋ ||ಪ||
ನಿನ್ನ ಕಂಡು ಧನ್ಯನಾದೆನು ಪನ್ನಗಭೂಷಣನೆ ಕೇಳು
ಪನ್ನ ಬಡವರಿಗೊನ್ನು ಸಿಕ್ಕಂತೆ
ಇನ್ನೂ ಆಯಿತು ಎನ್ನ ಮನಕೆ.। || ಅನು ||

ಹುಟ್ಟಿ ಬಂದೆನು ಎಷ್ಟು ಜನ್ಮದಲಿ ದೇವಾದಿದೇವ
ಕಟ್ಟಳಿಲ್ಲದೆ ನಾನಾ ಯೋನಿಯಲ್ಲಿ
ಕಟ್ಟಕಡೆಗೆ ದೊರಕಿತೆಮಗೆ ಗಟ್ಟಿಯಾಗಿ ನಿಮ್ಮ ಪಾದ
ಬಟ್ಟಬಯಲು ಆಯ್ತು ಭವವೆಲ್ಲ
ಮುಟ್ಟಿ ಮುಕ್ತಿ ಪದವಿಯನ್ನು || ೧ ||

ಜಡರು ಜಂಜಟ ತೊಡರು ದೂರಾಯ್ತೋ ದೇವಾದಿದೇವ
ಧೃಡವು ನಿನ್ನ ಅಡಿಯ ಸೇರಿತೋ
ಬಿಡದೆಜನರಡಿ ಹಿಡಿದುರಕ್ಷಿಸು ಧೃಡನೆ ಸಡಗರದಿಂದ ಕೇಳು
ಪಡವಿಯೊಳ್ಪಡೆ ತಡೆದು ಮಳೆಯು
ತಡೆದು ತಾನು ಬಂದಂತಾಯ್ತು || ೨ ||

ಘೋರ ಸಂಸಾರೆಂಬ ಸಾಗರದಿ ದೇವಾದಿದೇವ
ಸಾರುಣಿಲ್ಲದೆ ವಿಷಯ ಸುಖದುಃಖದಿ
ಪಾರುಗಾಣಿಸು ವಿಷಯ ಕೊಡದೆ ಮೇರುಪರ್ವತ ಮಂದಿರ ವಾಸನೆ
ಮಾರಹರನೇ ಪೂರ್ವ ಪುಣ್ಯದ

ಧೀರ ಶ್ರೀಗುರು ಬಂಡೆಗುರುವೇ ॥ ೩ ॥

104. ಸಿದ್ಧಾರೂಡ ಸದ್ಗುರು ತಂದೆ ಉದ್ದಾರಾದೆವು ನಿನ್ನಿಂದೆ

ಸಿದ್ಧಾರೂಡ ಸದ್ಗುರು ತಂದೆ ಉದ್ಧಾರಾದವು ನಿನ್ನಿಂದೆ
ಉದ್ಧಾರಾದೆವು ನಿನ್ನಿಂದ ಪಾವನರಾದೆವು ನಿನ್ನಿಂದೆ
ಪಾವನರಾದೆವು ನಿನ್ನಿಂದ ಧನ್ಯರಾದೆವು ನಿನ್ನಿಂದೆ

ಸಿದ್ಧಾರೂಡರ ಅಂಗಾರ : ಜಗತ್ತಿಗೆಲ್ಲಾ ಬಂಗಾರ
ಸಿದ್ಧಾರೂಡರ ಜೋಳಿಗೆ ಜಗತ್ತಿಗೆಲ್ಲಾ ಜೋಳಿಗೆ
ತಾಳ ತಂಬೂರಿ ಕೈಹೊಳಗೆ ತಾತನ ಭಜನೆ ಮನದೊಳಗೆ

ತಾತಾ ಬಂದ ನೋಡು ತಂಗಿ: ಸಾಧು ಬಂದ ನೋಡು ನೋಡು
ಸಾಧು ಸಂಗರ ಆಟ ಚೆಂದ ಮಲ್ಲಿಗೆ ಹೂವಿನ ತೋಟ ಚೆಂದ
ಮಲ್ಲಿಗೆ ಹೂವಿನ ತೋಟ ಚೆಂದ ಮೂರು ಸಾವಿರ ಮಠ ಚೆಂದ

ಶ್ರೀಶೈಲ ಎಂಬುದು ಕೈಲಾಸ ಶ್ರೀ ಮಲ್ಲಿಕಾರ್ಜುನ ಪರಮೇಶ
ಶಿರಿಡಿ ಎಂಬುದು ಕೈಲಾಸ ಶ್ರೀ ಸಾಯಿಬಾಬ ಪರಮೇಶ
ಚೇಳ್ಳಗುರ್ಕಿ ಎಂಬುದು ಕೈಲಾಸ ಶ್ರೀಎರಿತಾತ ಪರಮೇಶ
ಮಂತ್ರಾಲಯ ಎಂಬುದು ಕೈಲಾಸ ಶ್ರೀ ರಾಘವೇಂದ್ರ ಪರಮೇಶ
ಹುಬ್ಬಳ್ಳಿ ಎಂಬುದು ಕೈಲಾಸ ಶ್ರೀ ಸಿದ್ಧಾರೂಡ ಪರಮೇಶ

105. ವಾರ ಬಂತಮ್ಮ ಗುರುವಾರ ಬಂತಮ್ಮ

ವಾರ ಬಂತಮ್ಮ ಗುರುವಾರ ಬಂತಮ್ಮ...
ಗುರುರಾಯರ ನೆನೆಯಮ್ಮ....
ಸ್ಮರಣೆ ಮಾತ್ರದಲಿ ಕ್ಲೇಶಕಳೆದು
ಸದ್ಗತಿಯ ಕೊಡುವನಮ್ಮ || ಪ ||

ಯೋಗಿ ಬರುವನಮ್ಮ
ಶುಭಯೋಗ ಬರುವುದಮ್ಮ
ರಾಘವೇಂದ್ರ ಗುರುರಾಯ ಬಂದು
ಭವ ರೋಗ ಕಳೆವನಮ್ಮ || ೧ ||

ಮನವ ತೊಳೆಯಿರಮ್ಮ
ಭಕ್ತಿಯ ಮಣೆಯ ಹಾಕಿರಮ್ಮ
ಧ್ಯಾನದಿಂದ ಕರೆದಾಗ ಬಂದು
ಒಳಗಣ್ಣ ತೆರೆವನಮ್ಮ || ೨ ||

ಕೋಪ ಅರಿಯನಮ್ಮ
ಯಾರನು ದೂರ ತಳ್ಳನಮ್ಮ
ಪ್ರೀತಿಮಾತಿಗೆ ಸೋತು ಬರುವ
ಮಗುವಂತೆ ಕಾಣಿರಮ್ಮ || ೩ ||

ಹಿಂದೆ ಬರುವನಮ್ಮ ರಾಯರ
ನೆರಳಿನಂತೆ ಹನುಮ
ಹನುಮನಿದ್ದೆಡೆ ರಾಮನಿದ್ದು
ನಿಜ ಮುಕ್ತಿ ಕೊಡುವನಮ್ಮ || ೪ ||

106. ಮಂತ್ರಾಲಯಕೆ ಹೋಗೋಣ

ಮಂತ್ರಾಲಯಕೆ ಹೋಗೋಣ |
ಗುರುರಾಯರ ದರುಶನ ಮಾಡೋಣ |
ತುಂಗಾ ನದಿಯಲಿ ಮೀಯೋಣ |
ಆ.... ಆ .... ಪುರಗಂಗಾ ಸ್ನಾನವೆನ್ನೋಣ
ಮಂಗಳ ಮೂರುತಿ ರಾಘವೇಂದ್ರನ |
ಅಂಘ್ರಿಗಳಿಗೆ ಶರಣಾಗೋಣ. || ೧ ||

ಅನಂತ ಜನುಮವ ಕೇಳೋಣ |
ಆ ಆ ಆ ...... ಅನಂತ ಜನುಮವ ಕೇಳೋಣ
ಆ ಮುಕುತಿಯ ಬೇಡಾ ಎನ್ನೋಣ |
ಜನುಮ ಜನುಮದಲಿ ಚರಣ ಕಮಲದಿ
ಭೃಂಗಗಳಾಗಿ ನಲಿಯೋಣ || ೨ ||

107. ಒಂದು ಸಾರಿ ಬಂದುನೋಡು ಮರೆಯದು ಜೀವ

ಒಂದು ಸಾರಿ ಬಂದುನೋಡು ಮರೆಯದಎನ್ನೋಣ
ಮಂತ್ರಾಲಯ ದರುಷನವೇ ದಿವ್ಯ ಅನುಭವ || ಪ ||

ಪಾಪ ಕಳೆವ ಸುರಗಂಗೆ ಇಲ್ಲಿ ಹರಿಯುವ ತುಂಗೆ
ಪ್ರೇಮ ಭರಿತ ಹೂಬಾಣ ರಾಯರ ಬೃಂದಾವನ || ೧ ||

ಭೂಮಿಯೊಳಗೆ ನಾಟ್ಯವೇ ಮಂತ್ರಾಲಯ ಪ್ರಾಣವೇ
ಇಹಕುಪರಕು ಕಾಣದೆ ಶ್ರೀರಾಘವೇಂದ್ರ ನಾಮವೇ || ೨ ||

ಏಳುನೂರು ವರುಷಗಳು ಗುರುಗಳು ಇಲ್ಲಿರುವರು
ಭಕ್ತಕೋಟಿ ಬೇಡಿಕೆಗಳ ರಾಯರ ಬೃಂದಾವನ || ೩ ||

108. ಎಲ್ಲಿ ನಿನ್ನ ಭಕ್ತರೋ ಅಲ್ಲೇ ಮಂತ್ರಾಲಯ

ಎಲ್ಲಿ ನಿನ್ನ ಭಕ್ತರೋ ಅಲ್ಲೇ ಮಂತ್ರಾಲಯ
ಎಲ್ಲಿ ನಿನ್ನ ನೆನವರೋ ಅಲ್ಲೇ ದೇವಾಲಯ

ಪೂಜೆ ನಡೆವ ಮನೆಗಳೆ ಎಂದು ಪರಮಪಾವನ
ಧ್ಯಾನಗೈದ ಮನಗಳೆ ನಿನ್ನ ಬೃಂದಾವನ

ನಿನ್ನ ಅರಿತ ಹೃದಯವೇ ದೇವನಿರುವ ಮಂದಿರ
ನಿನ್ನ ಬೆರೆವ ಭಾಗ್ಯವೇ ನಿತ್ಯ ಸತ್ಯ ಸುಂದರ

ನಿನ್ನ ಕಾಣುವ ಆಸೆಯೇ ಪೂರ್ವಜನ್ಮ ಪುಣ್ಯವು
ನಿನ್ನ ನಂಬಿ ನಡೆವುದೇ ಬಾಳಿನಲಿ ಭಾಗ್ಯವು

ನಿನ್ನ ನಾಮ ಸ್ಮರಣೆಯೇ ದಿವ್ಯವೇದಾ ಮಂತ್ರವು
ನಿತ್ಯ ನಿನ್ನ ಸೇವೆಯ ಮುಕ್ತಿಮಂತ್ರವು

109. ಸಾವಾಲೊಂದು ನಿನ್ನ ಮ್ಯಾಲ

ಸವಾಲೊಂದು ನಿನ್ನ ಮ್ಯಾಲ ಶಾಹಿರಖೆ ॥
ಸವಾಲೊಂದು ನಿನ್ನ ಮ್ಯಾಲ

ಬಯಲು ಅಲಾವಿಗೆ ನವಿಲು ಕುಣಿದು ನಿಂತು
ತೈಲವಿಲ್ಲದ ಜ್ಯೋತಿ, ತೈಲವಿಲ್ಲದ ಜ್ಯೋತಿ
ಬೆಳಕು ಮದೀನದಿ;

ಬಂಡಿ ಗಾಲಿಯ ಬುಡಕ, ಬೆಂಕಿಯ ಹಚ್ಚಿತ್ತು
ಪುಂಡಯಜೀದನ, ಕುಂಡಿಯ ಉರಿದಿತ್ತು !

ತಾಗುತಿನೋಳಗೊಂದು ತಗಡಿನ ಹಸ್ತವಕಂಡು
ಮೆಹೆಬೂಬ ಶಿಶುನಾಳಧೀಶನೆ ಆಗಿ ಬಂದು ॥

110. ತರವಲ್ಲ ತಗಿ ನಿನ್ನ ತಂಬೂರಿ

ತರವಲ್ಲ ತಗಿ ನಿನ್ನ ತಂಬೂರಿ
ಸ್ವರ ಬರದೆ ಬಾರಿಸದಿರು ತಂಬೂರಿ ||ಪಲ್ಲವಿ||

ಸರಸ ಸಂಗೀತದ ಕುರುಹುಗಳನರಿಯದೆ
ಬರದೆ ಬಾರಿಸದಿರು ತಂಬೂರಿ ||ಅನು||

ಮದ್ದಲಿ ದನಿಯೊಳು ತಂಬೂರಿ ಅದ
ತಿದ್ದಿ ನುಡಿಸಬೇಕು ತಂಬೂರಿ
ಸಿದ್ಧ ಸಾಧಕರ ಸುವಿದ್ಯೆಗೆ ಒದಗುವ
ಬುದ್ಧಿವಂತಗೆ ತಕ್ಕ ತಂಬೂರಿ ||೧||

ಬಾಳ ಬಲ್ಲವರಿಗೆ ತಂಬೂರಿ ದೇವ-
ಬಾಳಾಕ್ಷ ರಚಿಸಿದ ತಂಬೂರಿ
ಹೇಳಲಿ ಏನಿದರ ಹಂಚಿಕೆ ಅರಿಯದ
ತಾಳಗೇಡಿಗೆ ಸಲ್ಲ ತಂಬೂರಿ ||೨||

ಸತ್ಯಶರಧಿಯೊಳು ತಂಬೂರಿ
ಉತ್ತಮರಾಡುವ ತಂಬೂರಿ
ಬತ್ತೀಸರಾಗದಿ ಬಗೆಯನರಿಯದಂಥ
ಕತ್ತೀಗಿನ್ಯಾತಕೆ ತಂಬೂರಿ ||೩||

ಅಸಮ ಸುಮ್ಯಾಳಕ ತಂಬೂರಿ
ಕುಶಲರಿಗೊಪ್ಪುವ ತಂಬೂರಿ
ಶಿಶುನಾಳಾಧೀಶನ ಓದು ಪುರಾಣದಿ
ಹಸನಾಗಿ ಬಾರಿಸೊ ತಂಬೂರಿ ||೪||

111. ಕೋಡಗನ ಕೋಳಿ ನುಂಗಿತ್ತಾ

ಕೋಡಗನ ಕೋಳಿ ನುಂಗಿತ್ತಾ ನೋಡವ್ವ ತಂಗಿ
ಕೋಡಗನ ಕೋಳಿ ನುಂಗಿತ್ತಾ || ಪ ||

ಆಡು ಆನೆಯ ನುಂಗಿ,
ಗೋಡೆ ಸುಣ್ಣಾವ ನುಂಗಿ
ಆಡಲು ಬಂದ ಪಾತರದವಳ
ಮದ್ದಲಿ ನುಂಗಿತ್ತಾ ತಂಗಿ || ೧ ||

ಒಳ್ಳು ಒನಕೆಯ ನುಂಗಿ,
ಕಲ್ಲು ಗೂಟಾವ ನುಂಗಿ
ಮೆಲ್ಲಲು ಬಂದ ಮುದುಕಿಯನ್ನೇ
ನೆಲ್ಲು ನುಂಗಿತ್ತಾ ತಂಗಿ || ೨ ||

ಹಗ್ಗ ಮಗ್ಗಾವ ನುಂಗಿ,
ಮಗ್ಗಾವ ಲಾಲಿ ನುಂಗಿ
ಮಗ್ಗದಾಗಿರುವ ಅಣ್ಣಾನನ್ನೇ
ಮಣಿಯು ನುಂಗಿತ್ತಾ ತಂಗಿ || ೩ ||

ಗುಡ್ಡ ಗವಿಯನ್ನು ನುಂಗಿ,
ಗವಿಯು ಇರುವೇಯ ನುಂಗಿ
ಗೋವಿಂದ ಗುರುವಿನ ಪಾದ
ನನ್ನನೆ ನುಂಗಿತ್ತಾ ತಂಗಿ || ೪ ||

112. ಚನ್ನಪ್ಪ ಚನ್ನಗೌಡ

ಚನ್ನಪ್ಪ ಚನ್ನಗೌಡ | ಕುಂಬಾರ ಮಾಡಿದ ಕೊಡನವ್ವ
ಚಂದಕ ತಂದೇನ ತಂಗಿ | ನೀರಿಗೆ ಬಂದೇನೆ

ಆರು ಮೂರು ಒಂಭತ್ತು | ತೂತಿನ ಕೊಡನವ್ವ
ಚಂದಕ ತಂದೇನ ತಂಗಿ | ನೀರಿಗೆ ಬಂದೇನೆ

ಬಾಳಿಯ ಬನದಾಗ ನಾ | ಹೆಂಗ ಬಾಗಿ ಬರಲೆವ್ವ
ಚೆಂದಕ ತಂದೇನೆ ತಂಗಿ | ನೀರಿಗೆ ಬಂದೇನೆ

ಲಿಂಬಿಯ ವನದಾಗ ನಾ ಹೆಂಗ ನಂಬಿ ಬರಲೆವ್ವ
ಚೆಂದಕ ತಂದೇನೆ ತಂಗಿ | ನೀರಿಗೆ ಬಂದೇನೆ

ದ್ಯಾಮವ್ವನ ಗುಡಿ ಮುಂದ ಒಬ್ಬ ಮುದುಕ ಕುಂತಿದ್ದಾ
ಗಾಂಜಾ ಸೇದತಿದ್ದಾ ಪಟಕಾ ಸುತ್ತಿದ್ದಾ

ಹುಯಿಲಗೋಳ ಕೇರಿಯಾಗ ನೀರು ತರುವಾಗ
ಕಲ್ಲು ತಾಕಿತ ತಂಗಿ ಕೊಡವು ಒಡೆಯಿತ

ಎವ್ವಾ ಇವನ್ಯಾರ ಮಂಚದ ಮ್ಯಾಲ ಮಲಗ್ಯಾನ
ಗೊತ್ತಿಲ್ಲೇನವ್ವಾ ತಂಗಿ ಶಿಶುನಾಳ ಶರೀಫಜ್ಜ

113. ಏನು ಕೊಡ ಏನು ಕೊಡವಾ

ಏನು ಕೊಡ ಏನು ಕೊಡವಾ
ಹುಬ್ಬಳ್ಳಿ ಮಾಟ ಎಂಥ ಚಂದದ ಕೊಡ

ತಿಕ್ಕಿಲ್ಲ ಬೆಳಗಿಲ್ಲ ತಳ ತಳ ಹೊಳಿತದ
ಕಂಚಲ್ಲ ತಾಮ್ರಲ್ಲ ಮಿರಿಮಿರಿ ಮಿಂಚುತದ ||

ಆರು ಮಂದಿ ಅಕ್ಕತಂಗಿ ಮೀರಿ ಮಿಂಚಿದ ಕೊಡ
ಮೂವರು ಮುತ್ತೈದೆಯರು ಲೋಲಾಡಿದ ಕೊಡ

ಶಿವರಾತ್ರಿ ಜಾತ್ರಿಗ್ಹೋಗಿ ಸಿದ್ಧರಾಮನ ದರ್ಶನವಾಗಿ
ಮುಳ್ಳವ್ವ ಬಾಜಾರದಲ್ಲಿ ಬಾಳಿ ಹೋತವ್ವ ಕೊಡ ||

ಆರು ಮಂದಿ ಅಕ್ಕತಂಗಿ ಜತ್ತಿಲೆ ನೀರಿಗೆ ಹೋಗಿ
ಜರ್‍ರಂತ ಜಾರಿಬಿತ್ತು ಸಿಗದೆ ಹೋತವ್ವ ಕೊಡ

ಶಿಶುನಾಳಧೀಶ ತಾನೆ ತಿದ್ದಿ ಮಾಡಿದ ಕೊಡ
ಬುದ್ಧಿವಂತರು ತಿಳಿದು ನೋಡಬೇಕಾದ ಕೊಡ ||

114. ಹುಟ್ಟಿದ್ದು ಹೊಲಮನಿ

ಹುಟ್ಟಿದ್ದು ಹೊಲಮನಿ
ಬಿಟ್ಹೊಂಟ್ಯೋ ಕಾಯ್ಮನಿ
ಎಷ್ಟಿದ್ದರೇನು ಖಾಲಿಮನಿ ||ಪ||

ವಸ್ತಿ ಇರುವ ಮನಿ
ಗಸ್ತಿ ಇರುವ ಮನಿ
ಶಿಸ್ತಿಲೆ ಕಾಣೂವ ಶಿವನ ಮನಿ ||೧||

ಚಿಂತೆ ಕಾಂತೆಯ ಮನಿ
ಸಂತಿ ಸವತಿಯ ಮನಿ
ಅಂತು ಬಲ್ಲವರಿಗೆ ಆಡೂ ಮನಿ ||೨||

ಒಂಭತ್ತು ಬಾಗಿಲ ದಾಟಿ
ಹೊರಟು ಹೋಗುವಾಗ
ಗಂಟಿ ಬಾರಿಸಿದಂತೆ ಗಾಳಿ ಮನಿ ||೩||

ವಸುಧಿಯೊಳಗೆ ನಮ್ಮ
ಶಿಶುನಾಳಧೀಶನ
ಹಸನಾದ ಪದಗಳ ಹಾಡೂ ಮನಿ ||೪||

115. ತಾಯಿ ಸತ್ತಮೇಲೆ ತವರು ಮನೆಗೆ

ತಾಯಿ ಸತ್ತಮೇಲೆ ತವರು ಮನೆಗೆ ನೀ ಹೋಗಬಾರದಮ್ಮ
ನಾಯಿಗಿಂತ ಕಡೆಯಾಯಿತು ನಿನ್ನ ಬಾಳು ದೇಗುಲಮ್ಮ

ಹುಟ್ಟಿದೊಡನೆ ತಾಯಿ ನಿನ್ನ ಮೇಲೆ ಎಷ್ಟು ಪ್ರೀತಿಯಮ್ಮ
ತೊಟ್ಟಿಲೊಳಗೆ ಜೋಗುಳ ಹಾಡುತಾ ನಕ್ಕುನಲಿವಳಮ್ಮ

ಕೊಟ್ಟಮೇಲೆ ನೀನು ಸತ್ತಳೆಂದು ತಿಳಿದತ್ತು ಬಿಟ್ಟಳಮ್ಮ
ತಾಯಿ ನಿನ್ನ ಕಳಿಸಲು ಬಂದು ಕಣ್ಣೀರು ಸುರಿವಳಮ್ಮ

ಬಣ್ಣದ ಮಾತಿಗೆ ಅಣ್ಣನ ಮನೆಗೆ ಓಡಿ ಬಂದೆಯಮ್ಮ
ಅಣ್ಣನ ಹೆಂಡತಿ ನಿನ್ನ ಸೇರದೆ ಕಣ್ಣುಬಿಟ್ಟಳಮ್ಮ

ಇಷ್ಟರೊಳಗೆ ನಿಮ್ಮ ತಾಯಿ ಇದ್ದರೆ ಎಷ್ಟು ಪ್ರೀತಿಯಮ್ಮ
ಹೊಸ್ತಿಲೊಳಗೆ ಕಾಲಿಡುವುದರೊಳಗೆ ಪ್ರೇಮಪಡುವಳಮ್ಮ

ವಸದಿಯೊಳಗೆ ನಮ್ಮ ಶಿಶುನಾಳಧೀಶನ ಪಾದಕೊಂದಿರಮ್ಮ
ಭಕ್ತಿಯಿಂದ ಮುತ್ತೈದೆಯರಾಗಿ ನಿತ್ಯ ಬಾಳಿರಮ್ಮ

116. ಸುಮ್ಮನಿರಬೇಕು ಶರಣಾದ ಮೇಲೆ

ಸುಮ್ಮನಿರಬೇಕು ಶರಣಾದ ಮೇಲೆ
ಸುಮ್ಮನಿರಬೇಕು ಶಿವನಾದ ಮೇಲೆ

ಗುರುಕರುಣೆ ಮೊದಲು ಆಗಿರಬೇಕು
ಗುರುವಿನ ಕೀಲೊಂದು ತಿಳಿದಿರಬೇಕು
ಒಳಗೂ ಹೊರಗೂ ಒಂದಿರಬೇಕು
ನಿತ್ಯದಿ ಅನುಭಾವ ಸಾಧಿಸಬೇಕು

ಕಣ್ಣಿನೊಳಗೆ ಕಣ್ಣು ಕಂಡಿರಬೇಕು
ಕಣ್ಣಿನ ನೆಲೆಕಲೆ ತಿಳಿದಿರಬೇಕು
ಒಳಗೂ ಹೊರಗೂ ಒಂದಿರಬೇಕು
ನಿತ್ಯದಿ ಅನುಭಾವ ಸಾಧಿಸಬೇಕು

ತನು ಮನದನವೆಲ್ಲ ಅಳಿದಿರಬೇಕು
ತನುವಿನ ಭಂಡಾರ ತಿಳಿದಿರಬೇಕು
ಹುಣ್ಣಿಮೆ ಚಂದ್ರನಂತೆ ಉದಯಿಸಿರಬೇಕು
ಶಿಶುನಾಳಧೀಶನ ಕೂಡಿರಬೇಕು

117. ಊರಮುಂದಿನ ಬಾವಿ

ಊರಮುಂದಿನ ಬಾವಿ ಯಾರ ತೋಡಿದರೇನ
ಕಾಲು ಜಾರಿದರೆ ಕೈಲಾಸ
ಕಾಲು ಜಾರಿದರೆ ಕೈಲಾಸ ನಾರಿಯರ
ಮನವ ಜಾರಿದರೆ ವನವಾಸ ||ಪಲ್ಲವಿ||

ತನ್ನಂಗ ತಾನಿಲ್ಲ ಭಿನ್ನಿಲ್ಲ ಭೇದಿಲ್ಲ
ತನ್ನಂಗ ಮಗಳಂಗ ನೋಡಿದರೆ
ತನ್ನಂಗ ಮಗಳಂಗ ನೋಡಿದರೆ ಕೈಲಾಸ
ಕಣ್ಣ ಮುಂದಾದ ಕೈಲಾಸ || ೧ ||

ಕರಿಸೀರೆ ಉಡಬ್ಯಾಡ ಕಡಿವಾಣ ಬಿಡಬ್ಯಾಡ
ತಲೆಯ ಮ್ಯಾಲಿನ ಶರಗ ತಗಿಬೇಡ
ತಲೆಯ ಮ್ಯಾಲಿನ ಶರಗ ತಗಿಬೇಡ ಮಗಳೇ
ತಲೆಬಾಗಿ ನಿಂತು ಅಳಬೇಡ || ೨ ||

ಬಂಗಾರದ ಬಳೆತೊಟ್ಟು ಬಡವರನ ಬೈಯಾಬೇಡ
ಬಂಗಾರ ನಿನಗೇಕೆ ತರವಲ್ಲ
ಬಂಗಾರ ನಿನಗೇಕೆ ತರವಲ್ಲ ಮಗಳೇ
ಮಧ್ಯಾಹ್ನದ ಬಿಸಿಲು ಸ್ಥಿರವಲ್ಲ || ೩ ||

ಅತ್ತಿಯ ಮನಿಯಾಗ ಮುತ್ತಾಗಿ ಇರಬೇಕು
ಒತ್ತಾಗಿ ನೀಡಿದರೆ ಉಣಬೇಕ
ಒತ್ತಾಗಿ ನೀಡಿದರೆ ಉಣಬೇಕ ಮಗಳೇ
ಹೆತ್ತವರ ಹೆಸರ ತರಬೇಕ || ೪ ||

ಗಂಡನ ಮನಿಯಾಗ ಭೇದಭಾವ ಮಾಡಬೇಡ
ಅಣ್ಣ-ತಮ್ಮರ ಬಂದ ಮುರಿಬೇಡ
ಅಣ್ಣ-ತಮ್ಮರ ಬಂದ ಮರಿಬೇಡ ಮಗಳೇ
ತುಂಬಿದ ಮನೆಯ ಒಡಿಬೇಡ || ೫ ||

ಹೆಣ್ಣಿನ ಬಾಳು ಹಣ್ಣಿನ ಹೊಳು
ಕೈಯಲ್ಲಿ ಜಾರಿದರೆ ಮಣ್ಣಿನ ದೂಳು
ಕೈಯಲ್ಲಿ ಜಾರಿದರೆ ಮಣ್ಣಿನ ದೂಳು
ಹೆಣ್ಣೆ ನಿನ್ನ ಬಾಳು ಬರಿ ಗೋಳು || ೬ ||

ಚಾಡಿ ಹೇಳುವ ಮಂದಿ ಜಗದೊಳಗ ತುಂಬ್ಯಾರ
ಯಾರ ಮಾತನು ನೀನು ಕೇಳಬೇಡ
ಯಾರ ಮಾತನು ನೀನು ಕೇಳಬೇಡ ಮಗಳೇ
ತಂದೆ ಗುರುಮಹಾಂತ ಮರಿಬೇಡ || ೭ ||

118. ಒಲ್ಲೆನಮ್ಮ ನಾನು ಗಂಡನ್ನ

ಒಲ್ಲೆನಮ್ಮ ನಾನು ಗಂಡನ್ನ ಎನ್ನಡೆದ ತಾಯಿ
ಒಲ್ಲೆನಮ್ಮ ನಾನು ಗಂಡನ್ನ
ಗಂಡ ಎಂದರೆ ಎನ್ನಯ ಜೀವ ಕೆಂಡದಂತೆ ತೋರುವದಮ್ಮ
ಉಂಡುಉಟ್ಟಾ ಓಣಿಯೊಳಗೆ ಒಳ್ಳೆ ಗುರುವಿನ ಕಂಡೆನಮ್ಮ

ಆರು ಮೂರು ಮಂದಿ ಕೂಡಿದರು ಒಂಬತ್ತು ಮಂದಿ
ಎನ್ನ ಹಿಡಿದು ನಿಶ್ಚಯಮಾಡಿದರೂ ....
ನಾರಿಕೈಯಿಗೆ ಕಂಕಣಕಟ್ಟಿ ಹಣೆಯ ಮೇಲೆ ಕುಂಕುಮ ಧರಸಿ
ಆ ಕುಂಕುಮ ಹೋದಮೇಲೆ ರೆಂಡೆಯಾಗಿ ಕುಳಿತೆನಮ್ಮ

ಹತ್ತು ಎಂಟು ಮಂದಿ ಕುಡಿದರು ಹದಿನೆಂಟು ಮಂದಿ
ಎನ್ನ ಹಿಡಿದು ಲಗ್ನವ ಮಾಡಿದರೂ.....
ಒಬ್ಬ ಗಂಡಗ ಭಾಷೆಯ ಕೊಟ್ಟು ಒಬ್ಬ ಗಂಡಗ ಸುಳಿಕಲಾಗಿ
ಉಳಿದ ಗಂಡನ ಮುರಿದು ಇಟ್ಟು ಸ್ವರ್ಗದಾರಿ ಹಿಡಿದೆನಮ್ಮ

ಆರು ಮೂರು ಮಕ್ಕಳ ನಡದೇನು ತನ್ನೊಳಗೆ ಇಟ್ಟು
ನುಣ್ಣಗೆ ಸಂಸಾರ ಮಾಡಿದ್ದೇನೆ......
ಚಿಕ್ಕ ಪ್ರಾಯದ ಹೆಣ್ಣು ನಾನು ಉಟ್ಟ ಸೀರೆ ಉಡುವಳಲ್ಲ
ಸಿಟ್ಟಿಗೆರೆ ಚಿದಾನಂದನ ಪಾದ ಗಟ್ಟಿಯಾಗಿ ಹಿಡಿದೆನಮ್ಮ

119. ತಾಯಿ ನಿನ್ನ ಉಪಕಾರವನು

ತಾಯಿ ನಿನ್ನ ಉಪಕಾರವನು ಮರೆಯಲೆಂದು ನಾನು
ನಿನ್ನ ಮೋಹ ಮಮತೆಗಳನು ಬಣ್ಣಿಸುವುದು ಸಾಧ್ಯವೇನು ||ಪ||

ಪೂರ್ವಜನ್ಮ ಪುಣ್ಯವಮ್ಮ ನೀನು ನನ್ನ ಹಡದೆಯಮ್ಮ ||ಅನು||

ಒಂಬತ್ತು ತಿಂಗಳಲ್ಲಿ ಒಡಲ ಭಾರತಾಪದಲ್ಲಿ
ನೊಂದುಬೆಂದು ಬಳಲುತ ನೀನು ಪಡೆದೆ ನನ್ನ ಜನ್ಮವನ್ನು
ನಾನು ಹುಟ್ಟುವಾಗ ನಿನ್ನ ಕಷ್ಟವೇಷ್ಟು ತಾಯಮ್ಮ
ನಿನ್ನ ಜನ್ಮದೊಂದಿಗೆ ನನ್ನ ಪುನರ್ಜನ್ಮವಾಯಿತಮ್ಮ
ಮತ್ತೆ ಹುಟ್ಟಿ ಬಂದೆನಮ್ಮ ||೧||

ಬಾಣಂತಿ ನಿನ್ನಜನ್ಮ ರಕ್ತನಿಧಿಯೇ ಆಯಿತಮ್ಮ
ಆ ನಿನ್ನ ನೋವು ನಲಿವು ಲೋಕದಲ್ಲಿ ಯಾರಿಗಮ್ಮ
ಮಾಂಸ ಮುದ್ದೆಯಾದ ನನ್ನ ತಿದ್ದಿತೀಡಿ ಬೆಳಸಿದೆಯಮ್ಮ
ಕರುಣೆ ತೂಗೋ ತೊಟ್ಟಿಲದಲ್ಲಿ ಜೋಗುಳವ ಹಾಡಿದೆಯಮ್ಮ
ಹಾಡಿ ಮೈಮರೆತೆಯಮ್ಮ ||೨||

ಅಳುವ ಧ್ವನಿಯು ಕೇಳಿದೊಡನೆ ಅವಸರಾಗಿ ಬಂದೆಯಮ್ಮ
ಎತ್ತಿ ಎದೆಗೆ ಅವಚಿಕೊಂಡು ಅಮೃತವ ಕುಡಿದೆಯಮ್ಮ
ರೋಗರುಜಿನ ಬಾರದಂತೆ ನೋಡಿಕೊಂಡು ಹೋದೆಯಮ್ಮ
ನನ್ನ ಪ್ರಾಣ ನೀನೆ ಎಂದು ನಿತ್ಯಕಾಲ ಕಳೆದೆಯಮ್ಮ
ಜೋಪಾನ ಕಾಯ್ದೆಯಮ್ಮ ||೩||

ದೃಷ್ಟಿದೋಷ ಬಾರದಂತೆ ರಕ್ಷಬಂಧ ಕಟ್ಟಿದೆಯಮ್ಮ
ಕಪ್ಪುಚುಕ್ಕೆ ಕೆನ್ನೆಗಿಟ್ಟು ಜೇನು ಮುತ್ತು ಕೊಟ್ಟೆಯಮ್ಮ
ಆಡಿ ದಣಿದು ಬಂದ ನನ್ನ ಅಂಗಾಲ ತೊಳೆದೇಯಮ್ಮ
ಹಸಿದ ಬಾಯಿಗೆ ಅನ್ನವಕವಚವಾಯಿತಮ್ಮ ಪಡೆದೆಯಮ್ಮ
ಅನ್ನಪೂರ್ಣೆಯಾದೆಯಮ್ಮ ||೪||

ಬಾಲಲೀಲೆ ನೋಡಿ ನಿನ್ನ ಕರುಣೆ ಕಣ್ಣು ತುಂಬಿತಮ್ಮ
ನಿನ್ನ ಹೃದಯ ಪೂರ್ಣಶಕ್ತಿ ನನ್ನ ಬಾಳ್ವೆಗಿತ್ತೆಯಮ್ಮ
ನನ್ನ ವಿದ್ಯೆ ಬುದ್ಧಿಗಳಿಗೆ ಮೊದಲ ಗುರುವು ಆದೆಯಮ್ಮ
ನಿನ್ನ ಶುದ್ಧಪ್ರೀತಿ ಕವಚವಾಯಿತಮ್ಮ ಕವಚವಾಯಿತಮ್ಮ
ನಿನ್ನ ಹರಕೆ ದೊಡ್ಡದಮ್ಮ ||೫||

ಲೋಕ ಪೂಜ್ಯರಾದರೇನು ನಿನ್ನ ಸ್ಮರಣೆ ಮಾಡಲಮ್ಮ
ವೇದಶಾಸ್ತ್ರ ಅರಿತರೇನು ನಿನ್ನ ಮರೆಯಬಾರದಮ್ಮ
ಎತ್ತ ಋಣ ತೀರಿಸಲು ಎಷ್ಟು ಜನ್ಮ ಸಾಲದಮ್ಮ
ಭೂಮಿಗಿಂತ ಹೆಚ್ಚು ತೂಕ ಹೆಚ್ಚು ನೋಡೆ ತಾಯಮ್ಮ
ಮುದ್ದು ಬಸವನೇ ಸಾಕ್ಷಿಯಮ್ಮ

120. ತಂದೆ ತಾಯಿ ದೇವರೆಂದು

ತಂದೆ ತಾಯಿ ದೇವರೆಂದು
ನಂಬಿ ಪಾದಪೂಜೆಯ ಮಾಡೊ ॥ ಪ ॥
ನೀತಿ ತಪ್ಪಿನಡೆದರೆ ಮನುಜ
ನರಕ ತಪ್ಪದಯ್ಯಾ ಸಹಜ ॥ ಅನು ॥

ಉದಯಲೆದ್ದು ಮುಖವ ತೊಳೆದು
ಸದಾ ಮುದದಿ ಭಸ್ಮವ ಧರಿಸಿ
ಮದನ ವೈರಿ ಧ್ಯಾನವ ಮಾಡಿ
ಮಾತಾಪಿತರ ಪಾದಕೆ ನಮಿಸು ॥ ೧ ॥

ಖೇದಗೊಂಡು ಬೈದರೆ ಜನರು
ವಾದ ಮಾಡಬೇಡ ಮನುಜ
ವಾದಖ್ವಾದ ಬೇಳೆದು ನಿನ್ನ
ಹಾದಿ ತಪ್ಪಿಸುವರು ಜನರು ॥ ೨ ॥

ಹೆತ್ತವರ ಕೀರ್ತಿಯ ಗಳಿಸೊ
ಉತ್ತಮರ ಮಗನೆಂದೆನಿಸೊ
ಸತ್ಯವಾದ ಕೀರ್ತಿಯ ಗಳಿಸೊ
ನಿತ್ಯ ವೀರಭದ್ರನ ಭಜಿಸೊ ॥ ೩ ॥

121. ಎಲ್ಲರೂ ಕೇಳಿರಿ ಜನರೋ ನಿಜ

ಎಲ್ಲರೂ ಕೇಳಿರಿ ಜನರೋ ನಿಜ
ಜ್ಞಾನ ಬಲ್ಲಂತ ಪಂಡಿತರೋ
ಎಲ್ಲಿ ನೋಡಲು ಮೃತ್ಯು ಎಡಬಿಡದಿರುವುದು
ಕಡುಕಷ್ಟ ಪಡುತಾರೋ ನರರೋ
ನಾಯಿ ನರಿಗಳಂತೆ ತಿರುಗುವುರೋ

ಕುಣಿದಾಡಿ ಕಟ್ಟಿಸಿದೆ ಹೊಸ ಮನೆಯೋ
ಮಗನ ಮದುವೆಗೆ ಗಳಿಸಿದ ಹಣವೋ
ಮರಣವು ಬಂದಿತು ಮರಳು ನಿನಗಿಡಿದಿತು
ಪಾಯಣವಾದಲ್ಲೋ ಪ್ರಾಣಿ
ಮಗನ ಮದುವೆಯ ಮಾಡೋದು ಕಾಣೆ

ಊರು ನನ್ನದು ಎಂದು ಉರಿದಿ
ನೀನು ಸೇರುವೆ ಸುಡುಗಾಡು ಜವದಿ
ನಾರಿ ಮಕ್ಕಳ ಮೋಹ ಮೂರು ದಿನದ ಸಂತೆ
ಆತ್ಮನ ಕಾಣದೆ ಕುಂತಿ
ಅದನ್ನ ಕೇಳುವರಾರಿಲ್ಲವಂತೆ

122. ಊರಿಗೆ ಹೋಗೋಣ ಬಾರಣ್ಣ

ಊರಿಗೆ ಹೋಗೋಣ ಬಾರಣ್ಣ
ಮತ್ತು ಯಾರಗೊಡುವೆ ನಮಗ್ಯಾಕಣ್ಣ ||ಪ||

ಎಣ್ಣೆ ಪ್ರಣತಿ ಬತ್ತಿ ಜ್ಯೋತೆಣ್ಣ
ಜ್ಯೋತಿ ಇರುವ ತನಕ ಮನೆ ರೀತೆಣ್ಣ
ಎಣ್ಣೆಯು ಆಗಿಹೊಯ್ತು ಬತ್ತಿಯು ಸುಟ್ಟುಹೊಯ್ತು
ಪ್ರಣತಿ ನೆಲಕೆ ಬಿದ್ದುಹೋಯ್ತಣ್ಣ. ||೧||

ಮೂರು ಆರು ದಿನ ಸಂತೆಣ್ಣ
ಸಂತೆ ಇರುವತನಕ ಬಲು ಚಿಂತೆಣ್ಣ
ಸಂತೆಯು ಆಗಿಹೊಯ್ತು ಚಿಂತೆ ಬಗೆರ್ದುಹೊಯ್ತು
ಶಾಂತಿ ಮಲ್ಲೇಶ್ವರಗೆ ಶರಣಣ್ಣ ||೨||

ಘೋರ ಪಾಪಗಳು ದೂರ ಮಾಡಿಕೊಂಡು
ಯಾರಿಗೆ ಸಿಗದಂತೆ ನಡೆಯಣ್ಣ
ಶಾಂತಿಯಿಂದ ಕೂಡಿಕೊಂಡು ಸಂಸಾರ ಮಾಡಿಕೊಂಡು
ಕೈಲಾಸವಾಸ ನೆನೆಯಣ್ಣ ||೩||

123. ಮನೆಯೇ ಗುಡಿಯಮ್ಮ

ಮನೆಯೇ ಗುಡಿಯಮ್ಮ ಪತಿಯೇ ದೇವರಮ್ಮ
ದೇವರ ಮುಂದೆ ಕಿರುನಗೆಯೆಂಬ ಜ್ಯೋತಿಯ ಬೆಳಗಮ್ಮಾ ..
।। ಪ ।।

ಸೇವೆಯೇ ನಿನ್ನ ಉಸಿರಾಗಿರಲಿ
ತ್ಯಾಗವೇ ಬಾಳಿನ ಪಲ್ಲವಿಯಾಗಲಿ
ಈ ಸಂಸಾರವು ಸುಖ ಸಾಗರವು
ಎನಿಸುವ ಭಾಗ್ಯವು ನಿನದಾಗಿರಲಿ ..... ।। ೧ ।।

ಹಾಡುವ ಕೊರಳು ಕೋಗಿಲೆದಾಯಿತು
ನೋಡುವ ಅಂದ ನವಿಲಿನದಾಯಿತು
ಯಾರಿಗೆ ಏನನು ಕೊಡವನು
ಅದನೇ ಹರುಷದಿ ಸ್ವೀಕರಿಸಮ್ಮ ..... ।। ೨ ।।

124. ಯಾಕೆ ಬಡಿದಾಡ್ತಿ ತಮ್ಮ ಮಾಯಾ ಮೆಚ್ಚಿ

ಯಾಕೆ ಬಡಿದಾಡ್ತಿ ತಮ್ಮ
ಮಾಯಾ ಮೆಚ್ಚಿ ಸಂಸಾರ ನೆಚ್ಚಿ ||
ನೀ ಹೋಗೊದರಿಯೇ ತಮ್ಮ
ಕಣ್ಣ ಮುಚ್ಚಿ ಮಣ್ಣ ಮುಚ್ಚಿ ||

ಹೆಂಡ್ರು ಮಕ್ಕಿರುವರು ತಮ್ಮ ಎಲ್ಲಿ ತನಕ ||
ಇದ್ರೆ ತಿಂಬೋ ತನಕ ||
ಸತ್ತಾಗ ಬರುವರು ತಮ್ಮ ಗುಳಿ ತನಕ ||
ಮಣ್ಣು ಮುಚ್ಚೋ ತನಕ ಮಣ್ಣು ಮುಚ್ಚೋ ತನಕ |

ಅಣ್ಣ ತಮ್ಮ ಅಕ್ಕ ತಂಗಿ ಎಲ್ಲೀ ತನಕ ||
ಬದುಕೀ ಬೆಳೆಯೋ ತನಕ ||
ಸತ್ತಾಗ ಬರುವರು ತಮ್ಮ ಗುಳಿ ತನಕ ||
ಮಣ್ಣು ಮುಚ್ಚೋ ತನಕ |

ಹೆಣ್ಣು ಹೊನ್ನು ಮಣ್ಣು ನಿನ್ನದು ಎಲ್ಲೀ ತನಕ||
ನಿನ್ನ ಕೊರಳಿಗೆ ಕುಣಿಕೆ ಬೀಳೋ ತನಕ||
ನಿನ್ನಾಸೆ ಪ್ರಾಣಪಕ್ಷಿ ಹಾರೋತನಕ ||
ಕಳಚಯ್ಯ ಮಾಯದ ಪೊರೆಯ ಮುಕ್ತಿ ಹೊಂದಾಕ |

125. ಹಣೆಯ ಮೇಲೆ ಕುಂಕುಮ

ಹಣೆಯ ಮೇಲೆ ಕುಂಕುಮ ಹೆಣ್ಣಿಗೆ ಭೂಷಣ
ತಿಳಿಯಲಾರದ ಹೆಣ್ಣಿನ ಹಾಳಾಯ್ತು ಜೀವನ
ಹಾಳಾಯ್ತು ಜೀವನ

ಒಡಲಲ್ಲಿ ಮಗಳಿರಬೇಕು ಸೊಗಸಾದ ಹೆಸರಿರಬೇಕು
ಮೂಗಿನಾಗ ಮುಗಿತಿರಬೇಕ ಕೈಯ ಬಳೆ ಜಣಜಣ
ಕೈಬಳೆ ಜಣಜಣ

ಬಂಗಾರ ಯಾತಕಬೇಕಾ ಮಾಂಗಲ್ಯ ಭಾಗ್ಯವೇ ಸಾಕ
ಕೊನೆಯತನಕ ಹೆಣ್ಣಿಗೆ ಅದುವೇ ಭೂಷಣ
ಅದುವೇ ಭೂಷಣ

ಪತಿಸೇವೆ ಮಾಡಿರಬೇಕು ಪತ್ನಿಯಾಗಿ ಪಾಲಿಸಬೇಕು
ಕೊನೆಯತನಕ ಹೆಣ್ಣಿಗೆ ಅದೇ ಒಂದು ಭೂಷಣ
ಅದೇ ಒಂದು ಭೂಷಣ

ವಸತಿಯೊಳಗೆ ನಮ್ಮ ಇಟಗಿಯ ಗ್ರಾಮದಲ್ಲಿ
ಭೀಮಾಂಬಿಕೆ ಹೇಳಿದ ಮಾತು ಅದು ಒಂದು ಭಾಷಣ
ಅದು ಒಂದು ಭಾಷಣ

126. ಯಾಕ ಚಿಂತಿ ಮಾಡತಿದ್ದಿ ಎಲೆ ಮನವೇ

ಯಾಕ ಚಿಂತಿ ಮಾಡತಿದ್ದಿ ಎಲೆ ಮನವೇ
ನಿನಗೆ ಯಾವತರ ಸುಖವಿಲ್ಲ ಎಲೆ ಮನವೇ ॥ ಪ ॥
ಲೋಕನಾಥನ ಧ್ಯಾನವ ಮಾಡಿ
ಸಾರ್ಥಕ ಮಾಡಿಕೊಳ್ಳೋ ಎಲೆ ಮನವೇ ॥ಅನು॥

ಕಳ್ಳತನ ಮಾಡಬಾರದು ಎಲೆ ಮನವೇ
ನೀನು ಸುಳ್ಳುತನ ಹೇಳಬಾರದು ಎಲೆ ಮನವೇ
ಬಲ್ಲಂತ ಜ್ಞಾನಿಗಳು ಬಲ್ಲಷ್ಟು ಹೇಳಿದರೆ
ಅಲ್ಲಂತ ಅನ್ನಬಾರದು ಎಲೆ ಮನವೇ ॥ ೧ ॥

ಯಾರಿಗೆ ಯಾರು ಇಲ್ಲ ಎಲೆ ಮನವೇ
ಇದು ಮೂರುದಿನದ ಸಂತೆ ಎಲೆ ಮನವೇ
ಸೇರಿದವರ ಮುಂದೆ ಜಾರಿ ಬಿದ್ದಂತೆ
ಪಾರಾಗಿ ಹೋಗಬೇಕು ಎಲೆ ಮನವೇ ॥ ೨ ॥

ಆಸೆ ಅಳಿಯಬೇಕು ಎಲೆ ಮನವೇ
ಇದು ಹೆಸಿಗೆ ಸಂಸಾರ ಎಲೆ ಮನವೇ
ದೇಶದೊಳಗೆ ನಮ್ಮ ಗುಡ್ಡದ ಮಹಾಂತನ
ಧ್ಯಾಸವ ಮರಿಬೇಡ ಎಲೆ ಮನವೇ ॥ ೩ ॥

127. ಸುಖವು ದೇವರ ಲೀಲೆ

ಕಷ್ಟ ಸುಖವು ದೇವರ ಲೀಲೆ
ಹುಟ್ಟಿದ ಮ್ಯಾಲೆ ಮರಗುವುವು

ತಾಯಿಯ ಗರ್ಭದಿ ಹೊರಬಂದ ಬಳಿಕ
ಪ್ರೀತಿಯ ಕವಚವ ತೊಡಿಸಿದವರ್ಯಾರು
ದೇವರ ನುಡಿಯನು ಹಿತದಿ ಕೇಳಿ
ಸೋತು ಸೊರಗಿದೆ ಸುಖಯೋಗಿ

ತಂದೆ ತಾಯಿ ಬಂಧು ಬಳಗ
ನಿನ್ನಿಂದೆ ಯಾರು ಬರಲಾರರು
ಮುಂದೆ ಮಾದೇವನೆ ಎತ್ತಿ ಕಾಪಾಡುವನೆ
ಸೋತು ಸೊರಗಿದೆ ಸುಖಯೋಗಿ

ಸುಖವೆಂಬುದು ದಣಿವಾಗಿ ದುಃಖ ಸಾಗರವಾಗಿ
ಜೀವನ ತುಂಬೆಲ್ಲ ವ್ಯಾಪಿಸಲಿ
ಗುರು ವೀರೇಶನ ಧ್ಯಾನವ ಮಾಡಿ
ಸೋತು ಸೊರಗಿದೆ ಸುಖಯೋಗಿ

128. ತಂಗಿ ಶೃಂಗಾರ ನೋಡಮ್ಮ

ತಂಗಿ ಶೃಂಗಾರ ನೋಡಮ್ಮ
ಈ ತೇರಿನ ಮಾನಭಂಗವು ಕಣಮ್ಮ
ಈ ದೇಹದ ಆಸೆ ಬಿಟ್ಟುಬಿಡಮ್ಮ

ತೇರು ಸುತ್ತ ಗೊಂಬೆ ನೋಡಮ್ಮ
ಈ ಗೊಂಬೆಯ ಅಂತರಂಗಾವು ಕಣಮ್ಮ
ಈ ತೇರಿನ ಮಾನಭಂಗವು ಕಣಮ್ಮ

ದುರಳ ಜನರ ಪುರಕೆ ಬರುವರು
ಈ ತೇರಿನ ಮಾನವನ್ನು ಕಳೆಯುವರು
ಈ ಮಾಯೆಯ ಮಾನವನ್ನು ಕಳೆಯುವರು

ಶ್ರೀಶೈಲ ಶ್ರೀಶೈಲ ವಾಸಳಾಗಮ್ಮ
ಮಲ್ಲಯ್ಯನ ಭಕ್ತಿಯಲ್ಲಿ ಸಜ್ಜಳಾಗಮ್ಮ
ಮಲ್ಲಯ್ಯನ ಭಕ್ತಿಯಲ್ಲಿ ಸಜ್ಜಳಾಗಮ್ಮ

129. ಒಕ್ಕಲ ಮಗ ಒಳ್ಳೆತನಮ್ಮ

ಒಕ್ಕಲ ಮಗ ಒಳ್ಳೆತನಮ್ಮ
ಈತ ಮುಕ್ಕಣ್ಣ ಶಿವನೆಂದು ತಿಳುಕೊಳ್ಳಿರಮ್ಮ

ನಾನೆಂಬ ಅಹಂಕಾರದ ಕಠಿಣದ ಭೂಮಿಗೆ
ತಾನೊಂದು ನೇಗಿಲ ಹೂಡಿದನಮ್ಮ
ಹೀನ ಸಂಶಯವೆಂಬ ಗಿಡಗಳು ಬೆಳೆದಿರಲು

ಜ್ಞಾನದ ಕೊಡಲಿಲಿ ಕಡಿದ ನೋಡಮ್ಮ

ಭೋಗ ಸದ್ಗುರು ಮಂತ್ರ ಕುಂಟೆಯ ನವರಿಸಿ
ಆದಿಕುಂಡಲಿ ಹಗ್ಗ ಬಿಗಿದ ನೋಡಮ್ಮ
ಸಾಧನ ಚತುಷ್ಟವೆಂಬ ನಾಲ್ಕೇತ್ತುಗಳನೂಡಿ
ಮೋದದಿ ತನುವೆಂಬ ಹೊಲ ಹರಗಿದನಮ್ಮ

ತಾರಕ ಬ್ರಹ್ಮವೆಂಬ ಕೂರಿಗೆ ಬಿಂದಿಲಿ
ಮೂರು ಮೂರ್ತಿಗಳ ತಾಳ ಇಟ್ಟನಮ್ಮ
ಮೀರಿದ ಸುಶೂನ್ಯ ಇಡ ಪಿಂಗಳ ಕೊರವಿ
ಅರವಿನೊಳುದ್ಭಾವಿ ಮಂಡಿ ಬಿಗಿದಾನಮ್ಮ

ಉತ್ಪತ್ತಿ ಸ್ಥಿತಿ ಲಯದ ಸಾಲುಗಳನು ಒತ್ತಿ
ತತ್ತ್ವಮಸಿವೆಂಬ ಬೀಜಗಳ ಹೂಡಿ
ಮತ್ತೆ ಪೂರ್ವದಿಂದ ಪಶ್ಚಿಮದವರೆಗೆ
ಅತ್ಯಾಧಿಕವಾದ ಬೆಳೆ ಬೆಳೆದಾನಮ್ಮ

ನಾಲ್ಕು ಕಾರಣಂಗಳ ಮಂಚಿಗೆ ಹಾಕಿ
ಆಕಾರ ನಿರಾಕಾರ ಕವಣಿಯ ಬೀಸಿ
ಕಾತು ಗುಣಗಳೆಂಬ ಹಕ್ಕಿಗಳನು ಒಡೆದು
ಶೋಕಿನಿಂದಲಿ ಹೊಲ ಕಾಯ್ದ ನೋಡಮ್ಮ

ಬಾಲಚಂದ್ರನೆಂಬೋ ಕುಡುಗೋಲು ಹಿಡಿದು
ಸ್ಥೂಲಸೂಕ್ಷ್ಮದ ಕಟ್ಟು ಕೊಯ್ದ ನೋಡಮ್ಮ
ಮಯತ್ರಯಗಳೆಂಬ ಸೂಡುಗಳನು ಕಟ್ಟಿ
ಮೇಲ್ಮನೆ ಮಧ್ಯದಿ ಬಣವಿ ಹೊಡ್ಡಿದನಮ್ಮ

ಮುಕ್ತಿ ಮಂದಿರದಲ್ಲಿ ರಾಶಿಯ ಮಾಡಿ

ಯುಕ್ತಿಲಿ ಒಟ್ಟನು ತೂರಿದನಮ್ಮ

ಭಕ್ತಿಭಾವವೆಂಬ ಬಟ್ಟದಡಿಗೆಯ ಮಾಡಿ

ಮುಕ್ತ ಕೂಡಲೂರೀಶ ಉಣಸಿದನಮ್ಮ

ಮಂಗಳಾರತಿ ಪದಗಳು

130. ಮಂಗಳಂ ಮಹೇಶ ಈಶ ಭಂಗ ಸುಮಶರಾ

ಮಂಗಳಂ ಮಹೇಶ ಈಶ ಭಂಗ ಸುಮಶರಾ ।
ಲಿಂಗ ಶರಣ ಸಂಗ ಶ್ರೀಕುರಂಗ ವರದರಾ।

ಕಲುಶಿ ರಹಿತ ಕರಾಣಿಕಾಲ ನಿಲಯ ಸುಂದರಾ।
ಸುಲಲಿತಾಂಗ ಸುಜನ ರಕ್ಷ ಕಲಿತ ಬಂಧುರಾ।

ಭದ್ರಗಣ ಸಮುದ್ರ ರುದ್ರ ಆದ್ರಿ ಜಾವರಾ ।
ಕ್ಷುದ್ರ ದೈತ್ಯ ತೀಕ್ಷ ವೀರಭದ್ರ ಪಿತವರಾ ।

ಯಕ್ಷಗಣ ಸುಪಕ್ಷ ಲಕ್ಷಣಾಂಕನೇ ।
ಕುಕ್ಷಿ ಅಖಿಲ ಭುವನ ವಿರೂಪಾಕ್ಷ ಭೂಂಕನೇ ।

131. ಜ್ಯೋತಿ ಬೆಳಗುತಿದೆ

ಜ್ಯೋತಿ ಬೆಳಗುತಿದೆ ವಿಮಲ ಪರಂಜ್ಯೋತಿ ಬೆಳಗುತಿದೆ
ಮಾತು ಮನಂಗಳಿಂದತ್ತತ್ತ ಮೀರಿದ
ಸಾದತಿಶಯದ ನಿರುಪಾಧಿಕ ನಿರ್ಮಲ
ಜ್ಯೋತಿ ಬೆಳಗುತಿದೆ ವಿಮಲ ಪರಂಜ್ಯೋತಿ ಬೆಳಗುತಿದೆ

ಶಿವಧರ್ಮನಾಳವೆಂತೆಂಬ ಕಂಬದ ಮೇಲೆ
ಸುವಿವೇಕ ಹೃದಯಾಬ್ಜ ಪಣತೆಯೊಳು
ಸವೆಯದ ಸದ್ಭಕ್ತಿ ರಸತೈಲ ತೀವಿದ
ಪ್ರವಿಮಲ ಕಳೆಯೆಂಬ ಬತ್ತಿವಿಡಿದು ದಿವ್ಯ
ಜ್ಯೋತಿ ಬೆಳಗುತಿದೆ ವಿಮಲ ಪರಂಜ್ಯೋತಿ ಬೆಳಗುತಿದೆ

ಮುಸುಕಿದ ವಿಷಯ ಪತಂಗ ಬಿದ್ದುರುಳೆ ತಾ
ಮಸಬುದ್ಧಿಯೆಂಬ ಕತ್ತಲೆಯಳಿಯೆ
ಮಸಗಿ ಸುಜ್ಞಾನವೆಂತೆಂಬ ಮಹಾಪ್ರಭೆ
ಪಸರಿಸಿ ಮಾಯಾಕಾಳಿಕೆ ಪೊರ್ದದನುಪಮ
ಜ್ಯೋತಿ ಬೆಳಗುತಿದೆ ವಿಮಲ ಪರಂಜ್ಯೋತಿ ಬೆಳಗುತಿದೆ

ಪ್ರಣವಾಕಾರದ ಗುಣ ಮೂರು ಮುಟ್ಟದ
ಗಣನೆಗತೀತಾರ್ಥವೆನೆ ತೋರುವ
ಅಣುಮಾತ್ರ ಚಲನೆಯಿಲ್ಲದ ಮೋಕ್ಷ ಚಿಂತಾ
ಮಣಿಯೆನಿಸುವ ಶಂಭುಲಿಂಗವೆ ತಾನಾದ
ಜ್ಯೋತಿ ಬೆಳಗುತಿದೆ ವಿಮಲ ಪರಂಜ್ಯೋತಿ ಬೆಳಗುತಿದೆ

132. ಓಂ ಮಂಗಳಂ ಓಂಕಾರ ಮಂಗಳಂ

ಓಂ ಮಂಗಳಂ ಓಂಕಾರ ಮಂಗಳಂ
ಓಂ ನಮಃ ಶಿವಾಯ ಮಂಗಳಂ
ನಮಃ ಶಿವಾಯ ಮಂಗಳಂ

ನ ಮಂಗಳಂ ನಕಾರ ಮಂಗಳಂ
ನಾದ ಬಿಂದು ಕಳಾತೀತ ಗುರುವೇ ಮಂಗಳಂ
ಸದ್ಗುರುವೆ ಮಂಗಳಂ

ಮ ಮಂಗಳಂ ಮಕಾರ ಮಂಗಳಂ
ಮಹಾದೇವ ತಾನೆಯಾದ ಗುರುವೇ ಮಂಗಳಂ
ಸದ್ಗುರುವೆ ಮಂಗಳಂ

ಶಿ ಮಂಗಳಂ ಶಿಕಾರ ಮಂಗಳಂ
ಸಿದ್ಧಿ ಬುದ್ಧಿ ತಾನೆಯಾದ ಗುರುವೇ ಮಂಗಳಂ
ಸದ್ಗುರುವೆ ಮಂಗಳಂ

ವ ಮಂಗಳಂ ವಕಾರ ಮಂಗಳಂ
ವಳಗು ಹೊರಗೆ ತಾನೇ ಇರುವ ಗುರುವೇ ಮಂಗಳಂ
ಸದ್ಗುರುವೆ ಮಂಗಳಂ

ಯ ಮಂಗಳಂ ಯಕಾರ ಮಂಗಳಂ
ಯಲ್ಲವಸ್ತು ತಾನೇ ಆದ ಗುರುವೇ ಮಂಗಳಂ
ಸದ್ಗುರುವೇ ಮಂಗಳಂ

133. ಶಿವ ಮಂಗಳವನು ಕೊಡಬೇಗ

ಶಿವ ಮಂಗಳವನು ಕೊಡಬೇಗ
ಭಾವ ದುಃಖದಿ ಬಳಲುವೆ ನಾನೀಗ
ಭೂವಿಗವತರಿಸಿದ ಕಾರಣವ
ಜವದೊಳು ನೆನೆಯುತ್ತ ಗುರುದೇವ ||ಪಲ್ಲವಿ||

ಮನುಜ ಜನ್ಮವನು ತೊಟ್ಟಿಹೆವು
ಘನಮಹಿಮರ ಪಥವ ಬಿಟ್ಟಿಹೆವು
ಮನದಿ ಹೀನಗುಣ ತೊಡಗಿದೆವು
ಮುನಿ ವಂದನೆ ನಮಿಸುತ್ತಿಹೆವು || ೧ ||

ಹುಟ್ಟಿ ಹುಟ್ಟಿ ಸಾಯ್ವದು ನೋಡಿ
ಕಷ್ಟತರದ ಬಹು ಚೇರಿತಾಡಿ
ದುಷ್ಟರೆನಸಿಕೊಂಬದು ನೋಡಿ
ಶಿಷ್ಟನೆ ನೀನತಿ ದಯಗೂಡಿ || ೨ ||

ಇದ್ದಗುಣಗಳನೆಲ್ಲವ ಮರೆಸಿ
ಶುದ್ಧ ಗುಣಾದಿ ಮನವಿರಿಸಿ
ಸಿದ್ಧರಾಮ ಗುರು ದಯಕರಸಿ
ತಿದ್ದುವುದುವತಿ ಮುದವರಸಿ || ೩ ||

134. ಜಯವೆಂದು ಬೆಳಗುವೆ ಮಲ್ಲಿಕಾರ್ಜುನನೇ

ಜಯವೆಂದು ಬೆಳಗುವೆ ಮಲ್ಲಿಕಾರ್ಜುನನೇ
ಮಲ್ಲಿಕಾರ್ಜುನೇ ಭಕ್ತ ಮಂದಿರ ||ಪ||

ಸಾಗರದೊಳಗಿನ ವಿಷವ ಕುಡಿದವನೇ
ಭೋಗ ಕಂಕಣನಾಗಿ ಜಿಗಿದು ಮೆರೆದವನೇ ||೧||

ಸಿರಿಯಾಳ ಸುತನ ಮಾಂಸವ ಬೇಡಿದವನೇ
ಶರಣೆ ನೆಂಬಕ್ಕನ ಭಕ್ತಿಗೊಲಿದವನೇ ||೨||

ಕುರಿಯ ಹಿಕ್ಕೆಯೊಳು ಲಿಂಗ ಕಂಡವನೇ
ಸರಿ ನಿನಗಾರು ಶ್ರೀಗಿರಿ ವಲ್ಲಭನೇ ||೩||

135. ಜ್ಞಾನ ಪೂರ್ಣಂ ಜಾಗಂ ಜ್ಯೋತಿ|

ಜ್ಞಾನ ಪೂರ್ಣಂ ಜಾಗಂ ಜ್ಯೋತಿ|
ನಿರ್ಮಲವಾದ ಮನವೆ ಕರ್ಪೂರದಾರತಿ|
ಅನುದಿನ ಗುರುವಿನ ಅನುರಾಗ ಭಕ್ತಿಯಲಿ|
ಜನನ ಮರಣ ರಹಿತ ಜಂಗಮಕೆ ಬೆಳಗಿರೋ|

ನಾ ನೀನೆಂಬುದು ಬಿಡಿರಿ ನರಕವೆ ಪ್ರಾಪ್ತಿ
ಜ್ಞಾನಿಗಳೊಡನಾಡಿರಿ|
ಸ್ವಾನುಭಾವದ ಸುಖ ತಾನೇ ಕೈ ಸೇರುವದು|
ಅನುವಿಸಿದ ಲಿಂಗಕ್ಕೆ ಮನವಪ್ಪಿಸಿ ಬೆಳಗಿರೋ|

ನಾನಾ ಜನ್ಮದ ಕತ್ತಲೆ ಕಳೆದುಳಿದು|
ಮೇಲೆ ಮಾನವನ ಜನ್ಮದ ಬೆಳಕಿನಲಿ|

ಹೀನಾ ವಿಷಯದಾಸೆ ಹಿಂದುಳಿಸಿದ|
ಗುರುವಿನ ಪಾದವೇ ಗತಿಯೆಂದು ಮನವಪ್ಪಿಸಿ ಬೆಳಗಿರೋ|

ಅಷ್ಟವರ್ಣದ ಸ್ಥೂಲವು|
ಮಾನವ ಜನ್ಮಹುಟ್ಟಿ ಬರುವದೇ ದುರ್ಲಭವು|
ಕೊಟ್ಟಾನು ಗುರು ಎಮಗೆ ಮಾಡಿದ ಫಲದಿಂದ|
ಹುಟ್ಟಿದ ಮಗನ ಹೆಸರು ಶಿವನೆಂದು ಕರೆಯಿರೋ|

137. ಮಂಗಲಂ ಜಯ ಜಯತೆ

ಮಂಗಲಂ ಜಯ ಜಯತೆ
ಮಹಿಷನ ಭಂಗೀಸಿದ ಮಾತೆ
ಗಂಗೋತು ಮಂಗಲಂ ತಿಂಗಳ
ಸೂಡಿನಾರ್ಧಾಂಗಿ ಮಂಗಲಂ ಜಯತೆ

ಮಧುರ ವಚನದಿಂದೆ
ಭಕ್ತರ ಹೃದಯದೊಳಗೆ ನಿಂದೆ
ಕದನಾದೊಳ್ ಎದುರಿಟ್ಟ ಮಧುಕೈಟಭರ ಕೊಂದ
ಚತುರೆ ನಿನಗೆ ಎದುರೆ

ಕುಂಭ ಕುಚದ ನಾರಿ
ನೂತನ ಕಂಬು ಕಂದರಿ ಸುಂದರಿ
ಶುಂಭಾನಿಶುಂಭಾರ ಕೊಂಬಿನಿ ಹುರಳಿಸಿದ
ಅಂಬು ಜನನಿ ಭವಾನಿ

ಕ್ಷೋಣಿಯೊಳ್ ಸಂತೆಕೂಡಲೂರೇಶನ
ಮಾಡಾದಿಂ ನಿಂತೆ ಗಢ
ತ್ರಾಣಾದಿಂ ಕೋಣಾನ ಪ್ರಾಣಾವಳಿದ
ಪರಿಪೂರ್ಣವಿರಲಿ ಕರುಣಾ

138. ಲಿಂಗಾಷ್ಟಕಂ

ಬ್ರಹ್ಮ ಮುರಾರಿ ಸುರಾರ್ಚಿತ ಲಿಂಗಂ,
ನಿರ್ಮಲಭಾಸಿತ ಶೊಭಿತ ಲಿಂಗಂ |
ಜನ್ಮಜದುಃಖ ವಿನಾಶಕ ಲಿಂಗಂ,
ತತ್ಪ್ರಣಮಾಮಿ ಸದಾ ಶಿವಲಿಂಗಂ || ೧ ||

ದೇವಮುನಿ ಪ್ರವರಾರ್ಚಿತ ಲಿಂಗಂ,
ಕಾಮದಹನ ಕರುಣಾಕರ ಲಿಂಗಂ |
ರಾವಣದರ್ಪ ವಿನಾಶಕ ಲಿಂಗಂ,
ತತ್ಪ್ರಣಮಾಮಿ ಸದಾ ಶಿವಲಿಂಗಂ || ೨ ||

ಸರ್ವಸುಗಂಧ ಸುಲೇಪಿತ ಲಿಂಗಂ
ಬುದ್ಧಿವಿವರ್ಧನ ಕಾರಣ ಲಿಂಗಂ |
ಸಿದ್ಧಸುರಾಸುರ ವಂದಿತ ಲಿಂಗಂ
ತತ್ಪ್ರಣಮಾಮಿ ಸದಾ ಶಿವಲಿಂಗಂ || ೩ ||

ಕನಕಮಹಾಮಣಿ ಭೂಷಿತ ಲಿಂಗಂ
ಫಣಿಪತಿವೇಷ್ಟಿತ ಶೋಭಿತ ಲಿಂಗಂ |
ದಕ್ಷಕುಯಜ್ಞ ವಿನಾಶಕ ಲಿಂಗಂ
ತತ್ಪ್ರಣಮಾಮಿ ಸದಾ ಶಿವಲಿಂಗಂ || ೪ ||

ಕುಂಕುಮ ಚಂದನಲೇಪಿತ ಲಿಂಗಂ,
ಪಂಕಜಹಾರ ಸುಶೋಭಿತ ಲಿಂಗಂ |
ಸಂಚಿತಪಾಪ ವಿನಾಶನ ಲಿಂಗಂ
ತತ್ಪ್ರಣಮಾಮಿ ಸದಾ ಶಿವಲಿಂಗಂ || ೫ ||

ದೇವಗಣಾರ್ಚಿತ ಸೇವಿತ ಲಿಂಗಂ,
ಭಾವೈಭಕ್ತಿ ಭಿರೇವ ಚ ಲಿಂಗಂ |
ದಿನಕರಕೋಟಿ ಪ್ರಭಾಕರ ಲಿಂಗಂ,
ತತ್ಪ್ರಣಮಾಮಿ ಸದಾ ಶಿವಲಿಂಗಂ || ೬ ||

ಅಷ್ಟದಳೋ ಪರಿವೇಷ್ಟಿತ ಲಿಂಗಂ
ಸರ್ವಸಮುದ್ಭವ ಕಾರಣ ಲಿಂಗಂ |
ಅಷ್ಟದರಿದ್ರ ವಿನಾಶಕ ಲಿಂಗಂ
ತತ್ಪ್ರಣಮಾಮಿ ಸದಾ ಶಿವಲಿಂಗಂ || ೭ ||

ಸುರವರ ಸುರಗುರು ಪೂಜಿತ ಲಿಂಗಂ
ಸುರವನಪುಷ್ಪ ಸದಾರ್ಚಿತ ಲಿಂಗಂ |
ಪರಾತ್ಪರಂ ಪರಮಾತ್ಮಕ ಲಿಂಗಂ
ತತ್ಪ್ರಣಮಾಮಿ ಸದಾ ಶಿವಲಿಂಗಂ || ೮ ||

ಲಿಂಗಾಷ್ಟಕಮಿದಂ ಪುಣ್ಯಂ ಯಃ ಪಠೇಚ್ಛಿವಸನ್ನಿಧೌ |
ಶಿವಲೋಕಮವಾಪ್ನೋತಿ ಶಿವೇನ ಸಹಮೊದತೆ ||